ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 1 ಶುಕ್ರವಾರ 2022


ಸಂಪುಟ: 43 | ಸಂಚಿಕೆ: 76 | ಪುಟಗಳು: 10

43

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ತಾಯಿ ಚಾಮುಂಡೇಶ್ವರಿ ಸನ್ನಿಧಿಯಲ್ಲಿ ಮೊದಲ ಆಷಾಢ ಪೂಜೆ

● ಮೈಸೂರು ಜಿಲ್ಲಾಡಳಿತದಿಂದ ಸಕಲ ಸಿದ್ಧತೆ ● ಕೊರೊನಾದಿಂದ ಎರಡು ವರ್ಷ ದಕ್ಕದ ದರ್ಶನ ಭಾಗ್ಯ ● ಸುರಕ್ಷತಾ ಕ್ರಮದೊಂದಿಗೆ ಭಕ್ತರಿಗೆ ತಾಯಿ ಆರಾಧನೆಗೆ ಅವಕಾಶ ● ಲಲಿತ ಮಹಲ್ ಹೋಟೆಲ್ ಬಳಿ ಮೈದಾನದಿಂದ ಉಚಿತ ಬಸ್

ಮೈಸೂರು,ಜೂ.30(ಎಂಟಿವೈ)–ನಾಡದೇವತೆ ಶ್ರೀ ಚಾಮುಂಡೇಶ್ವರಿ ಸನ್ನಿಧಿಯಲ್ಲಿ ಆಷಾಢ ಮಾಸದ ಮೊದಲ ಶುಕ್ರವಾರದ ವಿಶೇಷ ಪೂಜಾ ಕೈಂಕರ್ಯಕ್ಕೆ ಸರ್ವ ಸಿದ್ಧತೆಯಾಗಿದ್ದು, 2 ವರ್ಷಗಳ ನಂತರ ತಾಯಿ ದರ್ಶನಕ್ಕೆ ಭಕ್ತ ಸಮೂಹ ಕಾತುರವಾಗಿದೆ.

ಶುಕ್ರವಾರ ಮುಂಜಾನೆ 3.30ಕ್ಕೆ ಆಷಾಢಮಾಸದ ವಿಶೇಷ ಪೂಜೆ ಆರಂಭವಾಗಲಿದ್ದು, ವಿಶೇಷ ಲಕ್ಷ್ಮೀ ಅಲಂಕಾರದ ಚಾಮುಂಡೇಶ್ವರಿ ದೇವಿಯನ್ನು ಮಹಾನ್ಯಾಸಕ ಪೂರ್ವಕ ರುದ್ರಾಭಿಷೇಕ, ಪಂಚಾಮೃತ ಅಭಿಷೇಕ ಇತ್ಯಾದಿ ಕೈಂಕರ್ಯಗಳೊಂದಿಗೆ ಪೂಜಿಸಲಾಗುತ್ತದೆ. ಪೂಜೆಯ ಬಳಿಕ ಬೆಳಗ್ಗೆ 5.30ರಿಂದ ರಾತ್ರಿ 9.30ರವರೆಗೂ ಭಕ್ತರು ದೇವಿಯ ದರ್ಶನ ಪಡೆಯಬಹುದು. ಕೊರೊನಾ ಕಾರಣದಿಂದ ಕಳೆದ 2 ವರ್ಷ ಭಕ್ತರಿಗೆ ದರ್ಶನ ನಿರ್ಬಂಧಿಸಲಾಗಿತ್ತು. ಎಂದಿನಂತೆ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಗಿತ್ತಾದರೂ ವಿಜೃಂಭಣೆ ಇರಲಿಲ್ಲ. ಆದರೆ ಈ ಬಾರಿ ಚಾಮುಂಡಿ ಬೆಟ್ಟದಲ್ಲಿ ಆಷಾಢದ ಹಬ್ಬ ಕಳೆಗಟ್ಟಿದ್ದು, ವಿಶೇಷ ದಿನಗಳಲ್ಲಿ ತಾಯಿಯ ದರ್ಶನ ಪಡೆಯಲು ಲಕ್ಷಾಂತರ ಜನ ಸೇರುವ ಸಾಧ್ಯತೆ ಇದೆ.

ಸೂಕ್ತ ವ್ಯವಸ್ಥೆ: ಆಷಾಢ ಶುಕ್ರವಾರಗಳು ಹಾಗೂ ವರ್ಧಂತ್ಯೋತ್ಸವ ದಿನ ಖಾಸಗಿ ವಾಹನಗಳನ್ನು ನಿರ್ಬಂಧಿಸಲಾಗಿದ್ದು, ಲಲಿತಮಹಲ್ ಹೋಟೆಲ್ ಬಳಿಯಿಂದ ▶ 6ನೇ ಪುಟಕ್ಕೆ

ಲಸಿಕೆ ಇಲ್ಲವೇ ರಿಪೋರ್ಟ್

“ ಕೊರೊನಾ ಮುನ್ನೆಚ್ಚರಿಕೆಯಿಂದ 2 ಡೋಸ್ ಲಸಿಕೆ ಪಡೆದವರು ಅಥವಾ 72 ಗಂಟೆ ಮುಂಚಿನ ಕೋವಿಡ್ ನೆಗೆಟಿವ್ ರಿಪೋರ್ಟ್ ಹೊಂದಿರುವವರಿಗೆ ಮಾತ್ರ ಈ ವಿಶೇಷ ದಿನಗಳಲ್ಲಿ ದೇವರ ದರ್ಶನಕ್ಕೆ ಅವಕಾಶವಿರಲಿದೆ ಎಂದು ಜಿಲ್ಲಾಡಳಿತ ಸ್ಪಷ್ಟಪಡಿಸಿದೆ. ಮಾಸ್ಕ್ ಬಗ್ಗೆ ಯಾವುದೇ ಅಧಿಕೃತ ಆದೇಶ ಲಭ್ಯವಾಗಿಲ್ಲವಾದರೂ ಮಾಸ್ಕ್ ಧರಿಸುವುದು ಒಳ್ಳೆಯದು. ಚಾಮುಂಡಿಬೆಟ್ಟದ ಗ್ರಾ.ಪಂ ವತಿಯಿಂದ ಗುರುವಾರ ಸಂಜೆ ಮಹಿಷಾಸುರ ಪ್ರತಿಮೆ, ಬಸ್ ನಿಲ್ದಾಣ, ಪಾರ್ಕಿಂಗ್ ಸ್ಥಳ, ಪ್ರಸಾದ ವಿನಿಯೋಗಿಸುವ ಸ್ಥಳ ಹಾಗೂ ದೇವಾಲಯದ ಸುತ್ತಲೂ ಸ್ಯಾನಿಟೈಸ್ ಮಾಡಲಾಗಿದೆ. ರಸ್ತೆ ಬದಿ ಬ್ಲೀಚಿಂಗ್ ಪೌಡರ್ ಹಾಕಲಾಗಿದ್ದು, ಸೋಂಕು ಹರಡುವಿಕೆ ತಡೆಗೆ ಎಲ್ಲಾ ರೀತಿಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಾಗಿದೆ. –ಕೆ.ಭರತ್ ಕಾಳಯ್ಯ, ಗ್ರಾ.ಪಂ ಅಧ್ಯಕ್ಷ




ಹೈಕೋರ್ಟ್ ಹಂಗಾಮಿ ಮುಖ್ಯ ನ್ಯಾಯಮೂರ್ತಿಯಾಗಿ ಅಲೋಕ್ ಆರಾಧೆ ನೇಮಕ



ಬೆಂಗಳೂರು: ಕರ್ನಾಟಕ ಹೈಕೋರ್ಟ್ ಹಂಗಾಮಿ ಮುಖ್ಯ ನ್ಯಾಯಮೂರ್ತಿಯಾಗಿ ಅಲೋಕ್ ಆರಾಧೆ ಅವರನ್ನು ನೇಮಕ ಮಾಡಲಾಗಿದೆ. ಜು.2 ರಂದು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ಅವರು ನಿವೃತ್ತರಾಗುತ್ತಿರುವ ಹಿನ್ನೆಲೆಯಲ್ಲಿ ನ್ಯಾಯಮೂರ್ತಿ ಅಲೋಕ್ ಆರಾಧೆ ಅವರನ್ನು ಕರ್ನಾಟಕ ಹೈಕೋರ್ಟ್‌ನ ಹಂಗಾಮಿ ಮುಖ್ಯ ನ್ಯಾಯಮೂರ್ತಿಯಾಗಿ ಗುರುವಾರ ನೇಮಕ ಮಾಡಲಾಗಿದೆ. ಈ ಕುರಿತು ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಟ್ವೀಟ್ ಮಾಡಿದ್ದಾರೆ.

ವಿಧಾನಸಭೆ ಚುನಾವಣೆಗೆ ಮುನ್ನ ಮೇಕೆದಾಟು ಯೋಜನೆ ಪ್ರಾರಂಭ

ಶತಸಿದ್ಧ



■ ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಖಚಿತ ನುಡಿ ■ ಕೇಂದ್ರದಿಂದ ಪರೋಕ್ಷ ಸಹಕಾರ ■ ಜುಲೈ 6, 7ರಂದು ಕಾವೇರಿ ನೀರು ಪ್ರಾಧಿಕಾರ ಸಭೆಯಲ್ಲಿ ಚರ್ಚೆ



ಬೆಂಗಳೂರು, ಜೂ.30(ಕೆ.ಎಂ.ಶಿ.)–ಮುಂಬರುವ ವಿಧಾನಸಭೆ ಚುನಾವಣೆಗೂ ಮುನ್ನ ಮೇಕೆದಾಟು ಕುಡಿಯುವ ನೀರಿನ ಯೋಜನೆ ಅನುಷ್ಠಾನಗೊಳ್ಳಲು ಕೇಂದ್ರ, ರಾಜ್ಯ ಸರ್ಕಾರಕ್ಕೆ ಪರೋಕ್ಷ ಸಹಕಾರ ನೀಡುತ್ತಿದೆ.

ಹಳೇ ಮೈಸೂರು ಭಾಗದಲ್ಲಿ ಪಕ್ಷವನ್ನು ಬಲಪಡಿಸುವ ಉದ್ದೇಶದಿಂದ ಈ ಯೋಜನೆಗೆ ಕೇಂದ್ರ ಬಲ ತುಂಬುತ್ತಿದೆ. ಈ ಹಿಂದೆ ಎಂ.ಬಿ.ಪಾಟೀಲ್ ಹಾಗೂ ಡಿ.ಕೆ.ಶಿವಕುಮಾರ್ ಹಾಗೂ ಜಯಚಂದ್ರ ಅವರು ಜಲ ಸಂಪನ್ಮೂಲ ಮತ್ತು ಕಾನೂನು ಸಚಿವರಾಗಿದ್ದ ಸಂದರ್ಭದಲ್ಲಿ ಕೃಷ್ಣರಾಜಸಾಗರ ಅಣೆಕಟ್ಟೆಗೆ ಸಮಾನಾಂತರವಾಗಿ ಮೇಕೆದಾಟು ಸಮೀಪ ಅಣೆಕಟ್ಟು ನಿರ್ಮಿಸಲು ವಿಸ್ತೃತಾ ಯೋಜನಾ ವರದಿ ಸಿದ್ಧಪಡಿಸಿದ್ದಲ್ಲದೆ, ಸಂಪುಟದ ಒಪ್ಪಿಗೆಯೂ ದೊರೆತಿತ್ತು. ಕೇಂದ್ರ ಜಲಸಂಪನ್ಮೂಲ ಇಲಾಖೆ ತಾತ್ವಿಕ ಅನುಮೋದನೆ ನೀಡಿದ್ದಲ್ಲದೆ, ಕೇಂದ್ರ ಜಲ ಆಯೋಗ ಹಾಗೂ ಪರಿಸರ ▶ 6ನೇ ಪುಟಕ್ಕೆ

ಅನುಮೋದನೆ ನೀಡಬೇಡಿ...



ವೆಲ್ಲೂರು/ತಿರುಪತ್ತೂರು, ಜೂ.30– ಮೇಕೆದಾಟು ಅಣೆಕಟ್ಟು ನಿರ್ಮಾಣಕ್ಕೆ ಕರ್ನಾಟಕ ಸರ್ಕಾರಕ್ಕೆ ತಾಂತ್ರಿಕ ಮತ್ತು ಪರಿಸರ ಅನುಮತಿ ನೀಡದಂತೆ ಮುಖ್ಯಮಂತ್ರಿ ಎಂಕೆ ಸ್ಟಾಲಿನ್ ಬುಧವಾರ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ವೆಲ್ಲೂರಿನಲ್ಲಿ ನಡೆದ ಸರ್ಕಾರಿ ಕಾರ್ಯಕ್ರಮವೊಂದರಲ್ಲಿ ಅವರು ಮಾತನಾಡಿದರು. ಕಳೆದ 2 ವಾರಗಳಲ್ಲಿ ಅಣೆಕಟ್ಟು ನಿರ್ಮಾಣಕ್ಕೆ ಕರ್ನಾಟಕ ಹೆಚ್ಚಿನ ಆಸಕ್ತಿ ತೋರಿಸುತ್ತಿದೆ. ಅಣೆಕಟ್ಟು ನಿರ್ಮಿಸುವ ಅವರ ಪ್ರಯತ್ನವನ್ನು ವಿಫಲಗೊಳಿಸಲು ನಾವು ಪ್ರತಿ ಪ್ರಯತ್ನವನ್ನೂ ಮಾಡುತ್ತೇವೆ ಎಂದು ಹೇಳಿದರು. ಸಾಮಾಜಿಕ ನ್ಯಾಯ ಮತ್ತು ರಾಜ್ಯ–ಸ್ವಾಯತ್ತತೆ ವಿಚಾರದಲ್ಲಿ ತಮಿಳುನಾಡು ದೇಶದ ಉಳಿದ ಭಾಗಗಳಿಗೆ ಮಾದರಿಯಾಗಿದೆ.

ಶಿವಸೇನೆ ರೆಬೆಲ್ ಸ್ಟಾರ್ ಏಕನಾಥ್ ಶಿಂಧೆ ಮಹಾರಾಷ್ಟ್ರದ ನೂತನ ಮುಖ್ಯಮಂತ್ರಿ

ಫಡ್ನವೀಸ್ ಉಪ ಮುಖ್ಯಮಂತ್ರಿ

- ಗುರುವಾರ ರಾಜ್ಯಪಾಲರಿಂದ ಪ್ರಮಾಣ ವಚನ ಸ್ವೀಕಾರ
- ಮರಾಠ ಸಮುದಾಯದ ವಾರಸುದಾರರಾದ ಉದ್ಧವ್ ಠಾಕ್ರೆ, ಶರದ್ ಪವಾರ್‌ಗೆ ಬಿಗ್ ಶಾಕ್ ನೀಡಿದ ಬಿಜೆಪಿ
- ಕೊನೆವರೆಗೂ ಫಡ್ನವೀಸ್‌ಗೆ ಸಿಎಂ ಗಾದಿ ಎಂದುಕೊಳ್ಳುತ್ತಿದ್ದಂತೆ ಅಂತಿಮ ಕ್ಷಣದಲ್ಲಿ ಟ್ವಿಸ್ಟ್ ನೀಡಿದ ಕಮಲ ದಿಗ್ಗಜರು



ನೂತನ ಸಿಎಂ ಏಕನಾಥ್ ಶಿಂಧೆ



ಡಿಸಿಎಂ ದೇವೇಂದ್ರ ಫಡ್ನವೀಸ್

ಮುಂಬೈ, ಜೂ.30– ಮಹಾರಾಷ್ಟ್ರದಲ್ಲಿ ಕಳೆದ ಎರಡು ವಾರಗಳಿಂದ ಉಂಟಾಗಿದ್ದ ರಾಜಕೀಯ ಬಿಕ್ಕಟ್ಟು ಸದ್ಯಕ್ಕೆ ಅಂತ್ಯಗೊಂಡಿದೆ. ಬಿಜೆಪಿ ವರಿಷ್ಠರು ಶಿವಸೇನೆ ಬಂಡಾಯದಲ್ಲಿ ಭವಿಷ್ಯದ ರಾಜಕೀಯ ಸೌಧ ಕಟ್ಟಿದ್ದಾರೆ. ಉದ್ಧವ್ ಠಾಕ್ರೆ ನೇತೃತ್ವದ 31 ತಿಂಗಳ ಮಹಾ ಅಘಾಡಿ ಸರ್ಕಾರ ಪತನವಾಗಿ ಶಿವಸೇನೆ ಬಂಡಾಯ ನಾಯಕ ಏಕನಾಥ್ ಶಿಂಧೆ ನೇತೃತ್ವದಲ್ಲಿನ ನೂತನ ಶಿವಸೇನೆ–ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ▶ 8ನೇ ಪುಟಕ್ಕೆ

ಥಾಣೆಯ ಆಟೋರಾಜ ಈಗ ಮಹಾರಾಷ್ಟ್ರ ಮುಖ್ಯಮಂತ್ರಿ!

ಮುಂಬೈ, ಜೂ.30–ಈ ಹಿಂದೆ ಆಟೋ ಚಾಲಕರಾಗಿದ್ದ ಏಕನಾಥ ಶಿಂಧೆ ಈಗ ಮಹಾರಾಷ್ಟ್ರ ಮುಖ್ಯಮಂತ್ರಿ. ಥಾಣೆಯಲ್ಲಿ ಆಟೋ ಓಡಿಸುತ್ತಿದ್ದ ಶಿಂಧೆ ಶಿವಸೇನೆ ಸೇರಿ, ಬಳಿಕ ಶಾಸಕನಾಗಿ, ಸಚಿವನಾಗಿ, ವಿರೋಧ ಪಕ್ಷದ ನಾಯಕನಾಗಿ ಇದೀಗ ಮುಖ್ಯಮಂತ್ರಿಯಾಗಿದ್ದಾರೆ. ತಮ್ಮ ಸಂಘಟನಾ ಚಾತುರ್ಯದಿಂದಾಗಿ ಹಂತ ಹಂತವಾಗಿ ಬೆಳೆದು ಬಂದ ಶಿಂಧೆ, ಮಾಸ್ ಲೀಡರ್ ಆಗಿ ಪರಿವರ್ತನೆಯಾಗಿದ್ದಾರೆ. ಶಿವಸೇನೆಯಲ್ಲಿ ಉದ್ಧವ್ ಠಾಕ್ರೆ ಬಳಿಕ ನಂಬರ್ 2 ಎನಿಸಿಕೊಂಡಿದ್ದ ಅವರು, ಅಘಾಡಿ ಸರ್ಕಾರದಲ್ಲಿ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಖಾತೆಯ ▶ 8ನೇ ಪುಟಕ್ಕೆ

ರಾಜ್ಯದ ಆಯ್ದ ಸ್ಥಳಗಳಲ್ಲಿ 24x7 ಹೋಟೆಲ್, ರೆಸ್ಟೋರೆಂಟ್ ತೆರೆಯಲು ಅನುಮತಿ



ಬೆಂಗಳೂರು, ಜೂ.30– ಹೋಟೆಲ್ ಮತ್ತು ರೆಸ್ಟೋರೆಂಟ್ಸ್ ಅಸೋಸಿಯೇಷನ್ ಇಟ್ಟಿದ್ದ ಪ್ರಸ್ತಾವನೆಯನ್ನು ಬುಧವಾರ ರಾಜ್ಯ ಸರ್ಕಾರ ಅಂಗೀಕರಿಸಿದ್ದು, ಇನ್ನು ಮುಂದೆ ರಾಜ್ಯಾದ್ಯಂತ ಹೋಟೆಲ್‌ಗಳು ಮತ್ತು ರೆಸ್ಟೋರೆಂಟ್‌ಗಳು ಆಯ್ದ ಸ್ಥಳಗಳಲ್ಲಿ 24X7 ತೆರೆಯಬಹುದಾಗಿದೆ.

ಬಸ್ ಡಿಪೋಗಳು, ರೈಲು ನಿಲ್ದಾಣಗಳು, ಅಂತರ–ರಾಜ್ಯ ಬಸ್ ಟರ್ಮಿನಲ್‌ಗಳು ಮತ್ತು ಇತರ ಸ್ಥಳಗಳಂತಹ ಪ್ರಮುಖ ಮತ್ತು ಆಯ್ದ ಸ್ಥಳಗಳಲ್ಲಿರುವ ಹೋಟೆಲ್‌ಗಳು ಮತ್ತು ರೆಸ್ಟೋರೆಂಟ್‌ಗಳು ಹೆಚ್ಚಿನ ಸಾರ್ವಜನಿಕ ಸಂಚಾರವಿರುವ ಸ್ಥಳಗಳಲ್ಲಿ 24 ಗಂಟೆ ತೆರೆಯಬಹುದು. ಪೊಲೀಸರು ಅವರಿಗೆ ರಾತ್ರಿಯಿಡೀ ರಕ್ಷಣೆ ನೀಡುತ್ತಾರೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದ್ದಾರೆ.

ಆಳುವವರು ಯಾರಿದ್ದರೂ ಇವರ ಬಾಳೆಲ್ಲಾ ಗೋಳು!

● ಹೆರಿಗೆ ನೋವಿನಿಂದ ನರಳುತ್ತಿದ್ದ ತುಂಬು ಗರ್ಭಿಣಿಯ ಡೋಲಿಯಲ್ಲಿ 8 ಕಿಲೋ ಮೀಟರ್ ಹೊತ್ತು ತಂದು ಆಸ್ಪತ್ರೆಗೆ ದಾಖಲಿಸಿದ ಗ್ರಾಮಸ್ಥರು! ● ಮಹದೇಶ್ವರ ಬೆಟ್ಟ ಅರಣ್ಯ ಪ್ರದೇಶದ ಕುಗ್ರಾಮಗಳ ಜನರ ಬದುಕಿನ ಬವಣೆ ● ಸಂಕಷ್ಟಕ್ಕಾಗದ ಅರಣ್ಯ ಇಲಾಖೆ ಬಹುನಿರೀಕ್ಷಿತ ಜನವನ ಸಾರಿಗೆ



ಹನೂರು, ಜೂ.30(ಸೋಮು)–ದೇಶ ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಿಸಿಕೊಳ್ಳುತ್ತಿದೆ. ಆದರೆ, ಸ್ವಾತಂತ್ರ್ಯದ ಬಳುವಳಿ ಮಾತ್ರ ಬಡ ಜನರ ಬಾಗಿಲಿಗೆ ಬಂದಿಲ್ಲ ಎಂಬುದು ದುರಾದೃಷ್ಟಕರ ಸಂಗತಿ.

ಅರಣ್ಯ ಪ್ರದೇಶದ ಗ್ರಾಮಗಳ ಜನರು ಇನ್ನೂ ಸಮರ್ಪಕ ರಸ್ತೆ ಸಂಪರ್ಕ ಹಾಗೂ ಸಾರಿಗೆ ಸೌಕರ್ಯವಿಲ್ಲದೆ ನರಳುತ್ತಿದ್ದಾರೆ. ಅವರಿಗೆ ಇದುವರೆಗೆ ದೊರೆತಿರುವುದು ಬರೀ ಭರವಸೆ... ಭರವಸೆ... ಅಷ್ಟೇ. ನಿತ್ಯವೂ ಒಂದಲ್ಲಾ ಒಂದು ಕಾರಣಕ್ಕೆ ಇಂತಹ ಗ್ರಾಮಗಳ ಗ್ರಾಮಸ್ಥರು ಸಂಕಷ್ಟ ಪರಿಸ್ಥಿತಿಗೀಡಾಗುತ್ತಿದ್ದಾರೆ. ಆಹಾರ ಪದಾರ್ಥಗಳು, ಔಷಧೋಪಚಾರಕ್ಕಾಗಿ ಮೈಲಿಗಳವರೆಗೆ ▶ 8ನೇ ಪುಟಕ್ಕೆ

ಸಂಸದೀಯ ಸಲಹಾ ಸಮಿತಿಯಿಂದ ಮೈಸೂರು ಜಿಲ್ಲೆಯ ನಾಗವಾಲ ಸೇರಿ ಮೂರು ಗ್ರಾಪಂ ವ್ಯಾಪ್ತಿ ಭೇಟಿ

ಜಲಶಕ್ತಿ ಅಭಿಯಾನದ ಕಾಮಗಾರಿ ಪರಿಶೀಲನೆ

ಜಲಶಕ್ತಿ, ಬುಡಕಟ್ಟು ಸಚಿವ ಬಿಶ್ವೇಶ್ವರ ಟುಡು ನೇತೃತ್ವದ ನಿಯೋಗ



ಮೈಸೂರು, ಜೂ.30(ಆರ್‌ಕೆಬಿ)– ಕೇಂದ್ರ ಸರ್ಕಾರದ ಜಲ ಸಚಿವಾಲಯದ ಅಡಿಯಲ್ಲಿ ಜಲಶಕ್ತಿ ಅಭಿಯಾನ ಸಂಸದೀಯ ಸಲಹಾ ಸಮಿತಿ ನಿಯೋಗ ಗುರುವಾರ ಮೈಸೂರು ಜಿಲ್ಲೆಯ ಮೂರು ಗ್ರಾಮ ಪಂಚಾಯಿತಿಗಳಿಗೆ ಭೇಟಿ ನೀಡಿ ಅಲ್ಲಿ ನಡೆದಿರುವ ಜಲಶಕ್ತಿ ಅಭಿಯಾನ ಕಾಮಗಾರಿಗಳನ್ನು ಪರಿಶೀಲಿಸಿತು.

ಕೇಂದ್ರ ಜಲಶಕ್ತಿ ಮತ್ತು ಬುಡಕಟ್ಟು ವ್ಯವಹಾರಗಳ ರಾಜ್ಯ ಸಚಿವ ಬಿಶ್ವೇಶ್ವರ ಟುಡು ನೇತೃತ್ವದಲ್ಲಿ 10 ಮಂದಿ ಸಂಸದರು, ಕಾರ್ಯದರ್ಶಿಗಳು ಮತ್ತು ಸಚಿವಾಲಯದ ಹಿರಿಯ ಅಧಿಕಾರಿಗಳನ್ನು ಒಳಗೊಂಡಿದ್ದ ನಿಯೋಗ ಮೈಸೂರು ತಾಲೂಕಿನ ನಾಗವಾಲ ಗ್ರಾಮ ಪಂಚಾಯಿತಿಯ ನಾಗವಾಲ, ಹುಣಸೂರು ತಾಲೂಕಿನ ಬಿಳಿಕೆರೆ ಮತ್ತು ಹುಸೇನಪುರ ಗ್ರಾಮ ಪಂಚಾಯಿತಿಗಳಿಗೆ ಭೇಟಿ ನೀಡಿ ಅಲ್ಲಿ ನಡೆದಿರುವ ಜಲಶಕ್ತಿ ಅಭಿಯಾನದ ಕಾರ್ಯಗಳನ್ನು ಖುದ್ದು ವೀಕ್ಷಿಸಿದರು. ನಿಯೋಗ ನಾಗವಾಲ ಗ್ರಾಮದಲ್ಲಿ ಕೇಂದ್ರ ಸಚಿವ ಬಿಶ್ವೇಶ್ವರ ಟುಡು ಅವರೊಂದಿಗೆ ಸಮಿತಿಯ ಸದಸ್ಯರಾದ ಬಲಕ್‌ನಾಥ್, ರಮೇಶ್‌ಭಾಯ್ ಲವ್‌ಜಿಭಾಯ್ ಧಾಡುಕ್, ಮುಖೇಶ್ ರಜ್‌ಪುತ್, ಡಾ.ಸಾಕ್ಷಿ ಜಿ ಸ್ವಾಮಿ ಮಹರಾಜ್, ಕೋಡಿಕುನ್ನಿಲ್ ಸುರೇಶ್, ಸಕಲ್‌ದೀಪ್ ರಾಜ್‌ಭರ್, ಸತ್ಯಪಾಲ್ ಸಿಂಗ್ ಸೇರಿದಂತೆ ಇಲಾಖೆಯ ಕಾರ್ಯದರ್ಶಿಗಳು, ಅಧಿಕಾರಿಗಳು ಇದ್ದರು.



ಕೇಂದ್ರ ಜಲಶಕ್ತಿ ಮತ್ತು ಬುಡಕಟ್ಟು ರಾಜ್ಯ ಸಚಿವ ಬಿಶ್ವೇಶ್ವರ ಟುಡು ನೇತೃತ್ವದಲ್ಲಿ ಜಲಶಕ್ತಿ ಅಭಿಯಾನದ ಸಂಸದೀಯ ಸಲಹಾ ಸಮಿತಿಯ ಸದಸ್ಯರು ಗುರುವಾರ ರಾಷ್ಟ್ರೀಯ ಪ್ರಶಸ್ತಿ ವಿಜೇತ ಮೈಸೂರು ತಾಲೂಕಿನ ನಾಗವಾಲ ಗ್ರಾಮಕ್ಕೆ ಭೇಟಿ ನೀಡಿ, ಅಲ್ಲಿ ಜಲಸಂವರ್ಧನೆ ಸಂಬಂಧ ಕೈಗೊಂಡಿರುವ ಕಾಮಗಾರಿಗಳ ಪರಿಶೀಲಿಸಿದರು. ಈ ವೇಳೆ ನಿಯೋಗಕ್ಕೆ ಗ್ರಾ.ಪಂ ಅಧ್ಯಕ್ಷ ಸಿ.ನರೇಂದ್ರ ವಿವರಿಸಿದರು.

“ ಯೋಜನೆಗಳ ಅನುಷ್ಠಾನ ಹಾಗೂ ಅಭಿವೃದ್ಧಿ ಕಾರ್ಯಗಳಿಂದ ನಾಗವಾಲ ಗ್ರಾಮ ಪಂಚಾಯ್ತಿ ಕೇಂದ್ರ ಪಂಚಾಯತ್ ರಾಜ್ ಇಲಾಖೆಯ ಪ್ರಶಸ್ತಿಗೆ ಭಾಜನವಾಗಿರುವ ಹಿನ್ನೆಲೆಯಲ್ಲಿ ಸಂಸದೀಯ ಸಲಹಾ ಸಮಿತಿ ಗುರುವಾರ ಭೇಟಿ ನೀಡಿ ಪರಿಶೀಲಿಸಿ, ಗ್ರಾಪಂ ಕಾರ್ಯವೈಖರಿ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದೆ.

ಮುಖ್ಯ ರಸ್ತೆಯ ಕೆರೆ, ಹತ್ತಿರದ ಕಲ್ಯಾಣಿ ಅಭಿವೃದ್ಧಿ ಕಾಮಗಾರಿ, ಸಾಕದೇವಮ್ಮ ದೇವಸ್ಥಾನದ ಕಟ್ಟೆ ಹೂಳು ತೆಗೆದು ಅಭಿವೃದ್ಧಿಪಡಿಸಿರುವುದನ್ನು ವೀಕ್ಷಿಸಿ, ಕಾಮಗಾರಿಯ ಪ್ರಗತಿ ಪರಿಶೀಲನೆ ನಡೆಸಿ, ಮೆಚ್ಚುಗೆ ವ್ಯಕ್ತಪಡಿಸಿತು. ಎಲ್ಲಾ ಜಲಮೂಲಗಳ ಸಂಖ್ಯೆ ಮತ್ತು ಇತರ ಪ್ರಮುಖ ಅಂಕಿ ಅಂಶಗಳ ಕುರಿತು ಮಾಹಿತಿ ಪಡೆದುಕೊಂಡ ನಿಯೋಗ, 6 ಲಕ್ಷ ವೆಚ್ಚದಲ್ಲಿ ಸಾಂಪ್ರದಾಯಿಕ ಜಲಮೂಲಗಳ ನವೀಕರಣ (ಕಲ್ಯಾಣಿ ಅಭಿವೃದ್ಧಿ) ಮತ್ತು ನಾಗವಾಲ ಗ್ರಾಮದಲ್ಲಿ 8 ಲಕ್ಷ ರೂ. ವೆಚ್ಚದಲ್ಲಿ ಸಾಕದೇವಮ್ಮ ▶ 8ನೇ ಪುಟಕ್ಕೆ

‘ಮೇಕೆದಾಟು’: ಸೌಹಾರ್ದಯುತ ಮಾತುಕತೆಗೆ ಕೇಂದ್ರದ ಸಹಕಾರ

ಕಾವೇರಿ ನದಿ ನೀರು ಹಂಚಿಕೆ ವಿಚಾರದಲ್ಲಿ ಕರ್ನಾಟಕ ಮತ್ತು ತಮಿಳುನಾಡು ನಡುವೆ ಕಾನೂನು ಸಮರ ನಡೆಯುತ್ತಿರುವ ಮೇಕೆದಾಟು ಯೋಜನೆಯ ಬಗ್ಗೆ ಪ್ರಶ್ನಿಸಿದಾಗ, ಎರಡೂ ರಾಜ್ಯ ಸರ್ಕಾರಗಳು ಸೌಹಾರ್ದಯುತ ಮಾತುಕತೆ ನಡೆಸಿ ಒಪ್ಪಂದಕ್ಕೆ ಬರುವುದಾದರೆ ಅದಕ್ಕೆ ಕೇಂದ್ರ ಸರ್ಕಾರದ ಎಲ್ಲ ಸಹಕಾರವಿದೆ. ಸಮಸ್ಯೆ ಬಗೆಹರಿಸಿಕೊಳ್ಳಲು ಇದು ಉತ್ತಮ ಮಾರ್ಗವಾಗಿದೆ ಎಂದು ಕೇಂದ್ರ ಸಚಿವ ಬಿಶ್ವೇಶ್ವರ ಟುಡು ತಿಳಿಸಿದರು.

ಮೈಸೂರು ಮಿತ್ರ

ಮಕ್ಕಳಿಗೆ ಎರಡನೇ ಡೋಸ್ ಕೇಳಿದರೆ 'ನೋ ಸ್ಟಾಕ್' ಬೋರ್ಡ್ ತೋರಿಸ್ತಾರೆ!

ಮೈಸೂರು,ಜೂ.30(ಎಸ್‌ಪಿಎನ್)–12–15 ವರ್ಷದೊಳಗಿನ ಮಕ್ಕಳಿಗೆ ಕೋವಿಡ್–19 ಲಸಿಕೆಯ 2ನೇ ಡೋಸ್ ಕೇಳಿದರೆ 'ನೋ ಸ್ಟಾಕ್' ಉತ್ತರ ಆರೋಗ್ಯ ಇಲಾಖೆಯಿಂದ ಬರುತ್ತಿದೆ ಎಂದು ಪೋಷಕರೊಬ್ಬರು ದೂರಿದ್ದಾರೆ.



ಸಂಗ್ರಹ ಚಿತ್ರ

ಮೈಸೂರಿನ ರಾಮಕೃಷ್ಣನಗರದ ಹೆಚ್ ಬ್ಲಾಕ್‌ನ ಪೋಷಕರೊಬ್ಬರು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿ, ನಮ್ಮ ಮಗಳು ಖಾಸಗಿ ಶಾಲೆಯೊಂದರಲ್ಲಿ 7ನೇ ತರಗತಿ ವ್ಯಾಸಂಗ ಮಾಡುತ್ತಿದ್ದು, ಸರ್ಕಾರದ ಸೂಚನೆಯಂತೆ ಕೊರೊನಾ ಲಸಿಕೆಯ ಮೊದಲ ಡೋಸ್ ಪಡೆದು ತಿಂಗಳಾಗಿದ್ದು, ಇದೀಗ 2ನೇ ಡೋಸ್ ಪಡೆಯುವಂತೆ ಆರೋಗ್ಯ ಇಲಾಖೆಯಿಂದ ಮೆಸೇಜ್ ಬರುತ್ತಿದೆ.

ಆದರೆ, ಕುವೆಂಪುನಗರ ಮತ್ತು ಟಿ.ಕೆ. ಬಡಾವಣೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಲಸಿಕೆ ಬಗ್ಗೆ ವಿಚಾರಿಸಿದರೆ, 12–15 ವರ್ಷದೊಳಗಿನ ಮಕ್ಕಳಿಗೆ ನೀಡುವ ಕೊರೊನಾ ಲಸಿಕೆ ಸ್ಟಾಕ್ ಬಂದಿಲ್ಲ. ಸ್ಟಾಕ್ ಬಂದ ನಂತರ ನಿಮಗೆ ತಿಳಿಸುತ್ತೇವೆ. ಅಲ್ಲದೆ ವಿದ್ಯಾರ್ಥಿಗಳಿಗೆ ಆಯಾಯ ಶಾಲೆಗಳಲ್ಲೇ ಲಸಿಕೆ ನೀಡಲು ಕ್ರಮ ವಹಿಸಿದ್ದು, ಅಲ್ಲಿವರೆಗೆ ತಾಳ್ಮೆ ವಹಿಸುವಂತೆ ಸಬೂಬು ಹೇಳುತ್ತಿದ್ದಾರೆ. ಹೀಗೆ 2–3 ಬಾರಿ ವಿಚಾರಿಸಿದರೂ ಮಕ್ಕಳಿಗೆ ಲಸಿಕೆ ಲಭ್ಯವಾಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಮೊದಲ ಡೋಸ್ ಪಡೆದಿದ್ದ ವಿದ್ಯಾರ್ಥಿಗಳು ಈಗ 2ನೇ ಡೋಸ್ ಪಡೆಯಲು ಪರದಾಡುತ್ತಿದ್ದಾರೆ ಎಂದು ತಿಳಿಸಿದರು.

ಮೈಸೂರು ಜಿಲ್ಲೆಯಾದ್ಯಂತ 12–18 ವರ್ಷದೊಳಗಿನ ವಿದ್ಯಾರ್ಥಿಗಳಿಗೆ ಆಯಾಯ ಶಾಲೆಯೇ ಕೊರೊನಾ ಲಸಿಕೆಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆ ಸಿಬ್ಬಂದಿ ಸಮ್ಮುಖದಲ್ಲಿ ನೀಡಲಾಗುತ್ತಿದೆ. ಇನ್ನು ಕೆಲವೇ ದಿನಗಳಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೂ ಲಸಿಕೆ(ಎರಡನೇ ಡೋಸ್) ಲಭ್ಯವಾಗಲಿದೆ ಎಂದು ಆರೋಗ್ಯ ಇಲಾಖೆ ಅಧಿಕಾರಿಯೊಬ್ಬರು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.



12–15 ವರ್ಷ ಹಾಗೂ 16–18 ವರ್ಷದ ವಿದ್ಯಾರ್ಥಿಗಳಿಗೆ ಈಗಾಗಲೇ ಕೊರೊನಾ ಲಸಿಕೆ ಮೊದಲ ಡೋಸ್ ನೀಡಲಾಗಿದ್ದು, 2ನೇ ಡೋಸ್ ಶೇ.82ರಷ್ಟು ನೀಡಲಾಗಿದೆ. ಇನ್ನುಳಿದ ವಿದ್ಯಾರ್ಥಿಗಳಿಗೆ ಆರೋಗ್ಯ ಇಲಾಖೆ ಸಹಕಾರದೊಂದಿಗೆ ಕೆಲವೇ ದಿನಗಳಲ್ಲಿ ನೀಡಿ, ಪೂರ್ಣಗೊಳಿಸಲಾಗುವುದು. ಅಲ್ಲಿವರೆಗೆ ಪೋಷಕರು ಸಹಕರಿಸಬೇಕು.
–ರಾಮಚಂದ್ರರಾಜೇ ಅರಸ್, ಡಿಡಿಪಿಐ(ಆಡಳಿತ)

ಉತ್ತರ ಕರ್ನಾಟಕ ಅಭಿವೃದ್ಧಿ ದೃಷ್ಟಿಯಿಂದ ಪ್ರತ್ಯೇಕ ರಾಜ್ಯವಾಗಬೇಕು

● ಅರಣ್ಯ ಸಚಿವ ಉಮೇಶ್ ಕತ್ತಿ ಸಮರ್ಥನೆ ● ಹೆಚ್ಚಿದ ಜನಸಂಖ್ಯೆಯ ಅಗತ್ಯಗಳ ಪೂರೈಕೆಗೆ ಪ್ರತ್ಯೇಕ ರಾಜ್ಯಗಳ ಅಗತ್ಯವಿದೆ

ಮೈಸೂರು,ಜೂ.30(ಎಂಟಿವೈ)– ರಾಜ್ಯ ಇಬ್ಭಾಗವಾದಾಗ ಮಾತ್ರ ಅಭಿವೃದ್ಧಿ ಸಾಧಿಸಬಹುದು. ಹಾಗಾಗಿ ನಾನು ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯವಾಗಬೇಕೆಂದು ಒತ್ತಾಯಿಸಿದ್ದೇನೆ. ಆ ಒತ್ತಾಯಕ್ಕೆ ಈಗಲೂ ಬದ್ಧನಾಗಿದ್ದೇನೆ ಎಂದು ಅರಣ್ಯ ಸಚಿವ ಉಮೇಶ್ ಕತ್ತಿ ಸಮರ್ಥಿಸಿಕೊಂಡರು.

ಮೈಸೂರಿನ ಮೃಗಾಲಯದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ನಾನು ಪದೇ ಪದೆ ಪ್ರತ್ಯೇಕ ರಾಜ್ಯದ ಬಗ್ಗೆ ಪ್ರಸ್ತಾಪಿಸುತ್ತಲೇ ಇದ್ದೇನೆ. ಈ ಹೇಳಿಕೆಗೆ ನಾನು ಈಗಲೂ ಬದ್ಧನಾಗಿದ್ದೇನೆ. ನನ್ನ ಹೇಳಿಕೆಯ ಉದ್ದೇಶ ಅಭಿವೃದ್ಧಿಯೇ ಆಗಿದೆ. ಕರ್ನಾಟಕ ಉದಯವಾದಾಗ 2.50 ಕೋಟಿ ಜನಸಂಖ್ಯೆಯಿತ್ತು. ಆದರೆ ಈಗ 6.50 ಕೋಟಿಗೂ ಹೆಚ್ಚಾಗಿದೆ. ಇಂತಹ ಸಂದರ್ಭದಲ್ಲಿ ಅಭಿವೃದ್ಧಿಯನ್ನು ಪರಿಣಾಮಕಾರಿಯಾಗಿ ನಡೆಸಲು ಸಾಧ್ಯವೇ? ಹಾಗಾಗಿ ಕಲ್ಯಾಣ ಕರ್ನಾಟಕ, ಉತ್ತರ ಕರ್ನಾಟಕದ ಅಭಿವೃದ್ಧಿ ಕ್ಷೀಣಿಸಿದೆ. ಅದಕ್ಕಾಗಿ ಪ್ರತ್ಯೇಕ ರಾಜ್ಯದ ಪ್ರಸ್ತಾಪ ಮಾಡುತ್ತಿದ್ದೇನೆ ಎಂದು ಸ್ಪಷ್ಟಪಡಿಸಿದರು.

ಮೈಸೂರು ಭಾಗದಲ್ಲಿರುವ ಕಾವೇರಿ ನದಿಗೆ ಸಂಬಂಧಿಸಿದ ಅಣೆಕಟ್ಟೆಯಲ್ಲಿ 170 ಟಿಎಂಸಿ ನೀರು ಲಭ್ಯವಿದ್ದು, ಅದನ್ನು ಪೂರ್ಣ ಪ್ರಮಾಣದಲ್ಲಿ ಮೈಸೂರು, ಬೆಂಗಳೂರಿಗರಿಗೆ ಕುಡಿಯುವ ನೀರು ಪೂರೈಕೆ ಹಾಗೂ ಕೃಷಿ ಚಟುವಟಿಕೆಗೆ ಬಳಸಲಾಗುತ್ತಿದೆ. ಆದರೆ ಉತ್ತರ ಕರ್ನಾಟಕದಲ್ಲಿರುವ 1700 ಟಿಎಂಸಿ ಸಾಮರ್ಥ್ಯವಿರುವ ಆಲಮಟ್ಟಿ ಅಣೆಕಟ್ಟೆಯಲ್ಲಿನ ಕೇವಲ 950 ಟಿಎಂಸಿ ನೀರನ್ನು ಮಾತ್ರ ಬಳಸಿಕೊಳ್ಳುತ್ತಿದ್ದೇವೆ. ಉಳಿದ 950 ಟಿಎಂಸಿ ನೀರನ್ನು ಬಳಸಿಕೊಳ್ಳದೇ ಸಮುದ್ರ ಸೇರುತ್ತಿದೆ. ಆದರೆ ಪ್ರತ್ಯೇಕ ರಾಜ್ಯ ಸ್ಥಾಪನೆಯಾದರೆ ಕಾಲುವೆಗಳನ್ನು ನಿರ್ಮಿಸಿ, ಕೃಷಿ ಚಟುವಟಿಕೆಗಳಿಗೆ ನೀರು ಸರಬರಾಜು ಮಾಡಬಹುದಾಗಿದೆ. ಅದಕ್ಕಾಗಿಯಾದರೂ ಪ್ರತ್ಯೇಕ ರಾಜ್ಯ ಸ್ಥಾಪಿಸಬೇಕು ಎಂದು ತಿಳಿಸಿದರು.



ಮೈಸೂರಿನ ಮೃಗಾಲಯದಲ್ಲಿ ಪತ್ರಕರ್ತರೊಂದಿಗೆ ಅರಣ್ಯ ಸಚಿವ ಉಮೇಶ್ ಕತ್ತಿ ಮಾತನಾಡಿದರು. ಮೃಗಾಲಯ ಪ್ರಾಧಿಕಾರ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಇನ್ನಿತರರು ಚಿತ್ರದಲ್ಲಿದ್ದಾರೆ.

ದೇಶದಲ್ಲಿ 50 ರಾಜ್ಯವಾಗಬೇಕು: ದೇಶದ ಜನಸಂಖ್ಯೆ 130 ಕೋಟಿ ಆಗಿದೆ. ಈಗ ಇರುವ 30 ರಾಜ್ಯಗಳಿಂದ 130 ಕೋಟಿ ಜನರ ನಿರ್ವಹಣೆ ಕಷ್ಟವಾಗುತ್ತಿದೆ. ಉತ್ತರ ಪ್ರದೇಶದಲ್ಲೇ 22 ಕೋಟಿ ಜನಸಂಖ್ಯೆ ಇದೆ. ಹೀಗಿರುವಾಗ ದೇಶದಲ್ಲಿ ರಾಜ್ಯಗಳ ಸಂಖ್ಯೆ 50ಕ್ಕೆ ಏರಬೇಕು ಎಂಬುದು ನನ್ನ ವಾದ. ಆ ಕುರಿತು ಕೇಂದ್ರದಲ್ಲೂ ಚರ್ಚೆ ನಡೆಯುತ್ತಿದೆ. ಅದರ ಒಂದು ಭಾಗ ಕಲ್ಯಾಣ ಕರ್ನಾಟಕದ ಪ್ರತ್ಯೇಕ ರಾಜ್ಯ ರಚನೆ ಕೂಗು ಎಂದರು.

224 ಶಾಸಕರಲ್ಲೂ ನಾನೇ ಸೀನಿಯರ್: ರಾಜ್ಯದಲ್ಲಿನ 224 ಶಾಸಕರಲ್ಲಿ ನಾನೇ ಸೀನಿಯರ್. ಒಂದೇ ಕ್ಷೇತ್ರದಲ್ಲಿ 9 ಬಾರಿ ಗೆದ್ದಿದ್ದೇನೆ. 8 ಬಾರಿ ಪೂರ್ಣ ಅವಧಿಯನ್ನು ಪೂರೈಸಿದ್ದೇನೆ. ವಿವಿಧ ರಾಜಕೀಯ ಪಕ್ಷಗಳಿಂದಲೂ ಗೆದ್ದಿದ್ದೇನೆ. ನನಗೆ ಅಖಂಡ ಕರ್ನಾಟಕದ ಮುಖ್ಯಮಂತ್ರಿಯಾಗುವ ಎಲ್ಲಾ ಅರ್ಹತೆಯೂ ಇದೆ ಎಂದು ಪ್ರತಿಪಾದಿಸಿದರು.

ಇನ್ನೂ 3 ಬಾರಿ ಗೆಲ್ಲುತ್ತೇನೆ: ನನಗೆ ಈಗ 60 ವರ್ಷ. ರಾಜಕಾರಣದಲ್ಲಿ ಇನ್ನು 15 ವರ್ಷ ಮುಂದುವರೆಯುತ್ತೇನೆ. ಈಗ 9 ಬಾರಿ ಗೆದ್ದಿದ್ದು, ಮುಂದಿನ 3 ಬಾರಿಯೂ ಗೆದ್ದೇ ಗೆಲ್ಲುತ್ತೇನೆ. ಆ ವಿಶ್ವಾಸ ನನ್ನಲ್ಲಿದೆ. ನನ್ನ ಹಣೆಯಲ್ಲಿ ಮುಖ್ಯಮಂತ್ರಿಯಾಗುವುದನ್ನು ಬರೆದಿದ್ದರೆ, ನಾನು ಸಿಎಂ ಆಗೇ ಆಗುತ್ತೇನೆ. ಅದು ಅಖಂಡ ಕರ್ನಾಟಕದ ಮುಖ್ಯಮಂತ್ರಿಯೋ ಅಥವಾ ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯದ ಮುಖ್ಯಮಂತ್ರಿಯೋ ನನಗೆ ತಿಳಿಯದು ಎಂದು ಉಮೇಶ್ ಕತ್ತಿ ಹೇಳಿದರು.

ಬೆಂಗಳೂರಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ

"ಜನಸಂಖ್ಯೆ ಹೆಚ್ಚಾದಂತೆ ಸವಲತ್ತುಗಳು ಹೆಚ್ಚಾಗಬೇಕು. 2.50 ಕೋಟಿ ಜನಸಂಖ್ಯೆ ಇದ್ದಾಗ ಉದಯವಾದ ಕರ್ನಾಟಕದಲ್ಲಿ ಇಂದು 6.50 ಕೋಟಿ ಜನಸಂಖ್ಯೆ ಇದೆ. ಆದರೆ ಜಿಲ್ಲೆಗಳ ಸಂಖ್ಯೆ ಇನ್ನೂ 31 ಇವೆ. ಇದರಿಂದ ಕಾನೂನು ಸುವ್ಯವಸ್ಥೆ ಕಾಪಾಡಲು ಸಾಧ್ಯವೇ. ಬೆಂಗಳೂರಿನ ಜನಸಂಖ್ಯೆ 3–4 ಪಟ್ಟು ಹೆಚ್ಚಾಗಿದೆ. ಇದರಿಂದ ಕಾನೂನು ಸುವ್ಯವಸ್ಥೆ ಹಾಳಾಗಿದೆ. ನೀವೇ ಹೇಳಿ ಬೆಂಗಳೂರಲ್ಲಿ ಕಾನೂನು ಸುವ್ಯವಸ್ಥೆ ಸರಿಯಾಗಿದ್ಯಾ? ಹಾಗಾಗಿ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಡುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಪ್ರತ್ಯೇಕ ರಾಜ್ಯ ರಚನೆಯಾಗಬೇಕೆಂಬ ಕೂಗು ನನ್ನದು. ಉತ್ತರ ಕರ್ನಾಟಕದ ರಾಜಕಾರಣಿಗಳಲ್ಲಿ ಹಿರಿಯ ರಾಜಕಾರಣಿ ನಾನು. ಹಾಗಾಗಿ ಒತ್ತಾಯಿಸುವ ಹಕ್ಕು ನನ್ನದಾಗಿದೆ. **–ಉಮೇಶ್ ಕತ್ತಿ, ಅರಣ್ಯ ಸಚಿವ**

ವೈದ್ಯಕೀಯ ಉದ್ದೇಶಿತ ಡ್ರಗ್ಸ್‌ಗಳ ದುರ್ಬಳಕೆ ಯುವಕರ ಮೇಲೆ ಗಾಢ ಪರಿಣಾಮ

ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪ್ರಸಾದ್ ಆತಂಕ



ಮೈಸೂರು,ಜೂ.30(ಎಂಕೆ)–ವೈದ್ಯಕೀಯ ಉದ್ದೇಶಗಳಿಗೆ ಬಳಕೆಯಾಗಬೇಕಿದ್ದ ಡ್ರಗ್ಸ್ ಅನ್ಯ ಉದ್ದೇಶಕ್ಕೆ ಬಳಕೆಯಾಗುವ ಮೂಲಕ ಯುವ ಜನತೆ ಮೇಲೆ ದುಷ್ಪರಿಣಾಮ ಬೀರುತ್ತಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಹೆಚ್.ಪ್ರಸಾದ್ ಆತಂಕ ವ್ಯಕ್ತಪಡಿಸಿದರು.

ಮೈಸೂರಿನ ಹೆಬ್ಬಾಳು ರಿಂಗ್ ರಸ್ತೆಯಲ್ಲಿರುವ ಬಸವ ಮಾರ್ಗ ಫೌಂಡೇಷನ್ ಆವರಣದಲ್ಲಿ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಾದಕ ವಸ್ತುಗಳ ಸೇವನೆ ವಿರೋಧಿ ಹಾಗೂ ಕಳ್ಳ ಸಾಗಾಣಿಕೆ ತಡೆ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಗಂಭೀರ ಸ್ಥಿತಿಯಲ್ಲಿರುವ ರೋಗಿಗಳಿಗೆ ಚಿಕಿತ್ಸೆ ನೀಡಲು ಬಳಸುವ ಕೆಲ ಡ್ರಗ್ಸ್ ಮತ್ತು ಔಷಧಿಗಳನ್ನು ಮೋಜು–ಮಸ್ತಿಗಾಗಿ ಬಳಸುವ ಮೂಲಕ ಯುವ ಜನತೆ ಹಾದಿ ತಪ್ಪುತ್ತಿದೆ. ಆದ್ದರಿಂದ ಇಂತಹ ಔಷಧಿಗಳು ದುರುದ್ದೇಶಕ್ಕೆ ಬಳಕೆಯಾಗದಂತೆ ಎಚ್ಚರಿಕೆ ವಹಿಸಬೇಕಿದ್ದು, ಪೊಲೀಸರು ಈ ಬಗ್ಗೆ ಅಗತ್ಯ ಕ್ರಮಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ಮನೋರೋಗ ತಜ್ಞೆ ಡಾ.ಸುಧಾರಾಣಿ ನಾಯಕ್ ಮಾತನಾಡಿ, ಮಾದಕ ವ್ಯಸನಕ್ಕೆ ಕೇವಲ ಪುರುಷರು ಮಾತ್ರವಲ್ಲ ಮಹಿಳೆಯರು ಸಹ ತುತ್ತಾಗುತ್ತಿದ್ದಾರೆ. ಪುರುಷರಂತೆ ಮಹಿಳೆಯರನ್ನು ಸಹ ವ್ಯಸನ ಮುಕ್ತಗೊಳಿಸಬೇಕಾಗಿದೆ. ಈ ನಿಟ್ಟಿನಲ್ಲಿ ಬಸವ ಮಾರ್ಗ ಫೌಂಡೇಷನ್‌ನಂತೆಯೇ ಇತರ ಸಂಸ್ಥೆಗಳು ಕಾರ್ಯ ನಿರ್ವಹಿಸಬೇಕು ಎಂದರು. ಕೆ.ಆರ್.ವಿಭಾಗದ ಎಸಿಪಿ ಪೂರ್ಣಚಂದ್ರ ತೇಜಸ್ವಿ, ಬಸವ ಮಾರ್ಗ ಫೌಂಡೇಷನ್‌ನ ಸಂಸ್ಥಾಪಕ ಅಧ್ಯಕ್ಷ ಎಸ್.ಬಸವರಾಜು, ಮಧು, ಆನಂದ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಮೃಗಾಲಯದಲ್ಲಿ ಪ್ರಾಣಿ-ಪಕ್ಷಿ ಸಂತತಿ ವೃದ್ಧಿಸಿ, ಇತರೆ ಮೃಗಾಲಯಕ್ಕೆ ಕೊಡುಗೆ ನೀಡಿ

● ಅರಣ್ಯ ಸಚಿವ ಉಮೇಶ್ ಕತ್ತಿ ಸಲಹೆ ● ಉತ್ತರ ಕರ್ನಾಟಕದಲ್ಲಿ ಮೃಗಾಲಯ ಸ್ಥಾಪನೆ ಬಗ್ಗೆ ಅತೀವ ಉತ್ಸುಕತೆ

ಮೈಸೂರು, ಜೂ.30(ಎಂಟಿವೈ)– ಮೈಸೂರು ಮೃಗಾಲಯದಲ್ಲಿ ಪ್ರಾಣಿಗಳ ಸಂತತಿ ಹೆಚ್ಚಿಸಿ, ಇತರೆ ಮೃಗಾಲಯಗಳಿಗೆ ಕೊಡುಗೆ ನೀಡುವಂತೆ ಅರಣ್ಯ ಸಚಿವ ಉಮೇಶ್ ಕತ್ತಿ ಸಲಹೆ ನೀಡಿದ್ದಾರೆ.

ಮೈಸೂರಿನ ಮೃಗಾಲಯದ ಸಭಾಂಗಣದಲ್ಲಿ ಮೃಗಾಲಯದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮೈಸೂರು ಮೃಗಾಲಯದ ನಿರ್ವಹಣೆ, ಪ್ರಾಣಿ–ಪಕ್ಷಿಗಳ ಪಾಲನೆ ಕುರಿತಂತೆ ಸವಿವರ ಮಾಹಿತಿ ಕಲೆ ಹಾಕಿದರು.

ಸಭೆಯಲ್ಲಿ ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಅಜಿತ್ ಎಂ.ಕುಲಕರ್ಣಿ ಪಿಪಿಟಿ ಮೂಲಕ ಮೈಸೂರು ಮೃಗಾಲಯದ ಪ್ರಾಣಿ–ಪಕ್ಷಿಗಳ ಮನೆ, ಅವುಗಳ ನಿರ್ವಹಣೆ, ಆರೋಗ್ಯ ಕಾಪಾಡುವ, ಚಿಕಿತ್ಸಾ ವಿಧಾನ, ಕಾಲಕಾಲಕ್ಕೆ ಅನುಗುಣವಾಗಿ ಪ್ರಾಣಿಗಳ ಮನೆಯಲ್ಲಿ ಬದಲಾವಣೆ, ಲೈವ್ ಫುಡ್ ವ್ಯವಸ್ಥೆಯ ಬಗ್ಗೆ ಮಾಹಿತಿ ನೀಡಿದರು. ಅಲ್ಲದೆ, ಮೃಗಾಲಯದಲ್ಲಿ ಪ್ಲಾಸ್ಟಿಕ್ ನಿಷೇಧ, ಸ್ವಚ್ಛತೆ, ಪ್ರವಾಸಿಗರ ಅನುಕೂಲಕ್ಕಾಗಿ ತೆರೆದಿರುವ ಮಳಿಗೆ ಇನ್ನಿತರ ಮಾಹಿತಿ ನೀಡಿದರು.

ನಂತರ ಸಚಿವ ಉಮೇಶ್ ಕತ್ತಿ, ಮೃಗಾಲಯದ ನಿರ್ವಹಣೆ ಕಂಡು ತುಂಬಾ ಖುಷಿಯಾಗಿದೆ. ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಬದ್ಧತೆಯಿಂದಾಗಿ ಪ್ರಾಣಿ–ಪಕ್ಷಿಗಳ ಪಾಲನೆ ಉತ್ತಮವಾಗಿದೆ. ಪ್ರವಾಸಿಗರನ್ನು ಆಕರ್ಷಿಸಲು ವಿದೇಶಗಳಿಂದ ಪ್ರಾಣಿ–ಪಕ್ಷಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ತರುವುದಕ್ಕೆ ವ್ಯವಸ್ಥೆ ಮಾಡಬೇಕು. ಇದರಿಂದ ಮೃಗಾಲಯ ಮತ್ತಷ್ಟು ಪ್ರಸಿದ್ಧಿ ಪಡೆಯುತ್ತದೆ. ಇನ್ನಿತರೆ ಮೃಗಾಲಯಗಳಿಗೆ ಮಾತೃಸಂಸ್ಥೆಯಂತೆ ಮೈಸೂರು ಮೃಗಾಲಯ ಕಾರ್ಯನಿರ್ವಹಿಸುತ್ತಿರುವುದರಿಂದ ಇಲ್ಲಿ ಪ್ರಾಣಿ–ಪಕ್ಷಿಗಳ ಸಂತತಿ ವೃದ್ಧಿಸಲು ಕ್ರಮ ಕೈಗೊಳ್ಳಬೇಕು. ಇಲ್ಲಿ ಹೆಚ್ಚಾಗುವ ಪ್ರಾಣಿ–ಪಕ್ಷಿಗಳನ್ನು ಕಲ್ಬುರ್ಗಿ, ಇಳಕಲ್ ಹಾಗೂ ಆಲಮಟ್ಟಿಯಲ್ಲಿ ನೂತನವಾಗಿ ನಿರ್ಮಿಸಲು ಉದ್ದೇಶಿಸಿರುವ ಮೃಗಾಲಯಕ್ಕೆ ಕೊಡುಗೆ ನೀಡುವಂತೆ ಸಲಹೆ ನೀಡಿದರು. ಸಭೆಯುದ್ದಕ್ಕೂ ಉತ್ತರ ಕರ್ನಾಟಕದ ಮೃಗಾಲಯಗಳಿಗೆ ಆದ್ಯತೆ ನೀಡಬೇಕು, ನಾವು ಕನ್ನಡಿಗರೇ ಕಣ್ರಪ್ಪ ಎಂದು ಹಾಸ್ಯ ಚಟಾಕಿ ಹಾರಿಸುತ್ತಲೇ ಇದ್ದರು.

ಸಭೆಯಲ್ಲಿ ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್.ಮಹದೇವ ಸ್ವಾಮಿ, ಪಿಸಿಸಿಎಫ್ ವಿಜಯ್‌ಕುಮಾರ್ ಗೋಗಿ, ಸಿಎಫ್ ಡಾ.ಎಂ.ಮಾಲತಿ ಪ್ರಿಯಾ, ಡಿಸಿಎಫ್‌ಗಳಾದ ಡಾ.ವಿ.ಕರಿಕಾಳನ್, ಕಮಲಾ ಕರಿಕಾಳನ್, ಎಸಿಎಫ್ ರಂಗಸ್ವಾಮಿ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಹಿರಿಯ ಅಧಿಕಾರಿ ಕೆ.ರಾಮೇಶ್ವರಪ್ಪ, ಮೃಗಾಲಯದ ಪ್ರಾಧಿಕಾರದ ಸದಸ್ಯರಾದ ಗೋಕುಲ್ ಗೋವರ್ಧನ್, ಜ್ಯೋತಿ ರೇಚಮ್ಮ ಹಾಗೂ ಇನ್ನಿತರರು ಇದ್ದರು.

ಮೈಸೂರಿನ ಕೂರ್ಗಳ್ಳಿಯಲ್ಲಿರುವ ಮೈಸೂರು ಮೃಗಾಲಯದ ಚಾಮುಂಡಿ ಪುನರ್ವಸತಿ ಕೇಂದ್ರಕ್ಕೆ ಸಂಜೆ ಭೇಟಿ ನೀಡಿದ ಸಚಿವ ಉಮೇಶ್ ಕತ್ತಿ, ಅಲ್ಲಿ ಸಂರಕ್ಷಿಸಲಾಗಿರುವ ಪ್ರಾಣಿಗಳ ಬಗ್ಗೆಯೂ ಮಾಹಿತಿ ಕಲೆ ಹಾಕಿದರು. ಬಂಡೀಪುರ, ನಾಗರಹೊಳೆ ಸೇರಿದಂತೆ ವಿವಿಧೆಡೆ ಮಾನವ–ಜನ್ಯಜೀವಿ ಸಂಘರ್ಷಕ್ಕೆ ಒಳಗಾದ ಪ್ರಾಣಿಗಳನ್ನು ರಕ್ಷಿಸಿ ತಂದಿಟ್ಟಿರುವ ಪ್ರಾಣಿಗಳ ಆರೈಕೆ ಬಗ್ಗೆ ಮಾಹಿತಿ ಪಡೆದರು. ಸಂಜೆ 5.30ರವರೆಗೂ ಪುನರ್ವಸತಿ ಕೇಂದ್ರದಲ್ಲಿದ್ದ ಸಚಿವರು ಬಳಿಕ ಅಲ್ಲಿಂದ ನಿರ್ಗಮಿಸಿದರು.



ಮೃಗಾಲಯಕ್ಕೆ ಆರ್ಥಿಕ ನೆರವಿಗೆ ಮನವಿ

ಅರಣ್ಯ ಸಚಿವರು ದಿನವಿಡೀ ಮೈಸೂರು ಮೃಗಾಲಯದಲ್ಲಿ ಸಭೆ ನಡೆಸಿ, ಮಹತ್ವದ ಮಾಹಿತಿ ಪಡೆದರು. ಮೃಗಾಲಯ ಪ್ರಾಧಿಕಾರದ ವತಿಯಿಂದ ಮೈಸೂರು ಮೃಗಾಲಯಕ್ಕೆ ಆರ್ಥಿಕ ನೆರವಿಗೆ ಮನವಿ ಮಾಡಲಾಗಿದೆ. ಮೃಗಾಲಯದ ಆದಾಯ ಹಾಗೂ ಖರ್ಚು–ವೆಚ್ಚದ ಬಗ್ಗೆ ಅವರಿಗೆ ಮಾಹಿತಿ ನೀಡಲಾಗಿದೆ. ದಿನವೊಂದಕ್ಕೆ 7 ಲಕ್ಷ ರೂ. ಖರ್ಚಾಗುತ್ತದೆ. ಹಾಗೆ ತಿಂಗಳಿಗೆ 2 ಕೋಟಿ ರೂ. ಬೇಕಾಗುತ್ತದೆ. ದಿನಕ್ಕೆ ಸರಾಸರಿ 8–9 ಸಾವಿರ ಪ್ರವಾಸಿಗರು ಬಂದರೆ ಮಾತ್ರ ಮೃಗಾಲಯದ ನಿರ್ವಹಣೆಗೆ ಆದಾಯ ಲಭಿಸಲಿದೆ. ಸಂಗ್ರಹವಾದ ಹೆಚ್ಚಿನ ಆದಾಯವನ್ನು ರಾಜ್ಯದ ಇತರೆ ಜಿಲ್ಲೆಗಳ ಮೃಗಾಲಯಗಳ ನಿರ್ವಹಣೆಗೆ ಬಳಸುತ್ತಿರುವುದನ್ನು ತಿಳಿಸಲಾಗಿದೆ. ಝೂ ಆ್ಯಪ್ ನೋಡಿ ಖುಷಿಪಟ್ಟರು. ಮೈಸೂರು ಮೃಗಾಲಯ ಮಾದರಿ ಮೃಗಾಲಯವಾಗಿದೆ. ರಾಜ್ಯದ 9 ಮೃಗಾಲಯಗಳಿಗೂ ಏನೇನೂ ಬೇಕು ಎಂದು ಪಟ್ಟಿ ಮಾಡಿ ಬೆಂಗಳೂರಲ್ಲಿ ಸಭೆ ನಡೆಸುವುದಾಗಿ ಭರವಸೆ ನೀಡಿದ್ದಾರೆ. ಅಲ್ಲದೆ, ದತ್ತು ಸ್ವೀಕಾರ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸೂಚಿಸಿದ್ದಾರೆ. ಸಿಎಸ್‌ಆರ್ ಫಂಡ್ ಸಭೆ ಕರೆದು ಖಾಸಗಿ ಕಂಪನಿಗಳಿಂದ ನೆರವು ಕೊಡಿಸುವುದಾಗಿ ತಿಳಿಸಿದರು. ಮೈಸೂರು ಮೃಗಾಲಯಕ್ಕೆ ರೇಸ್‌ಕೋರ್ಸ್ ಜಾಗ ಕೊಡಿಸುವಂತೆ ಕೋರಲಾಗಿದೆ. ರೇಸ್‌ಕೋರ್ಸ್ ಜಾಗ ನ್ಯಾಯಾಲಯದಲ್ಲಿರುವುದರಿಂದ ಸರ್ಕಾರದ ಮಟ್ಟದಲ್ಲಿ ಚರ್ಚಿಸಿ ನೆರವು ನೀಡುವುದಾಗಿ ಸಚಿವರು ಭರವಸೆ ನೀಡಿದ್ದಾರೆ.

–ಎಲ್.ಆರ್.ಮಹಾದೇವಸ್ವಾಮಿ, ಅಧ್ಯಕ್ಷ, ಕರ್ನಾಟಕ ಮೃಗಾಲಯ ಪ್ರಾಧಿಕಾರ

ಇಂದಿನಿಂದ ಪೌರ ಕಾರ್ಮಿಕರ ಮುಷ್ಕರ

ದಲಿತ ಚಳವಳಿ ನವ ನಿರ್ಮಾಣ ವೇದಿಕೆ ಬೆಂಬಲ

ಮೈಸೂರು,ಜೂ.30(ಪಿಎಂ)– ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ನೇರ ಪಾವತಿ ಪೌರಕಾರ್ಮಿಕರು, ಒಳಚರಂಡಿ ಸಹಾಯಕರು ಮತ್ತು ಕಸ ಸಾಗಾಣಿಕೆ ವಾಹನ ಚಾಲಕರನ್ನು ಖಾಯಂಗೊಳಿಸಲು ಆಗ್ರಹಿಸಿ ರಾಜ್ಯಾದ್ಯಂತ ಜು.1ರಿಂದ ನಡೆಯಲಿರುವ ಮುಷ್ಕರಕ್ಕೆ ಕರ್ನಾಟಕ ದಲಿತ ಚಳವಳಿ ನವನಿರ್ಮಾಣ ವೇದಿಕೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ವೇದಿಕೆ ಮುಖಂಡ ಹರಿಹರ ಆನಂದಸ್ವಾಮಿ, ಎಲ್ಲಾ ನೌಕರರು ಈ ಮುಷ್ಕರ ಬೆಂಬಲಿಸಬೇಕೆಂದು ಕೋರಿದರು.

ನಾಗರಿಕರ ಪ್ರತಿನಿತ್ಯದ ಕೊಳೆಗಳನ್ನು ಸ್ವಚ್ಛಗೊಳಿಸಿ, ತಾಯಿಯಂತೆ ಇಡೀ ಸಮಾಜವನ್ನು ಸಲಹುವ ಪೌರಕಾರ್ಮಿಕ ಸಮುದಾಯವನ್ನು ಗೌರವಯುತವಾಗಿ ನೋಡಿಕೊಳ್ಳುವುದು ಸರ್ಕಾರದ ಆದ್ಯ ಕರ್ತವ್ಯ. ಆದರೆ ಇವರನ್ನು ಖಾಯಂ ಮಾಡಿಕೊಳ್ಳದೇ ಅವರ ಜೀವನದ ಜೊತೆಗೆ ಚೆಲ್ಲಾಟವಾಡಲಾಗುತ್ತಿದೆ ಎಂದರು. ಮುಷ್ಕರಕ್ಕೆ ಮೈಸೂರು ನಗರ ಪಾಲಿಕೆ ಪೌರಕಾರ್ಮಿಕರ ಒಕ್ಕೂಟವು ಬೆಂಬಲ ನೀಡದಿರುವ ಬಗ್ಗೆ ಪ್ರತಿಕ್ರಿಯಿಸಿ, ಇದು ನಮ್ಮ ಸಮುದಾಯದ ದುರಂತ ಅಜ್ಞಾನದ ಪರಮಾವಧಿ. ಅವರಿಗೆ ಸ್ವಂತ ದನಿ ಇಲ್ಲ. ಕೆಲ ಪಟ್ಟಭದ್ರ ಹಿತಾಸಕ್ತಿಗಳು ಹೋರಾಟ ಒಡೆದು ತಮ್ಮ ಬೇಳೆ ಬೇಯಿಸಿಕೊಳ್ಳಲು ಮುಂದಾಗಿವೆ. ಇಂತಹ ಕುತಂತ್ರದ ಬಗ್ಗೆ ಎಚ್ಚರದಿಂದ ಇದ್ದು ಒಗ್ಗಟ್ಟನ್ನು ಪ್ರದರ್ಶಿಸಿ ಹೋರಾಟ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು. ವೇದಿಕೆ ಮುಖಂಡರಾದ ಸೋಮಯ್ಯ ಮಲೆಯೂರು, ದರ್ಶನ್, ಸತೀಶ್ ಗೋಷ್ಠಿಯಲ್ಲಿದ್ದರು.



ಮೈಸೂರು ಫ್ರೀಮೇಸನ್ಸ್ ಸಂಸ್ಥೆಯವರು 'ಚಾಮುಂಡಿ ಮಕ್ಕಳ ಮನೆ'ಯಲ್ಲಿ ವಿಶ್ವ ಭ್ರಾತೃತ್ವ ದಿನ ಆಚರಿಸಿ, ಮಕ್ಕಳ ಮನೆಗೆ 49,320 ರೂ. ನೆರವು ನೀಡಿದರು. ಜೊತೆಗೆ ಹಣ್ಣು–ಹೂವಿನ ಗಿಡಗಳನ್ನು ನೆಟ್ಟರು. ಎ.ಆರ್.ಸೋಮೇಶ್, ಜಿ.ಕೆ.ಬಾಲಕೃಷ್ಣನ್, ಹೆಚ್.ಎನ್.ಜಯಗೋಪಾಲ್, ಮೋಹನ್‌ಕುಮಾರ್, ಡಾ.ಅಬ್ರಹಾಂ ಥಾಮಸ್, ಡಾ.ಟಿ.ವಿ.ರಮೇಶ್, ಮುರಳೀಧರ್, ಟಿ.ವಿ.ರಘೋತ್ತಮರಾವ್ ಚಿತ್ರದಲ್ಲಿದ್ದಾರೆ.

ಜಾನುವಾರುಗಳು ಅಕ್ರಮ ಸಾಗಾಣಿಕೆ ನಿಷೇಧ

ಮೈಸೂರು,ಜೂ.30–ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ವತಿಯಿಂದ ಸರ್ಕಾರದ ಆದೇಶದಲ್ಲಿ ಸಾಮೂಹಿಕ ಪ್ರಾಣಿ ಹತ್ಯೆಯನ್ನು ಹಬ್ಬದ ದಿನಗಳನ್ನು ಒಳಗೊಂಡಂತೆ ಅನಧಿಕೃತ ಗೋವುಗಳು, ಒಂಟೆಗಳ ಹತ್ಯೆ ಮತ್ತು ಸಾಗಾಣಿಕೆಯನ್ನು ತಡೆಗಟ್ಟಲು ಜಿಲ್ಲಾ ಸಮಿತಿಯನ್ನು ರಚಿಸಲಾಗಿದೆ. ಜು.10ರಂದು ಬಕ್ರೀದ್ ಹಬ್ಬವನ್ನು ಆಚರಿಸುವುದರಿಂದ ಅನಧಿಕೃತವಾಗಿ ಜಾನುವಾರುಗಳು, ಒಂಟೆಗಳ ಅಕ್ರಮ ಸಾಗಾಣಿಕೆ ಮತ್ತು ವಧೆ ತಡೆಗಟ್ಟುವ ಕುರಿತು ಅನಧಿಕೃತ ಗೋವುಗಳ, ಒಂಟೆಗಳ ಹತ್ಯೆಯನ್ನು ತಡೆಗಟ್ಟುವ ಜಿಲ್ಲಾ ಸಮಿತಿ ಸದಸ್ಯರು, ಸದಸ್ಯ ಕಾರ್ಯದರ್ಶಿಗಳಿಗೆ ಸೂಕ್ತ ನಿರ್ದೇಶನ ನೀಡಲು ಕೋರಿದೆ.

ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ

ಮೈಸೂರು,ಜೂ.30–ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ 2021–22ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಕನ್ನಡದಲ್ಲಿ ಶೇ.100 ಅಂಕಗಳನ್ನು ಗಳಿಸಿರುವ ಮತ್ತು 625 ಅಂಕಗಳಿಗೆ 625 ಅಂಕಗಳನ್ನು ಗಳಿಸಿರುವ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಗುವುದು. ವಿದ್ಯಾರ್ಥಿಗಳು ತಮ್ಮ ಅಂಕಪಟ್ಟಿ ಮತ್ತು ಆಧಾರ್ ಕಾರ್ಡ್‌ನ ನಕಲನ್ನು ಮ.ನ. ಲತಾ ಮೋಹನ್, ಕಾರ್ಯದರ್ಶಿಗಳು, ಕನ್ನಡ ಸಾಹಿತ್ಯ ಪರಿಷತ್ತು, ರಾಘವೇಂದ್ರ ಬಡಾವಣೆ, ಶಕ್ತಿನಗರ ಅಂಚೆ, ಮೈಸೂರು ಇಲ್ಲಿಗೆ ಜು.6ರೊಳಗೆ ಕಳುಹಿಸುವುದು. ಮಾಹಿತಿಗೆ ಮೊ.7975547238, 9164837773 ಸಂಪರ್ಕಿಸಬಹುದು.

ಪಿಎಚ್.ಡಿ ಪದವಿ



ಮೈಸೂರು,ಜೂ. 30– ಡಾ.ಜಿ.ಹೆಚ್. ನಾಗರಾಜ ಮಾರ್ಗದರ್ಶನದಲ್ಲಿ ಸಿ.ವಿ.ಲತಾ ರಾಜಕೀಯ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಜು.6, ಬಾಬೂಜಿ ಪುಣ್ಯ ಸ್ಮರಣೆ




ಮೈಸೂರು,ಜೂ.30–ಜಿಲ್ಲಾಡಳಿತದ ವತಿಯಿಂದ ಹಸಿರು ಕ್ರಾಂತಿ ಹರಿಕಾರ, ಮಾಜಿ ಉಪಪ್ರಧಾನಿ ಡಾ.ಬಾಬು ಜಗಜೀವನ್ ರಾಂ ಅವರ 36ನೇ ವರ್ಷದ ಪುಣ್ಯ ಸ್ಮರಣೆ ಅಂಗವಾಗಿ ಜು.6ರಂದು ಬೆಳಗ್ಗೆ 9.30ಕ್ಕೆ ಮೈಸೂರಿನ ರೈಲ್ವೆ ನಿಲ್ದಾಣದ ವೃತ್ತದಲ್ಲಿರುವ ಬಾಬು ಜಗಜೀವನ್ ರಾಂ ಅವರ ಪುತ್ಥಳಿಗೆ ಮಾಲಾರ್ಪಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಅಧ್ಯಕ್ಷ ಡಾ.ಬಗಾದಿ ಗೌತಮ್ ತಿಳಿಸಿದ್ದಾರೆ.

ಇಂದು ಸಂಗೀತ ಸಂಜೆ

ಮೈಸೂರು,ಜೂ.30(ಪಿಎಂ)– ಮಹತೀ ಮ್ಯೂಸಿಕಲ್ ಗ್ರೂಪ್ ವತಿಯಿಂದ ಜು.1ರಂದು ಕನ್ನಡ ಚಿತ್ರಗೀತೆಗಳ ಸಂಗೀತ ಸಂಜೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಗ್ರೂಪ್‌ನ ಅರುಣಾಚಲಮ್ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ನಾದಬ್ರಹ್ಮ ಸಂಗೀತ ಸಭಾದಲ್ಲಿ ಅಂದು ಸಂಜೆ 4ರಿಂದ ರಾತ್ರಿ 9.30ರವರೆಗೆ ಸಂಗೀತ ಕಾರ್ಯಕ್ರಮ ನಡೆಯಲಿದೆ. ತಂಡದ 8 ಮಂದಿ ಗಾಯಕರು ತಮ್ಮ ನೇತೃತ್ವದಲ್ಲಿ ಗೀತೆಗಳನ್ನು ಸಾದರಪಡಿಸಲಿದ್ದಾರೆ. ಪ್ರವೇಶ ಉಚಿತವಿದೆ ಎಂದು ಹೇಳಿದರು.

ನಿಧನ

ಡಿ.ಶಿವಣ್ಣ



ಮೈಸೂರು, ಜೂ. 30– ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ನಿವೃತ್ತ ಉಪಕುಲಸಚಿವ ಹಾಗೂ ಮೈಸೂರಿನ ಬನ್ನಿಮಂಟಪದ ಶಿವರಾತ್ರೀಶ್ವರನಗರದ ನಿವಾಸಿ ಡಿ.ಶಿವಣ್ಣ (75) ಗುರುವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ ಶಾಂತಿ, ಪುತ್ರಿ ಎಸ್. ನಂದಿನಿ, ಪುತ್ರರಾದ ರಘುನಂದನ್, ಯದುನಂದನ್, ಪ್ರಭುನಂದನ್ ಮತ್ತು ಧ್ಯಾನ್ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ವಿಶ್ವೇಶ್ವರನಗರದ ಆದಿಕರ್ನಾಟಕದ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪಿ.ರಮಣಿ



ಮೈಸೂರಿನ ರಾಮಕೃಷ್ಣನಗರ ಐ–ಬ್ಲಾಕ್ ನಿವಾಸಿ, ಮೈಸೂರು ಜಿಲ್ಲಾ ಕೈಗಾರಿಕಾ ಕೇಂದ್ರದ ನಿವೃತ್ತ ಅಧೀಕ್ಷಕಿ ಪಿ.ರಮಣಿ (67) ಬುಧವಾರ ಬೆಳಗ್ಗೆ ಅನಾರೋಗ್ಯ ಕಾರಣ ಸ್ವಗೃಹದಲ್ಲಿ ನಿಧನರಾದರು. ಮೃತರು ಪತಿ ಬಿ.ಪಿ.ಬಾಲಕೃಷ್ಣ, ಪುತ್ರ ಅನೂಪ್ ಪೂಜಾರಿ, ಪುತ್ರಿ ಅಮಿತಾ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಬುಧವಾರ ಮೈಸೂರಿನ ಗೋಕುಲಂನಲ್ಲಿರುವ ಚಿತಾಗಾರದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

01.07.2022 ಶುಕ್ರವಾರ, ಮಳೆ ನಕ್ಷತ್ರ : ಆರೀದ್ರ 22.06.2022 ರಿಂದ 05.07.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ
ತಿಥಿ: ದ್ವಿತೀಯ, ನಕ್ಷತ್ರ : ಪುಷ್ಯ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಅಮೃತ ಸ್ವಾತಂತ್ರ್ಯ ಮಾಲಿಕೆ 'ಆಧಾರ ಶಿಲೆ'–ಮೈಸೂರು ಸುತ್ತಲಿನ ಪ್ರಾಗಿತಿಹಾಸ ತಾಣಗಳ ಪರಿಚಯ– ಡಾ.ಎಸ್.ಜಿ.ರಾಮದಾಸ ರೆಡ್ಡಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, 9.00 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ "ಸ್ವಾತಂತ್ರ್ಯ ಚಳುವಳಿಯ ಪಯಣ–ಆಕಾಶವಾಣಿಯೊಂದಿಗೆ", 10.00 ಎಂ.ಡಿ. ಸುಮತಿ ಮುರಾರಿ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30ದೇವರನಾಮ–ಪಿ.ಎಸ್.ರಂಜನಿ, 12.45ಕಾದಂಬರಿ ವಿಹಾರ–ಡಾ. ಎಸ್.ಎಲ್.ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ–ಉಮೇಶ್ ಎಸ್.ಎಸ್., 1.20 ಭಾವಗೀತೆ–ಬಿ.ಸುನಂದಾ ದಿಲೀಪ್, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ–ಜಿ.ಕೆ.ರವೀಂದ್ರಕುಮಾರ್, 4.00 ಗಾನರಸೋತ್ತುಂಗ ಶ್ರೀ ಶ್ಯಾಮಕೃಷ್ಣ, ನಿರೂಪಣಾ ಸಾಹಿತ್ಯ–ಪ್ರೊ.ಆರ್.ವಿಶ್ವೇಶ್ವರನ್ ಪರಿಕಲ್ಪನೆ ಗೀತಾ ರಮಾನಂದ್, 4.30 ವೃತ್ತಿ ಮಾಗದರ್ಶನ, 6.50 ಕೃಷಿರಂಗ–ಕಿಸಾನ್‌ವಾಣಿ, 7.45 ಈಸಿ ಇಂಗ್ಲೀಷ್–ಕನ್ನಡದ ಮೂಲಕ ಇಂಗ್ಲೀಷ್ ಕಲಿಕೆಯ ಬಾನುಲಿ ಸರಣೀ, ರಚನೆ ಮತ್ತು ಪ್ರಸ್ತುತಿ–ಸಿ.ಕೆ. ವಿಜಯನಾರಸಿಂಹ, ನಿರ್ಮಾಣ–ಎಸ್.ಲಕ್ಷ್ಮೀನಾರಾಯಣ, 9.00 ವಿಜ್ಞಾನ ಭಾರತಿ, 10.30 ಸವಿನೆನಪು

■ **ಎಸ್‌ಡಿಎಂ ಮತ್ತು ಎಂಎಂಕೆ ಮಹಿಳಾ ಮಹಾವಿದ್ಯಾಲಯ :** ಸ್ವರ್ಣಾಮೃತಪ್ರಾಶನ, ಸ್ಥಳ: ಮಹಾವಿದ್ಯಾಲಯ ಆವರಣ, ಕೃಷ್ಣಮೂರ್ತಿಪುರಂ, ಬೆಳಗ್ಗೆ 6 ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಯೋಗ ತರಗತಿ, ಸ್ಥಳ: ಆಸ್ಪತ್ರೆ ಆವರಣ, ಬೆಳಗ್ಗೆ 7ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಸುವರ್ಣಪ್ರಾಶನ ಅಭಿಯಾನ, ಸ್ಥಳ: ಆಸ್ಪತ್ರೆ ಆವರಣ, ಬೆಳಗ್ಗೆ 8ರಿಂದ.

■ **ಶ್ರೀ ಆದಿಶಕ್ತಿ ಶ್ರೀ ಬಂದಂತಮ್ಮ ಮತ್ತು ಶ್ರೀ ಕಾಳಮ್ಮ ದೇವಸ್ಥಾನ ಸೇವಾ ಸಮಿತಿ :** ಆಷಾಢ ಶುಕ್ರವಾರದ ವಿಶೇಷ ಅಲಂಕಾರ, ಪೂಜೆ, ಕವಡೆ ಅಲಂಕಾರ, ಬೆಳಗ್ಗೆ 8ಕ್ಕೆ ಮಹಾಮಂಗಳಾರತಿ, ತೀರ್ಥ ಪ್ರಸಾದ, ಸಂಜೆ 5ಕ್ಕೆ ಪ್ರಸಾದ ವಿತರಣೆ, ಸ್ಥಳ: ದೇವಸ್ಥಾನ, ಕುವೆಂಪುನಗರ.

■ **ಮೈಸೂರು ವಿಶ್ವವಿದ್ಯಾನಿಲಯ, ಮಹಾರಾಜ ಕಾಲೇಜು:** ಡಿ.ಎಸ್.ಅಚ್ಯುತರಾವ್ ದತ್ತಿ ಉಪನ್ಯಾಸ ಮತ್ತು ಡಿ.ಎಸ್. ಅಚ್ಯುತರಾವ್ ಅವರ ಕೃತಿಗಳ ಲೋಕಾರ್ಪಣೆ, ಪ್ರಾಸ್ತಾವಿಕ ನುಡಿ: ಇತಿಹಾಸ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ. ಕೆ.ಸದಾಶಿವ, ಉದ್ಘಾಟನೆ: ಹಿರಿಯ ವಿದ್ವಾಂಸ ಪ್ರೊ.ಟಿ.ವಿ.ವೆಂಕಟಾಚಲಶಾಸ್ತ್ರಿ, ಕೃತಿಗಳ ಲೋಕಾರ್ಪಣೆ: ಡಿ.ಎಸ್.ಅಚ್ಯುತರಾವ್ ದತ್ತಿ ಸಂಚಾಲಕ ಡಿ.ಎ.ಪ್ರಸನ್ನ, ದತ್ತಿ ಉಪನ್ಯಾಸ: ಬೆಂಗಳೂರು ವಿವಿ ಇತಿಹಾಸ ವಿಭಾಗದ ವಿಶ್ರಾಂತ ಪ್ರಾಧ್ಯಾಪಕಿ ಪ್ರೊ.ಎಂ.ಜಮುನ ಅವರಿಂದ ಬೆಂಗಳೂರು ಕಂಟೋನ್ಮೆಂಟ್: ಪ್ರಾದೇಶಿಕ ಮಾದರಿ ಕುರಿತು ಉಪನ್ಯಾಸ, ಅಧ್ಯಕ್ಷತೆ: ಮಹಾರಾಜ ಕಾಲೇಜು ಪ್ರಿನ್ಸಿಪಾಲ್ ಪ್ರೊ. ಅನಿಟ ವಿಮ್ಲಾ ಬ್ರ್ಯಾಗ್ಸ್, ಸ್ಥಳ: ಜೂನಿಯರ್ ಬಿ.ಎ.ಹಾಲ್, ಮಹಾರಾಜ ಕಾಲೇಜು, ಬೆಳಗ್ಗೆ 10.30ಕ್ಕೆ.

■ **ಶ್ರೀ ನಟರಾಜ ಮಹಿಳಾ ಪದವಿಪೂರ್ವ ಕಾಲೇಜು :** ಸ್ನೇಹ ಸಿಂಚನ–ಪ್ರತಿಭಾ ಪುರಸ್ಕಾರ ಸಮಾರಂಭ, ಸಾನ್ನಿಧ್ಯ: ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ : ವಿಶ್ರಾಂತ ನ್ಯಾಯಾಧೀಶ ಅರಳಿ ನಾಗರಾಜ ಗಂಗಾವತಿ, ಪ್ರತಿಭಾ ಪುರಸ್ಕಾರ : ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಅಧ್ಯಕ್ಷತೆ: ಶ್ರೀ ನಟರಾಜ ಮಹಿಳಾ ಪದವಿಪೂರ್ವ ಕಾಲೇಜು ಪ್ರಿನ್ಸಿಪಾಲ್ ವಿ.ಡಿ.ಸುನೀತಾರಾಣಿ, ಉಪಸ್ಥಿತರು: ಪಾಲಿಕೆ ಸದಸ್ಯ ಬಿ.ವಿ. ಮಂಜುನಾಥ್, ಸ್ಥಳ: ಶ್ರೀ ನಟರಾಜ ಸಭಾ ಭವನ, ಬೆಳಗ್ಗೆ 11ಕ್ಕೆ.

■ **ಎಸ್‌ಜೆಸಿಇ–ಸೈನ್ಸ್ ಅಂಡ್ ಟೆಕ್ನಾಲಜಿ ಎಂಟರ್‌ಪ್ರೈನರ್ ಪಾರ್ಕ್:** ವೇಗವರ್ಧಕ ಕಾರ್ಯಕ್ರಮಕ್ಕೆ ಚಾಲನೆ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಪ್ರಾಸ್ತಾವಿಕ ಭಾಷಣ: ಏಮ್ ಹೈ ಕನ್ಸಲ್ಟಿಂಗ್ ಸಿಇಓ ಎನ್.ರವಿಶಂಕರ್, ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ, ಎಕ್ಸೆಲ್‌ಸಾಫ್ಟ್ ಸಿಇಓ ಸುಧನ್ವಾ, ಡಾ.ಸುರೇಶ್, ಸ್ಥಳ: ಸ್ಟೆಪ್, ಎಸ್‌ಜೆಸಿಇ ಆವರಣ, ಬೆಳಗ್ಗೆ 11ಕ್ಕೆ.

■ **ಬ್ರಹ್ಮೀಭೂತ ಶ್ರೀ ವಾಸುದೇವ ಮಹಾರಾಜ್ ಫೌಂಡೇಷನ್:** ರಾಷ್ಟ್ರೀಯ ವೈದ್ಯರ ದಿನಾಚರಣೆ, ಹಿರಿಯ ಕೀಲುಮೂಳೆ ತಜ್ಞ ವೈದ್ಯ ಡಾ.ಎಲ್.ಯೋಗಾನರಸಿಂಹಾಚಾರ್ ಅವರಿಗೆ ಡಾ. ಬಿ.ಸಿ.ರಾಯ್ ಸದ್ಭಾವನಾ ಪ್ರಶಸ್ತಿ ಪ್ರದಾನ, ಡಾ.ಬಿ.ಸಿ.ರಾಯ್ ಭಾವಚಿತ್ರಕ್ಕೆ ಪುಷ್ಪಾರ್ಚನೆ: ಭಾನವಿ ಆಸ್ಪತ್ರೆ ಸಂಸ್ಥಾಪಕ ಡಾ. ವಿಜಯ ಚೆಲುವರಾಜ್, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉಪಸ್ಥಿತರು : ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದ ಸಿಇಓ ಕೆ.ಆರ್. ಯೋಗಾನರಸಿಂಹನ್, ಕಾಂಗ್ರೆಸ್ ಮುಖಂಡ ಎನ್.ಎಂ. ನವೀನ್ ಕುಮಾರ್, ಸ್ಥಳ: ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ, ಬೆಳಗ್ಗೆ 11ಕ್ಕೆ.

■ **ಸುಯೋಗ್ ಆಸ್ಪತ್ರೆ:** ವೈದ್ಯರ ದಿನಾಚರಣೆ, ಉದ್ಘಾಟನೆ: ಪರಿಷತ್ ಸದಸ್ಯ ಮಧು ಮಾದೇಗೌಡ, ಅಧ್ಯಕ್ಷತೆ: ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಸನ್ಮಾನಿತರು: ಡಾ.ವಾಸುದೇವ ಪೈ, ಡಾ.ದರ್ಶನ್, ಡಾ.ಗಿರೀಶ್, ಡಾ.ಶ್ರೀಧರ್, ಡಾ.ಪ್ರಕಾಶ್‌ಬಾಬು, ಸ್ಥಳ: ಆಸ್ಪತ್ರೆ ಆವರಣ, ರಾಮಕೃಷ್ಣನಗರ, ಸಂಜೆ 5ಕ್ಕೆ.

■ **ಗಾನಭಾರತೀ :** ವಿದುಷಿ ಮಾಧುರಿ ಕೌಶಿಕ್ ಅವರಿಂದ ಗಾಯನ, ವಿದುಷಿ ಶೃತಿ ಸಿ.ವಿ.–ಪಿಟೀಲು, ವಿದ್ವಾನ್ ಕೌಶಿಕ್ ಶ್ರೀಧರ್–ಮೃದಂಗ, ವಿದ್ವಾನ್ ಶ್ರೀನಿಧಿ ಕೆ.–ಘಟಂ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

■ **ರೋಟರಿ ಮೈಸೂರು ಉತ್ತರ :** ಪದವಿ ಪ್ರದಾನ ಸಮಾರಂಭ, ಪದವಿ ಪ್ರದಾನ : ಜಿಲ್ಲಾ ಗವರ್ನರ್ ಮೇಜರ್ ಡೋನರ್ ಪ್ರಕಾಶ್ ಕಾರಂತ್, ಪದವಿ ಸ್ವೀಕಾರ : ರೋಟರಿ ಮೈಸೂರು ಉತ್ತರ ಅಧ್ಯಕ್ಷ ಡಾ. ಎಸ್.ಎಚ್. ಜಗದೀಶ್, ಗೌರವ ಅತಿಥಿಗಳು : ಕೆ. ಮಂಜುನಾಥ್, ರಾಜಶೇಖರ ಕದಂಬ, ಸ್ಥಳ: ಹೆರಿಟೇಜ್ ಸ್ಪೋರ್ಟ್ಸ್ ಕ್ಲಬ್, ವಿಜಯನಗರ 3ನೇ ಹಂತ, ಸಂಜೆ 6ಕ್ಕೆ.

■ **ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ ಶೃಂಗೇರಿ :** ಶ್ರೀ ಶುಭಕೃನ್ನಾಮ ಸಂವತ್ಸರದ ಆಷಾಢ ಶುಕ್ರವಾರಗಳ ವಿಶೇಷ ಮಹೋತ್ಸವಗಳು, ಬೆಳಗ್ಗೆ 8ಕ್ಕೆ ಮಹಾಸಂಕಲ್ಪ, ಅಭಿಷೇಕ, 8.30ಕ್ಕೆ ಶ್ರೀ ಸೂಕ್ತಹೋಮ, 11.30ಕ್ಕೆ ಹೋಮ ಪೂರ್ಣಾಹುತಿ, ಮಧ್ಯಾಹ್ನ 12ಕ್ಕೆ ವಿಶೇಷ ಪೂಜೆ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸಂಜೆ 7ಕ್ಕೆ ಶ್ರೀಗಜಲಕ್ಷ್ಮಿ ಅಲಂಕಾರ, ರಾಕೇಶ್ ಅಯ್ಯರ್ ಮತ್ತು ವೃಂದದವರಿಂದ ಹಾಡುಗಾರಿಕೆ, ಸ್ಥಳ: ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ.

ನ್ಯಾಯಾಂಗ ಕ್ರಿಯಾಶೀಲತೆಯು ವಂಚಿತ ವರ್ಗಕ್ಕೆ ನ್ಯಾಯ ಒದಗಿಸಲಿದೆ

ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಎ.ಎಸ್.ಬೋಪಣ್ಣ ಅಭಿಮತ: ನ್ಯಾಯಾಂಗದ ಕ್ರಿಯಾಶೀಲತೆ ಸಂಬಂಧ ಸಮ್ಮೇಳನ ಉದ್ಘಾಟನೆ



ದಿ ಇಂಡಸ್ಟ್ರಿಯಲ್ ಮ್ಯಾನೇಜ್‌ಮೆಂಟ್ ಅಸೋಸಿಯೇಷನ್ ವತಿಯಿಂದ ಮೈಸೂರಿನ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನಲ್ಲಿ ಗುರುವಾರ ಏರ್ಪಡಿಸಿದ್ದ ಸಮ್ಮೇಳನವನ್ನು ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಎ.ಎಸ್.ಬೋಪಣ್ಣ ಉದ್ಘಾಟಿಸಿದರು. (ಎಡದಿಂದ)ಅಸೋಸಿಯೇಷನ್ ಅಧ್ಯಕ್ಷ ಎ.ಸಿ.ನರೇಂದ್ರ, ಸುತ್ತೂರು ಮಠಾಧೀಶರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ, ಮೆರಿಟರ್ ಅಧ್ಯಕ್ಷ ಡಾ.ಎನ್.ಮುತ್ತುಕುಮಾರ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಜೂ.30(ಆರ್‌ಕೆ)–ನ್ಯಾಯಾಂಗ ಕ್ರಿಯಾಶೀಲತೆ (Judicial Activism)ಯು ಸಮಾಜದಲ್ಲಿ ತುಳಿತಕ್ಕೊಳಗಾದವರಿಗೆ ನ್ಯಾಯ ದೊರಕಿಸಲಿದೆ ಎಂದು ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಎ.ಎಸ್.ಬೋಪಣ್ಣ ಅಭಿಪ್ರಾಯಪಟ್ಟಿದ್ದಾರೆ.

ದಿ ಇಂಡಸ್ಟ್ರಿಯಲ್ ಮ್ಯಾನೇಜ್‌ಮೆಂಟ್ ಅಸೋಸಿಯೇಷನ್(IMA) ವತಿಯಿಂದ ಮೈಸೂರಿನ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಸಭಾಂಗಣದಲ್ಲಿ ಏರ್ಪಡಿಸಿದ್ದ 'Judicial Activism with Special Reference to Industrial Laws' ವಿಷಯ ಕುರಿತ 'JIGNYASA-2022' ಒಂದು ದಿನದ ಸಮ್ಮೇಳನ ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ನ್ಯಾಯಾಂಗದ ಪರಿವೀಕ್ಷಣೆ ಇಲ್ಲದಿದ್ದರೆ ಪ್ರಜಾಪ್ರಭುತ್ವ ವ್ಯವಸ್ಥೆಯೇ ಬುಡ ಮೇಲಾಗುತ್ತದೆ ಎಂದು ನುಡಿದರು.

ಕೂಲಿ ಕಾರ್ಮಿಕರು, ವಿಚಾರಣಾಧೀನ ಕೈದಿಗಳು, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದಂತಹ ವರ್ಗಗಳಿಗೆ ನ್ಯಾಯ ಒದಗಿಸುವಲ್ಲಿ ನ್ಯಾಯಾಂಗದ ಕ್ರಿಯಾಶೀಲತೆ ಪ್ರಮುಖ ಪಾತ್ರ ವಹಿಸುವುದರಿಂದ ನ್ಯಾಯಾಂಗ ಸಕ್ರಿಯವಾಗಿರುವುದು ಅತ್ಯಂತ ಅವಶ್ಯ ಎಂದು ನ್ಯಾಯಮೂರ್ತಿ ಬೋಪಣ್ಣ ನುಡಿದರು.

ನ್ಯಾಯಾಂಗ ಕ್ರಿಯಾಶೀಲತೆ ಪ್ರದರ್ಶಿಸುವ ಕೋರ್ಟುಗಳು, ಸಾಮಾನ್ಯ ಕೋರ್ಟುಗಳಿಗಿಂತ ಹೆಚ್ಚು ಪರಿಣಾಮಕಾರಿಯಾಗಿರುತ್ತವೆ. ಏಕೆಂದರೆ ಅವು ಶಾಸಕಾಂಗ ಮತ್ತು ಕಾರ್ಯಾಂಗಗಳ ದಾಳಿಯಿಂದ ನಾಗರಿಕರನ್ನು, ಕಾನೂನುಗಳ ಮೂಲಕ ರಕ್ಷಿಸುತ್ತವೆ ಎಂದು ತಿಳಿಸಿದರು.

ಸಾಮಾಜಿಕ, ಆರ್ಥಿಕ ಹಕ್ಕುಗಳನ್ನು ಕಾನೂನು ಮೂಲಕ ಜಾರಿಗೊಳಿಸಬೇಕಾದ ಸಂದರ್ಭದಲ್ಲಿ ನ್ಯಾಯಾಧೀಶರು ಕಲಂ 21ರ ವಿಶ್ಲೇಷಣೆಯನ್ನು ವಿಸ್ತರಿಸಬೇಕಾಗುತ್ತದೆ. ಅದು ನಾಗರಿಕರ ಜೀವನ ಮತ್ತು ಸಮಾನತೆ ಹಕ್ಕನ್ನು ಖಾತರಿಪಡಿಸುತ್ತದೆ ಶಾಸಕಾಂಗ ಹಾಗೂ ಕಾರ್ಯಾಂಗದ ಪರಿಧಿಯೊಳಗೆ ನಾಗರಿಕ ಹಾಗೂ ರಾಜಕೀಯ ಹಕ್ಕುಗಳು ಸಂವಿಧಾನಬದ್ಧವಾಗಿ ಖಾತರಿಯಾದರೂ, ಹೈಕೋರ್ಟ್‌ಗಳು ಹಾಗೂ ಸುಪ್ರೀಂಕೋರ್ಟ್ ಈ ಹಕ್ಕುಗಳ ಜಾರಿಗಾಗಿ ಸರ್ಕಾರವನ್ನು ಹೊಣೆಯಾಗಿಸಬಹುದು ಎಂದು ನುಡಿದರು.

ಕಾರ್ಯಾಂಗದ ವೈಫಲ್ಯ: ಹಕ್ಕುಗಳ ಪರಿಣಾಮಕಾರಿ ಅನುಷ್ಠಾನದಲ್ಲಿ ಕೋರ್ಟ್‌ಗಳು ಬಡವರ ಅಭಿವೃದ್ಧಿಗಾಗಿ ಇರುವ ಯೋಜನೆಗಳನ್ನು ಜಾರಿಗೊಳಿಸುವಲ್ಲಿ ಕಾರ್ಯಾಂಗದ ವೈಫಲ್ಯವನ್ನು ಎತ್ತಿ ತೋರಿಸಬಹುದು. ಹಾಗಾಗಿ ಯಾವುದೇ ಸಂವಿಧಾನದ ಆಶಯಗಳಿಗೆ ಧಕ್ಕೆ ಬಂದಲ್ಲಿ ಸರ್ಕಾರವನ್ನೇ ಹೊಣೆಯಾಗಿಸಬಹುದು ಎಂದ ಅವರು, ಆದರೆ ಕೆಲ ವಿಶೇಷ ಸಂದರ್ಭಗಳಲ್ಲಿ ನ್ಯಾಯಾಂಗವು ಮಧ್ಯ ಪ್ರವೇಶಿಸುತ್ತದೆ. ಇದನ್ನು ನ್ಯಾಯಾಂಗದ ಕ್ರಿಯಾಶೀಲತೆ ಎನ್ನಬಹುದಾದರೂ, ಈ ನಿಲುವು ಅಂತಿಮವಾಗಿ ಜನರ ಅನುಕೂಲಕ್ಕಾಗಿಯೇ ಇರುತ್ತದೆ ಎಂದರು.

ಕೋವಿಡ್–19 ಸಂದರ್ಭದಲ್ಲಿ ಕೋರ್ಟ್‌ಗಳ ಇಂತಹ ಕ್ರಿಯಾಶೀಲತೆಯು ಒಂದು ಪ್ರಮುಖ ಉದಾಹರಣೆಯಾಗಿದೆ. ಕೈಗಾರಿಕಾ ಕಾಯ್ದೆಗಳ ಬಗ್ಗೆ ಪ್ರಸ್ತಾಪಿಸಿದ ಅವರು, ಕಾರ್ಮಿಕ ಕಾನೂನು ವ್ಯಾಪ್ತಿಯಡಿ ಬರುವ ಅಸಂಘಟಿತ ಕಾರ್ಮಿಕರ ಸಂವಿಧಾನಬದ್ಧ ಸೌಲಭ್ಯಗಳನ್ನು ಕಲ್ಪಿಸಿರುವ ಹಲವು ಉದಾಹರಣೆಗಳಿವೆ ಎಂದು ಹೇಳಿದರು.

ನ್ಯಾಯಾಂಗದ ಪರಾಮರ್ಶೆ ಪ್ರಕ್ರಿಯೆಯಲ್ಲಿ ನಿರ್ಧಾರ ಕೈಗೊಳ್ಳುವಾಗ ನ್ಯಾಯಾಲಯಗಳು ಅಂದಿನ ಪರಿಸ್ಥಿತಿಯನ್ನು ಗಮನದಲ್ಲಿರಿಸಿಕೊಳ್ಳಬೇಕು. ಇದರಿಂದ ಕೆಲವೊಮ್ಮೆ ನ್ಯಾಯಾಂಗ ಟೀಕೆಗೂ ಒಳಗಾಗುವ ಸಾಧ್ಯತೆ ಇರುತ್ತದೆ. ಆದರೆ ಇಂತಹ ಪರಾಮರ್ಶೆಗಳ ಅನುಪಸ್ಥಿತಿಯಲ್ಲಿ ನಮ್ಮ ಪ್ರಜಾಪ್ರಭುತ್ವವು ಕೇವಲ ಬೂಟಾಟಿಕೆಯಾಗುತ್ತದೆಯಲ್ಲದೆ, ಸಂವಿಧಾನವು ಯಾವುದೇ ಬಲವಿಲ್ಲದೇ ಸೊರಗುತ್ತದೆ ಎಂದು ನ್ಯಾಯಮೂರ್ತಿ ಬೋಪಣ್ಣ ಇದೇ ವೇಳೆ ನುಡಿದರು.

ಸುತ್ತೂರು ಮಠಾಧೀಶರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದ ಸಮ್ಮೇಳನದಲ್ಲಿ ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ, ಮೆರಿಟರ್ ಸಂಸ್ಥೆ ಅಧ್ಯಕ್ಷ ಡಾ.ಎನ್.ಮುತ್ತುಕುಮಾರ್, ದಿ ಇಂಡಸ್ಟ್ರಿಯಲ್ ಮ್ಯಾನೇಜ್‌ಮೆಂಟ್ ಅಸೋಸಿಯೇಷನ್ ಅಧ್ಯಕ್ಷ ಎ.ಸಿ.ನರೇಂದ್ರ, ಕಾರ್ಯದರ್ಶಿ ಜತಿನ್ ಅಚ್ಚಯ್ಯ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಸಮಾಜದಲ್ಲಿ ದುರಾಸೆ ಎಂಬ ರೋಗ ವ್ಯಾಪಕವಾಗಿದೆ

ಮಾಜಿ ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಕಳವಳ

ಮೈಸೂರು, ಜೂ. 30 (ಆರ್‌ಕೆ)– ನಮ್ಮ ಸಮಾಜದಲ್ಲಿ ದುರಾಸೆ ಎಂಬ ರೋಗ ವ್ಯಾಪಕವಾಗಿದೆ ಎಂದು ಮಾಜಿ ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಇಂದಿಲ್ಲಿ ಕಳವಳ ವ್ಯಕ್ತಪಡಿಸಿದ್ದಾರೆ.

ದಿ ಇಂಡಸ್ಟ್ರೀಯಲ್ ಮ್ಯಾನೇಜ್‌ಮೆಂಟ್ ಅಸೋಸಿಯೇಷನ್ (ಐಎಂಎ) ವತಿಯಿಂದ ಮೈಸೂರಿನ ಜೆಎಸ್‌ಎಸ್ ಫಾರ್ಮಸಿ ಕಾಲೇಜು ಸಭಾಂಗಣದಲ್ಲಿ ಏರ್ಪಡಿಸಿದ್ದ `Judicial Activism with special reference to industrial laws' 22 ವಿಷಯ ಕುರಿತ `JIGNYASA-2022' ಒಂದು ದಿನದ ಸಮ್ಮೇಳನದ ಗೋಷ್ಠಿಯಲ್ಲಿ ಪಾಲ್ಗೊಂಡು ಅವರು ಮಾತನಾಡುತ್ತಿದ್ದರು.

ಹಣ, ಆಸ್ತಿ, ಸಂಪತ್ತು ಗಳಿಸಬೇಕೆಂಬ ದುರಾಸೆಯಲ್ಲಿ ಅಕ್ರಮ, ಅನ್ಯಾಯ, ಭ್ರಷ್ಟಾಚಾರ ಮಾಡುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಕೋವಿಡ್‌ನಂತಹ ವೈರಾಣುವಿಗೆ ಮದ್ದು ಕಂಡು ಹಿಡಿಯಲಾಗಿದೆ. ಅದೇ ಮಾದರಿಯ ಇನ್ನಷ್ಟು ರೋಗಗಳು ಸೃಷ್ಟಿಯಾದರೂ, ಸಂಶೋಧನೆ ಮಾಡಿ ನಮ್ಮ ವಿಜ್ಞಾನಿಗಳು ಔಷಧಿ ಕಂಡು ಹಿಡಿಯುತ್ತಾರೆ. ಆದರೆ, ಈ ದುರಾಸೆಗೆ ಯಾವ ಮದ್ದೂ ಇಲ್ಲ ಎಂದು ಅವರು ನೊಂದು ನುಡಿದರು. ಅಪರಾಧವೆಸಗಿ ಮಾಡಬಾರದ್ದನ್ನೆಲ್ಲಾ ಮಾಡಿ ಜೈಲು ಸೇರಿದವರು ಬಿಡುಗಡೆಯಾದಾಗ ಅವರಿಗೆ ಭಾರೀ ಹಾರ ತುರಾಯಿ ಹಾಕಿ ಜೈಕಾರ ಕೂಗಿ ಅದ್ದೂರಿಯಾಗಿ ಸ್ವಾಗತಿಸಿ, ಮೆರವಣಿಗೆಯಲ್ಲಿ ಕರೆತರುವಂತಹ ಪ್ರಸಂಗಗಳನ್ನು ಗಮನಿಸಿದಾಗ ನಮ್ಮ ಸಮಾಜಕ್ಕೆ ಯಾವ ರೀತಿಯ ಸಂದೇಶ ರವಾನೆಯಾಗಬಹುದೆಂಬುದನ್ನು ಗಂಭೀರವಾಗಿ ಯೋಚಿಸಬೇಕಾಗಿದೆ ಎಂದು ಅವರು ಆತಂಕದಿಂದ ನುಡಿದರು.

ಬೋಫೋರ್ಸ್, ಕಾಮನ್‌ವೆಲ್ತ್ ಗೇಮ್ಸ್, 2ಜಿಯಂತಹ ಹಲವು ಹಗರಣಗಳಲ್ಲಿ ಈ ದೇಶದ ಬೊಕ್ಕಸಕ್ಕೆ ಲಕ್ಷಾಂತರ ಕೋಟಿ ರೂ. ಹಣ ನಷ್ಟವಾಯಿತು. ಭ್ರಷ್ಟತೆ ಮತ್ತಷ್ಟು ಬಲಿಷ್ಠವಾಗುತ್ತಿರುವಾಗ ಸಾಮಾನ್ಯನ ಬದುಕು ಹಸನಾಗಬೇಕೆಂಬ ಕನಸು ಕಾಣುವುದರಲ್ಲಿ ಅರ್ಥವಿದೆಯೇ? ಎಂದು ಪ್ರಶ್ನಿಸಿದ ನ್ಯಾಯಮೂರ್ತಿಗಳು, ಇಂತಹ ಕೆಟ್ಟ ವ್ಯವಸ್ಥೆಯಲ್ಲಿ ಸಾಮಾಜಿಕ ಬದಲಾವಣೆ ಮಾಡುವವರಾರು ಎಂದರು. ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗಗಳು ಕೈಚೆಲ್ಲಿದರೆ, ದುಷ್ಟ ವ್ಯವಸ್ಥೆ ಸರಿಪಡಿಸುವುದಾದರೂ ಹೇಗೆ? ಇದು ಗಂಭೀರ ವಿಚಾರವಾಗಿದ್ದು, ಸಮಾಜದ ಪ್ರತಿಯೊಬ್ಬರೂ ಮೊದಲು ತಾವು ಬದಲಾಗಬೇಕು. ಭ್ರಷ್ಟ ಸಮಾಜದಿಂದ ಮುಂದೆ ಅಪಾಯ ಸಂಭವಿಸುತ್ತದೆ. ಈಗಲಾದರೂ ಹಣ, ಅಧಿಕಾರ, ಸಂಪತ್ತು ಗಳಿಸಬೇಕೆಂಬ ದುರಾಸೆ ಬಿಟ್ಟು ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡರೆ ಮಾತ್ರ ಸಮಾಜದಲ್ಲಿ ಶಾಂತಿ, ಸಹಬಾಳ್ವೆ ಕಾಣಲು ಸಾಧ್ಯ ಎಂದು ನ್ಯಾ. ಸಂತೋಷ್ ಹೆಗ್ಡೆ ಅವರು ಇದೇ ವೇಳೆ ಅಭಿಪ್ರಾಯಪಟ್ಟರು.

ಮಾನವೀಯತೆ ಇರಲಿ: ಮಾನವೀಯತೆ, ಇದ್ದುದ್ದರಲ್ಲಿ ತೃಪ್ತಿಯನ್ನು ನಮ್ಮ ಜನರು ಅಳವಡಿಸಿಕೊಳ್ಳಬೇಕಿದೆ. ಈ ಹಿಂದೆ ಶಾಲೆಗಳಲ್ಲಿ ನೀತಿ ಪಾಠ (Moral Education) ಹೇಳಿಕೊಡುತ್ತಿದ್ದರು. ತಂದೆ–ತಾಯಿ, ಅಜ್ಜ–ಅಜ್ಜಿ, ಪೋಷಕರು ತಮ್ಮ ಮಕ್ಕಳು, ಮೊಮ್ಮಕ್ಕಳಿಗೆ ಮೌಲ್ಯಾಧಾರಿತ ವಿಷಯಗಳನ್ನು ಮನದಟ್ಟು ಮಾಡಿಸುತ್ತಿದ್ದರು. ಈಗ ದುಡಿಮೆಯ ದುರಾಸೆಗೆ ದಾಸರಾಗಿ ತಮ್ಮ ಮಕ್ಕಳು ಏನು ಮಾಡುತ್ತಿದ್ದಾರೆಂಬುದನ್ನು ಗಮನಿಸಲು ಸಮಯವಿಲ್ಲ. ಅಜ್ಜ, ಅಜ್ಜಿ, ತಂದೆ ತಾಯಿಯರು ವೃದ್ಧಾಶ್ರಮಗಳನ್ನು ಆಶ್ರಯಿಸುವಂತಾಗಿರುವಾಗ ನಮ್ಮ ಯುವ ಸಮೂಹಕ್ಕೆ ಜೀವನದ ಮೌಲ್ಯಗಳನ್ನು ಹೇಳುವವರಾದರೂ ಯಾರು ಎಂದು ಅವರು ಪ್ರಶ್ನಿಸಿದರು.

ಧರ್ಮ, ಭಾಷಾ ಘರ್ಷಣೆ: ಧರ್ಮ, ಜಾತಿ, ಭಾಷೆ ಹೆಸರಲ್ಲಿ ಘರ್ಷಣೆಗಳಾಗಿ ಸಮಾಜದಲ್ಲಿ ಬಿರುಕು ಉಂಟಾಗುತ್ತಿದೆ. ಧರ್ಮ, ಭಾಷೆಗಳಿದ್ದರೆ ಅದನ್ನು ನಿಮ್ಮ ಮನೆಯಲ್ಲಿರಿಸಿಕೊಳ್ಳಿ. ಸಮಾಜದ ಶಾಂತಿ, ಸೌಹಾರ್ದತೆಗೆ ಧಕ್ಕೆ ತರುವಂತಹ ವ್ಯಾಮೋಹ ಬಲು ಅಪಾಯಕಾರಿ ಎಂದು ಸಂತೋಷ್ ಹೆಗ್ಡೆ ತಿಳಿಸಿದರು.

ಹಾರ್ಡ್‌ವೇರ್ ಅಂಗಡಿ ಶೆಟರ್ ಮೀಟಿ ಚಿನ್ನ, ಬೆಳ್ಳಿಯ ಬಿಸ್ಕತ್ ಕಳವು

ಕ್ರೈಂ ಬಾಕ್ಸ್

ಮೈಸೂರು, ಜೂ.30– ಹಾರ್ಡ್‌ವೇರ್ ಅಂಗಡಿ ಶೆಟರ್ ಮೀಟಿ ಚಿನ್ನ ಹಾಗೂ ಬೆಳ್ಳಿ ಕಳವು ಮಾಡಿದ ಘಟನೆ ಮೈಸೂರಿನ ಕಲ್ಯಾಣಗಿರಿಯಲ್ಲಿ ನಡೆದಿದೆ. ಕಲ್ಯಾಣಗಿರಿಯ ಡಾ.ರಾಜ್‌ಕುಮಾರ್ ರಸ್ತೆಯಲ್ಲಿರುವ ಶ್ರೀಲಕ್ಷ್ಮಿ ಟ್ರೇಡರ್ಸ್ ಪೇಯಿಂಟ್ ಆಂಡ್ ಹಾರ್ಡ್‌ವೇರ್ ಅಂಗಡಿಯ ಶೆಟರ್ ಅನ್ನು ಜೂ.27ರಂದು ರಾತ್ರಿ ಮೀಟಿ ಒಳ ನುಗ್ಗಿದ ಖದೀಮರು ಕ್ಯಾಶ್ ಡ್ರಾನಲ್ಲಿದ್ದ 1 ಗ್ರಾಂ ತೂಕದ ಚಿನ್ನದ ಡಾಲರ್, 35 ಗ್ರಾಂ ತೂಕದ ಬೆಳ್ಳಿ ಬಿಸ್ಕತ್ ಹಾಗೂ ಸಾವಿರ ರೂ. ನಗದು ಕಳವು ಮಾಡಿದ್ದಾರೆ. ಈ ಸಂಬಂಧ ಅಂಗಡಿ ಮಾಲೀಕ ರಂಗನಾಥ್ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಉದಯಗಿರಿ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಆನ್‌ಲೈನ್‌ನಲ್ಲಿ ವಕೀಲರಿಂದ 97 ಸಾವಿರ ರೂ. ಸುಲಿಗೆ

ಮೈಸೂರು, ಜೂ.30– ಮೊಬೈಲ್‌ಗೆ ಲಿಂಕ್ ಕಳುಹಿಸಿ ವಕೀಲರೊಬ್ಬರ ಖಾತೆಯಿಂದ 97 ಸಾವಿರ ರೂ. ಅಕ್ರಮವಾಗಿ ವರ್ಗಾವಣೆ ಮಾಡಿಕೊಂಡಿರುವ ಬಗ್ಗೆ ವರದಿಯಾಗಿದೆ.

ಮೈಸೂರಿನ ಶಾಂತಿನಗರದಲ್ಲಿ ವಾಸವಿರುವ ವಕೀಲ ಅಲೀಂ ಷರೀಫ್ ಅವರು ಪ್ರೊಫೆಷನಲ್ ಕೊರಿಯರ್‌ನ ನಂಬರ್ ಅನ್ನು ಆನ್‌ಲೈನ್‌ನಲ್ಲಿ ಹುಡುಕುತ್ತಿದ್ದಾಗ ಅವರಿಗೆ 6393809564 ಮೊಬೈಲ್ ನಂಬರ್ ದೊರೆತಿದೆ. ಸದರಿ ನಂಬರ್ ಅನ್ನು ಸಂಪರ್ಕಿಸಿದಾಗ ಮಾತನಾಡಿದ ವ್ಯಕ್ತಿ ವಕೀಲರ ಮೊಬೈಲ್‌ಗೆ ಲಿಂಕ್‌ವೊಂದನ್ನು ಕಳುಹಿಸಿ ಅದರ ಮೇಲೆ ಕ್ಲಿಕ್ ಮಾಡುವಂತೆ ತಿಳಿಸಿದ್ದಾನೆ. ವಕೀಲರು ಅದರಂತೆ ಲಿಂಕ್ ಮೇಲೆ ಕ್ಲಿಕ್ ಮಾಡಿದಾಗ ಹಂತ ಹಂತವಾಗಿ 97 ಸಾವಿರ ರೂ. ಅವರ ಬ್ಯಾಂಕ್ ಖಾತೆಯಿಂದ ವರ್ಗಾವಣೆಯಾಗಿದೆ. ಈ ಸಂಬಂಧ ಮೈಸೂರು ನಗರ ಸೆನ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ರೋಡ್ ರೋಲರ್‌ಗೆ ಬೈಕ್ ಡಿಕ್ಕಿ: ಹಿಂಬದಿ ಸವಾರ ಸಾವು

ಬನ್ನೂರು, ಜೂ.30– ರೋಡ್ ರೋಲರ್‌ಗೆ ಬೈಕ್ ಡಿಕ್ಕಿ ಹೊಡೆದು ಹಿಂಬದಿ ಸವಾರ ಸಾವನ್ನಪ್ಪಿದ ಘಟನೆ ಟಿ. ನರಸೀಪುರ ತಾಲೂಕು ಯಾಚೇನಹಳ್ಳಿ ಬಳಿ ಸಂಭವಿಸಿದೆ.

ಯಾಚೇನಹಳ್ಳಿ ಗ್ರಾಮದ ನವೀನ್ ಎಂಬಾತ ತನ್ನ ಸಂಬಂಧಿಕರಾದ ನಾಗೇಶ್(45) ಹೀರೊ ಹೋಂಡಾ ಪ್ಯಾಷನ್ ಪ್ರೋ ಬೈಕ್‌ನಲ್ಲಿ (ಕೆಎ.55, ಡಬ್ಲ್ಯೂ.0947) ತುರುಗನೂರಿನಿಂದ ಯಾಚೇನಹಳ್ಳಿಗೆ ಕರೆದೊಯ್ಯುತ್ತಿದ್ದ ವೇಳೆ ಯಾಚೇನಹಳ್ಳಿ ಬಳಿಯ ಮಲ್ಲಿಕಾರ್ಜುನ ರೈಸ್ ಮಿಲ್ ಮುಂಭಾಗ ನಿಂತಿದ್ದ ರೋಡ್ ರೋಲರ್‌ಗೆ ಬೈಕ್ ಡಿಕ್ಕಿ ಹೊಡೆದಿದೆ. ಈ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡ ನಾಗೇಶ್ ಸ್ಥಳದಲ್ಲೇ ಮೃತಪಟ್ಟಿದ್ದರೆ, ನವೀನ್‌ಗೆ ಸಣ್ಣಪುಟ್ಟ ಗಾಯವಾಗಿದೆ. ಬನ್ನೂರು ಠಾಣೆಯಲ್ಲಿ ದೂರು ದಾಖಲಾಗಿದೆ.

ಕುಡಿಯಲು ಹಣ ನೀಡದ್ದಕ್ಕೆ ಸಾಕು ತಾಯಿ ಕೊಂದ ಪೇಂಟರ್

ಬೈಲುಕುಪ್ಪೆ, ಜೂ.30– ಕುಡಿಯಲು ಹಣ ನೀಡಲಿಲ್ಲ ಎಂಬ ಕಾರಣಕ್ಕಾಗಿ ಪೇಂಟರ್ ಒಬ್ಬ ತನ್ನ ಸಾಕು ತಾಯಿಯ ಮೇಲೆ ಮಚ್ಚಿನಿಂದ ಹಲ್ಲೆ ನಡೆಸಿ ಹತ್ಯೆಗೈದ ಘಟನೆ ಪಿರಿಯಾಪಟ್ಟಣ ತಾಲೂಕು ಗುಡ್ಡೇನಹಳ್ಳಿ ಗ್ರಾಮದಲ್ಲಿ ನಡೆದಿದೆ. ಕೇರಳ ಮೂಲದವರಾಗಿದ್ದು, ಗುಡ್ಡೇನಹಳ್ಳಿಯಲ್ಲಿ ವಾಸವಿರುವ ಸೂಸಾ ಮೇರಿ (81) ಹತ್ಯೆಗೀಡಾದವರಾಗಿದ್ದು, ಕೆಲ ವರ್ಷದ ಹಿಂದೆ ಕೊಡಗಿನ ಸಿದ್ದಾಪುರ ಸಮೀಪದ ಕಾವೇರಿ ನದಿ ಬಳಿ ದೊರೆತ 6 ತಿಂಗಳ ಗಂಡು ಮಗುವನ್ನು (ಮಾರ್ಟಿನ್ ದೇವನ್) ಸಾಕಿಕೊಂಡಿದ್ದರು. 8ನೇ ತರಗತಿವರೆಗೆ ಓದಿದ್ದ ಆತ ಪೇಂಟರ್ ಕೆಲಸ ಮಾಡಿಕೊಂಡಿದ್ದು, ಕುಡಿತದ ದಾಸನಾಗಿದ್ದ. ಸಾಕು ತಾಯಿ ಸೂಸಾ ಮೇರಿಗೆ ಬರುವ ವೃದ್ಧಾಪ್ಯ ವೇತನದ ಹಣ ಹಾಗೂ ಸಂಬಂಧಿಕರು ನೀಡುವ ಹಣವನ್ನು ಕೂಡ ಬಿಡದೇ ಕಿತ್ತುಕೊಂಡು ಕುಡಿಯುತ್ತಿದ್ದ ಎಂದು ಹೇಳಲಾಗಿದೆ. ಜೂ.28ರಂದು ಸಂಜೆ 4 ಗಂಟೆ ಸಮಯದಲ್ಲಿ ಸಾಕು ತಾಯಿ ಬಳಿ ಹಣ ಕೇಳಿದ್ದು, ಆಕೆ ಹಣ ನೀಡದಿದ್ದಾಗ ಮಚ್ಚಿನಿಂದ ತಲೆ ಮೇಲೆ ಹಲ್ಲೆ ನಡೆಸಿ ಹತ್ಯೆಗೈದಿದ್ದಾನೆ. ಈ ಸಂಬಂಧ ಸೂಸಾ ಮೇರಿ ಸಂಬಂಧಿಕರಾದ ಕೆ.ಪಿ.ವಿನ್ಸೆಂಟ್ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಬೈಲುಕುಪ್ಪೆ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಬೆಟ್ಟದ ಮೆಟ್ಟಿಲು, ಗೋಪುರಕ್ಕೆ ಬಣ್ಣ ಬಳಿದವರಿಗೆ ಸನ್ಮಾನ



ಮೈಸೂರು,ಜೂ.30(ಎಂಕೆ)–ಮೈಸೂರಿನ ಪ್ರಸಿದ್ಧ ಯಾತ್ರಾ ಸ್ಥಳವಾದ ಚಾಮುಂಡಿಬೆಟ್ಟಕ್ಕೆ ಸಾಗುವ ಮೆಟ್ಟಿಲು ಮಾರ್ಗದಲ್ಲಿ ಚಾಮುಡೇಶ್ವರಿ ಸನ್ನಿಧಿಯಿಂದ ಬೆಟ್ಟದ ಪಾದದವರೆಗೆ ತಮ್ಮ ಸ್ವಂತ ಖರ್ಚಿನಲ್ಲಿ ಮೆಟ್ಟಿಲುಗಳಿಗೆ ಬಣ್ಣ ಬಳಿದಿರುವ ವಿನಾಯಕ ಗೆಳೆಯರ ಬಳಗದ ಅಧ್ಯಕ್ಷ ಎಸ್.ಶ್ರೀಕಾಂತ್ ಅವರನ್ನು ಪ್ರಭಾರ ಮೇಯರ್ ಸುನಂದಾ ಪಾಲನೇತ್ರ ಸನ್ಮಾನಿಸಿ, ಗೌರವಿಸಿದರು. 65 ಸಾವಿರ ರೂ., ಸ್ವಂತ ಖರ್ಚಿನಲ್ಲಿ ಮೆಟ್ಟಿಲುಗಳು ಹಾಗೂ ಮಂಟಪಕ್ಕೆ ಬಣ್ಣ ಬಳಿದಿರುವ ವಿನಾಯಕ ಗೆಳೆಯರ ಬಳಗದ ಸೇವೆಯನ್ನು ಶ್ಲಾಘಿಸಿದ ಅವರು, ಬಳಗದವರನ್ನು ಸನ್ಮಾನಿಸಿದರು. ಈ ವೇಳೆ ರಮೇಶ್, ಅನಂತು, ಸ್ನೇಕ್ ಲೋಕೇಶ್, ಯದು, ವಕೀಲ ಶಿವರಾಜ್ ಉಪಸ್ಥಿತರಿದ್ದರು.

ಇಂದಿನಿಂದ ವಾರ ಕಾಲ ಜಿಲ್ಲೆಯಲ್ಲಿ ತುಂತುರು ಮಳೆ

ಮೈಸೂರು,ಜೂ.30(ಎಂಕೆ)– ಕರಾವಳಿ, ಮಲೆನಾಡು ಪ್ರದೇಶದಲ್ಲಿ ನಾಳೆ(ಜು.1)ಯಿಂದ ಜು.7ರವರೆಗೆ ಭಾರೀ ಮಳೆಯಾಗಲಿದ್ದು, ಮೈಸೂರು ಜಿಲ್ಲೆಯಲ್ಲಿ ಮೋಡ ಕವಿದ ವಾತಾವರಣದ ಜೊತೆಗೆ ತುಂತುರುವಿನಿಂದ ಕೂಡಿದ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಜಿಲ್ಲೆಯಲ್ಲಿ ಜು.3ರವರೆಗೆ 28 ಮಿ. ಮೀ. ಮಳೆಯಾಗಲಿದ್ದು, ಗರಿಷ್ಠ ಉಷ್ಣಾಂಶ 29–31 ಹಾಗೂ ಕನಿಷ್ಠ ಉಷ್ಣಾಂಶ 20–21 ಡಿಗ್ರಿ ಸೆಲ್ಸಿಯಸ್ ಇರಲಿದೆ. ಗಾಳಿಯು 2–3 ಕಿ.ಮೀ ವೇಗದಲ್ಲಿ ಬೀಸಲಿದ್ದು, 90–95 ಡಿಗ್ರಿ ತೇವಾಂಶದಿಂದ ಕೂಡಿರಲಿದೆ ಎಂದು ಮಾಹಿತಿ ನೀಡಿದೆ.

ರೈತರಿಗೆ ಸಲಹೆ: ಜೂನ್ –ಜುಲೈ ತಿಂಗಳಿನಲ್ಲಿ ಬಿತ್ತನೆ ಮಾಡಬಹುದಾದ ಮುಸುಕಿನ ಜೋಳ(ಹೇಮ, ನಿತ್ಯಶ್ರೀ ಹಾಗೂ ಎಂಎಹೆಚ್–14–15 ತಳಿಗಳು) ತಳಿಗಳನ್ನು ಎಕರೆಗೆ 6 ಕಿ.ಗ್ರಾಂ ಬಿತ್ತನೆ ಮಾಡಬೇಕು. ಕೊನೆ ಉಳುಮೆಯಲ್ಲಿ ಎಕರೆಗೆ 3 ಟನ್ ಕೊಟ್ಟಿಗೆ ಗೊಬ್ಬರವನ್ನು ಮಣ್ಣಿಗೆ ಸೇರಿಸಬೇಕು. ಅಲ್ಲದೆ ರಾಗಿ, ತೊಗರಿ, ಹತ್ತಿ, ಅಲಸಂದೆ ಪೋಷಣೆ ಕುರಿತು ಮಾಹಿತಿ ನೀಡಿದೆ. ರೈತರು 'ದಾಮಿನಿ' ಆ್ಯಪ್ ಅನ್ನು ಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್‌ಲೋಡ್ ಮಾಡಿಕೊಂಡು ಮಿಂಚಿನ ಮುನ್ಸೂಚನೆಯನ್ನು ಅತ್ಯಂತ ನಿಖರವಾಗಿ ತಿಳಿಯಬಹುದಾಗಿದೆ. ಅಲ್ಲದೆ 'ಮೌಸಮ್' ಮತ್ತು 'ಮೇಘದೂತ್' ಆ್ಯಪ್‌ಗಳಿಂದ ಮಳೆಯ ಮುನ್ಸೂಚನೆ ಹಾಗೂ ಕೃಷಿ ಸಲಹೆಗಳನ್ನು ಪಡೆದುಕೊಳ್ಳಬಹುದಾಗಿದೆ.

ಇಂದಿನಿಂದ ಉಚಿತ ಮದ್ಯವರ್ಜನ ಶಿಬಿರ

ಮೈಸೂರು,ಜೂ.30–ಮೈಸೂರಿನ ಹೆಬ್ಬಾಳು ರಿಂಗ್‌ರಸ್ತೆಯಲ್ಲಿನ ಬಸವ ಮಾರ್ಗ ಫೌಂಡೇಷನ್ ಆವರಣದಲ್ಲಿ ನಾಳೆ(ಜು.1)ಯಿಂದ ಜು.21ರವರೆಗೆ ಉಚಿತ ಮದ್ಯ ವರ್ಜನ ಶಿಬಿರ ಆಯೋಜಿಸಲಾಗಿದೆ. ವ್ಯಸನದಿಂದ ಸಂಕಷ್ಟದಲ್ಲಿ ಸಿಲುಕಿರುವ ಪೌರಕಾರ್ಮಿಕರನ್ನು ವ್ಯಸನ ಮುಕ್ತಗೊಳಿಸುವ ಉದ್ದೇಶದಿಂದ ಈ 17ನೇ ಶಿಬಿರವನ್ನು ಆಯೋಜಿಸಿದ್ದು, ತಜ್ಞ ಮನೋವೈದ್ಯರಿಂದ ಕೌನ್ಸಿಲಿಂಗ್, ಪೌಷ್ಟಿಕ ಆಹಾರ, ಅಗತ್ಯ ಚಿಕಿತ್ಸೆ, ಯೋಗ, ಧ್ಯಾನ, ಜಿಮ್, ಸುಸಜ್ಜಿತ ಕೊಠಡಿ ಹಾಗೂ ಎಲ್ಲಾ ರೀತಿಯ ಸೌಕರ್ಯಗಳನ್ನು ಕಲ್ಪಿಸಲಾಗಿದೆ. ಈವರೆಗೆ ಯಶಸ್ವಿ 16 ಉಚಿತ ಶಿಬಿರಗಳಲ್ಲಿ 1200ಕ್ಕೂ ಹೆಚ್ಚು ಮಂದಿ ವ್ಯಸನ ಮುಕ್ತರಾಗಿದ್ದಾರೆ. ಮಾಹಿತಿಗೆ ಮೊ.ಸಂ. 8553111999 ಸಂಪರ್ಕಿಸಿ.

ಇಂದು ರಾಷ್ಟ್ರೀಯ ವೈದ್ಯರ ದಿನಾಚರಣೆ

ಮೈಸೂರು, ಜೂ.30(ಎಂಕೆ)– ಮೈಸೂರಿನ ರಾಮಕೃಷ್ಣನಗರದಲ್ಲಿರುವ ಸುಯೋಗ್ ಆಸ್ಪತ್ರೆಯಲ್ಲಿ ಜು.1ರಂದು 'ರಾಷ್ಟ್ರೀಯ ವೈದ್ಯರ ದಿನಾಚರಣೆ' ಹಮ್ಮಿಕೊಳ್ಳಲಾಗಿದೆ. ಅಂದು ಸಂಜೆ 5 ಗಂಟೆಗೆ ಕಾರ್ಯಕ್ರಮ ನಡೆಯಲಿದ್ದು, ವಿಧಾನಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ಉದ್ಘಾಟಿಸಲಿದ್ದಾರೆ. ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಡಾ.ವಾಸುದೇವ ಪೈ, ಡಾ.ದರ್ಶನ್, ಡಾ.ಗಿರೀಶ್, ಡಾ.ಶ್ರೀಧರ್ ಹಾಗೂ ಡಾ.ಪ್ರಕಾಶ್ ಬಾಬು ಅವರನ್ನು ಸನ್ಮಾನಿಸಲಾಗುವುದು.

ಟೈಲರ್ ಕನ್ನಯ್ಯಲಾಲ್ ಹತ್ಯೆ ಖಂಡಿಸಿ ವಿಹೆಚ್‌ಪಿ ಪ್ರತಿಭಟನೆ

ತ್ವರಿತ ನ್ಯಾಯಾಲಯದಲ್ಲಿ ಶೀಘ್ರ ವಿಚಾರಣೆ ನಡೆಸಿ, ಆರೋಪಿಗಳಿಗೆ ಗಲ್ಲು ಶಿಕ್ಷೆಗೆ ಆಗ್ರಹ



ಮೈಸೂರು,ಜೂ.30(ಪಿಎಂ)– ರಾಜಸ್ಥಾನದ ಉದಯಪುರದಲ್ಲಿ ನಡೆದ ಟೈಲರ್ ಕನ್ನಯ್ಯ ಲಾಲ್ ಹತ್ಯೆ ಖಂಡಿಸಿ ಹಾಗೂ ಪ್ರಕರಣ ಸಂಬಂಧ ತ್ವರಿತ ನ್ಯಾಯಾಲಯದಲ್ಲಿ ಶೀಘ್ರ ವಿಚಾರಣೆ ಪೂರ್ಣಗೊಳಿಸಿ, ಹಂತಕರಿಗೆ ಗಲ್ಲು ಶಿಕ್ಷೆ ವಿಧಿಸಬೇಕೆಂದು ಒತ್ತಾಯಿಸಿ ವಿಶ್ವ ಹಿಂದೂ ಪರಿಷದ್ (ವಿಹೆಚ್‌ಪಿ) ವತಿಯಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು ಡಿಸಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಕನ್ನಯ್ಯ ಲಾಲ್ ಸಾವಿಗೆ ನ್ಯಾಯ ಸಿಗಲಿ, ಶಿರಚ್ಛೇದ ಮಾಡಿದವರಿಗೆ ತಕ್ಕ ಶಿಕ್ಷೆಯಾಗಲಿ... ಅಮಾಯಕನ ಜೀವ ಬಲಿ ಪಡೆದ ರಾಕ್ಷಸರಿಗೆ ಧಿಕ್ಕಾರ... ಹಂತಕರಿಗೆ ಶೀಘ್ರವೇ ಶಿಕ್ಷೆಯಾಗಲಿ ... ಹಿಂದೂಗಳಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ ವಿಲ್ಲವೇ? ಹಿಂದೂಗಳ ಜೀವಕ್ಕೆ ಬೆಲೆ ಇಲ್ಲವೇ? ಎಂಬಿತ್ಯಾದಿ ಘೋಷ ವಾಕ್ಯಗಳ ಫಲಕಗಳನ್ನಿಡಿದು ರಾಜಸ್ಥಾನ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಹಿಂದೂ ಸಮಾಜದಲ್ಲಿ ಭಯ ಹುಟ್ಟಿಸುವ ಸಲುವಾಗಿ ಆರೋಪಿಗಳಾದ ಗೌಸ್ ಮೊಹಮ್ಮದ್ ಹಾಗೂ ಮೊಹಮ್ಮದ್ ರಿಯಾಜ್ ಎಂಬ ದುಷ್ಕರ್ಮಿಗಳು ಕನ್ನಯ್ಯ ಲಾಲ್‌ನ ಹತ್ಯೆ ಮಾಡಿದ್ದಾರೆ. ಈ ಇಬ್ಬರು ಕೊಲೆಗಡುಕರಿಗೆ ಶೀಘ್ರ ಶಿಕ್ಷೆಯಾಗಬೇಕು. ಕನ್ನಯ್ಯ ಲಾಲ್ ಹತ್ಯೆಗೈದ ಕತ್ತಿಯಿಂದಲೇ ಪ್ರಧಾನಿ ನರೇಂದ್ರ ಮೋದಿ ಅವರನ್ನು ಕೊಲ್ಲುತೇವೆ ಎಂದು ಈ ಆರೋಪಿಗಳು ಬೆದರಿಕೆ ಹಾಕಿರುವುದನ್ನು ಇಡೀ ದೇಶ ಒಕ್ಕೊರಲಿನಿಂದ ಖಂಡಿಸುತ್ತದೆ. ಕೊಲೆ ಮಾಡಿದ್ದಲ್ಲದೆ, ಅದನ್ನು ವಿಡಿಯೋ ಮಾಡಿ ವಿಕೃತಿ ಮೆರೆದಿದ್ದು ಮಾತ್ರವಲ್ಲದೆ, 'ನಾವು ಕೊಲೆ ಮಾಡಿದ್ದೇವೆ' ಎಂದು ಸಾರ್ವಜನಿಕವಾಗಿ ಹೇಳಿಕೆ ನೀಡಿರುವುದು ಅತ್ಯಂತ ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ಮಾಜಿ ವಕ್ತಾರೆ ನೂಪುರ್ ಶರ್ಮ ಅವರನ್ನು ಬೆಂಬಲಿಸಿ ಸಾಮಾಜಿಕ ಮಾಧ್ಯಮಗಳಲ್ಲಿ ಕನ್ನಯ್ಯ ಲಾಲ್ ತನ್ನ ಅಭಿಪ್ರಾಯ ಹಂಚಿಕೊಂಡಿದ್ದಕ್ಕೆ ಅಮಾನುಷವಾಗಿ ಕೊಲೆ ಮಾಡಿರುವುದು ಭಯೋತ್ಪಾದಕ ಕೃತ್ಯವೇ ಆಗಿದೆ. ಈ ಇಬ್ಬರು ಆರೋಪಿಗಳೂ ಐಸಿಸ್ ಭಯೋತ್ಪಾದಕ ಸಂಘಟನೆ ಜೊತೆ ಸಂಪರ್ಕ ಹೊಂದಿರುವುದು ಬೆಳಕಿಗೆ ಬಂದಿದ್ದು, ಈ ಇಬ್ಬರಿಗೆ ಶೀಘ್ರ ಶಿಕ್ಷೆಯಾಗಬೇಕು ಎಂದು ಆಗ್ರಹಿಸಿದರು.

ವಿಹೆಚ್‌ಪಿ ಜಿಲ್ಲಾಧ್ಯಕ್ಷ ಬಿ.ಎಸ್.ಪ್ರಶಾಂತ್, ಸಾಮರಸ್ಯ ಪ್ರಮುಖ್ ಮಲ್ಲರಾಜೇ ಅರಸ್, ಸಾಮಾಜಿಕ ಮಾಧ್ಯಮ ಪ್ರಮುಖ್ ಮಧುಶಂಕರ್, ವಿಹೆಚ್‌ಪಿ ಮುಖಂಡ ಪುರಾಣಿಕ್, ಹಿಂದುಪರ ಹೋರಾಟಗಾರ ಮೈ.ಕಾ. ಪ್ರೇಮ್‌ಕುಮಾರ್ ಸೇರಿದಂತೆ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಮೈಸೂರು ನಗರ ಕಾಂಗ್ರೆಸ್ ಸಾಂಸ್ಥಿಕ ಚುನಾವಣೆ ಹಿನ್ನೆಲೆ ಪೂರ್ವಭಾವಿ ಸಭೆ

ಹೆಚ್ಚು ಸದಸ್ಯರ ನೋಂದಾಯಿಸಿದವರಿಗೆ ಸೂಕ್ತ ಸ್ಥಾನ ನೀಡಲು ನಿರ್ಧಾರ

ಚುನಾವಣಾ ಉಸ್ತುವಾರಿಗಳಾದ ಜಾನ್ಸನ್ ಅಬ್ರಹಾಂ, ಡಾ.ಮಾಣಿಕ್ಯ ವಾಸಗಂ ಭಾಗಿ



ಮೈಸೂರು, ಜೂ.30(ಆರ್‌ಕೆಬಿ)– ಮೈಸೂರು ನಗರ ಕಾಂಗ್ರೆಸ್ ಸಾಂಸ್ಥಿಕ ಚುನಾವಣೆ ಹಿನ್ನೆಲೆಯಲ್ಲಿ ಪಕ್ಷದ ಸಾಂಸ್ಥಿಕ ಚುನಾವಣಾ ಉಸ್ತುವಾರಿಗಳಾದ ಸಹಾಯಕ ಪ್ರಾದೇಶಿಕ ಚುನಾವಣಾಧಿಕಾರಿ (ಎಪಿಆರ್‌ಓ) ಜಾನ್ಸನ್ ಅಬ್ರಹಾಂ, ಜಿಲ್ಲಾ ಚುನಾವಣಾ ಉಸ್ತುವಾರಿ ಡಾ.ಮಾಣಿಕ್ಯ ವಾಸಗಂ ಅವರು ಗುರುವಾರ ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ಪಕ್ಷದ ಮುಖಂಡರ ಸಭೆ ನಡೆಸಿದರು.

ಈ ವೇಳೆ ಮಾತನಾಡಿದ ಪಕ್ಷದ ಸಾಂಸ್ಥಿಕ ಚುನಾವಣಾ ಉಸ್ತುವಾರಿ ಎಪಿಆರ್‌ಓ ಜಾನ್ಸನ್ ಅಬ್ರಹಾಂ, ಸಾಂಸ್ಥಿಕ ಚುನಾವಣೆಗೆ ಸಂಬಂಧಿಸಿದಂತೆ ಎಐಸಿಸಿಯ ಸುತ್ತೋಲೆಯ ಪ್ರಕಾರ 50 ವರ್ಷದೊಳಗಿನವರಿಗೆ ಎಲ್ಲಾ ಹಂತದಲ್ಲೂ ಮಾನ್ಯತೆ ನೀಡಲಾಗುವುದು. ಅಲ್ಲದೆ ಮಹಿಳೆಯರಿಗೂ ಪ್ರಾತಿನಿಧ್ಯ ನೀಡಲಾಗುವುದು. ಪಕ್ಷ ಸಂಘಟನೆ ಹಿತದೃಷ್ಟಿಯಿಂದ ಹೆಚ್ಚು ಸದಸ್ಯರನ್ನು ನೋಂದಣಿ ಮಾಡಿರುವವರಿಗೆ ಆದ್ಯತೆ ನೀಡಲಾಗುವುದು ಎಂದರು.

ನಂತರ ಮಾತನಾಡಿದ ನಗರ ಜಿಲ್ಲಾ ಚುನಾವಣಾ ಉಸ್ತುವಾರಿ ಡಾ.ಮಾಣಿಕ್ಯ ವಾಸಗಂ, ಯಾರು ಹೆಚ್ಚು ಸದಸ್ಯತ್ವ ಮಾಡಿದ್ದಾರೋ ಅವರಿಗೆ ಸಾಂಸ್ಥಿಕ ಚುನಾವಣೆಗಳಲ್ಲಿ ಅವಕಾಶ ನೀಡಲಾಗುವುದು. ಚುನಾವಣೆಯಲ್ಲಿ ಆಯ್ಕೆಯಾದವರು ಸಂಘಟನೆಗೆ ಹೆಚ್ಚು ಒತ್ತು ನೀಡಬೇಕು ಎಂದರು.

ಮಾಜಿ ಸಂಸದ ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ ಮಾತನಾಡಿ, ಜಿಲ್ಲೆಯಲ್ಲಿ ಪಕ್ಷದ ಮುಖಂಡರು 66 ಸಾವಿರ ಸದಸ್ಯತ್ವ ಮಾಡಿದ್ದಾರೆ. ಇದು ಪಕ್ಷ ಸಂಘಟನೆಗೆ ಅನುಕೂಲವಾಗಲಿದೆ. ಯಾರು ಹೆಚ್ಚು ಸದಸ್ಯರನ್ನು ಮಾಡಿಸಿದ್ದಾರೋ ಅಂಥವರಿಗೆ ಪಕ್ಷದ ಸಾಂಸ್ಥಿಕ ಚುನಾವಣೆಯಲ್ಲಿ ಹೆಚ್ಚು ಅವಕಾಶಗಳೂ ಸಿಗಲಿವೆ. ಹಾಗಾಗಿ ಮುಖಂಡರು, ಕಾರ್ಯಕರ್ತರು ಪಕ್ಷ ಸಂಘಟನೆಗೆ ಸಕ್ರಿಯರಾಗಿರುವಂತೆ ಮನವಿ ಮಾಡಿದರು.

ನಗರಾಧ್ಯಕ್ಷ ಆರ್.ಮೂರ್ತಿ ಮಾತನಾಡಿ, ಪಕ್ಷಕ್ಕೆ ಹೆಚ್ಚು ಸದಸ್ಯತ್ವ ಮಾಡಿರುವವರಿಗೆ ಧನ್ಯವಾದಗಳನ್ನು ತಿಳಿಸಿದರು. ಹೆಚ್ಚು ಸದಸ್ಯರನ್ನು ಮಾಡಿಸಿದವರಿಗೆ ಮುಂದೆ ಪಕ್ಷದಲ್ಲಿ ಉತ್ತಮ ಅವಕಾಶಗಳು ದೊರೆಯಲಿವೆ. ಸಿಕ್ಕುವ ಅವಕಾಶವನ್ನು ಬಳಸಿಕೊಂಡು ಪಕ್ಷ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವ ಮೂಲಕ ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ಶ್ರಮಿಸುವಂತೆ ಮನವಿ ಮಾಡಿದರು.

ಹಾಲಿ ಮತ್ತು ಮಾಜಿ ಶಾಸಕರು ನೀಡುವ ಸಲಹೆ, ಸೂಚನೆಗಳಿಗೆ ಮನ್ನಣೆ ಇದ್ದು, ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರ ನಿರ್ಧಾರಗಳೇ ಅಂತಿಮವಾಗಲಿವೆ ಎಂದರು. ಸಭೆಯಲ್ಲಿ ಮಾಜಿ ಶಾಸಕರಾದ ವಾಸು, ಎಂ.ಕೆ.ಸೋಮಶೇಖರ್, ಉಸ್ತುವಾರಿಗಳಾದ ಕೆಪಿಸಿಸಿ ಉಪಾಧ್ಯಕ್ಷ ಸುಧೀಂದ್ರ ಕುಮಾರ್, ಸೂರಜ್ ಹೆಗಡೆ, ನಗರ ಪ್ರಧಾನ ಕಾರ್ಯದರ್ಶಿಗಳಾದ ಡಿ.ಈಶ್ವರ್ ಚಕ್ಕಡಿ (ಚಾಮರಾಜ ಕ್ಷೇತ್ರ ಉಸ್ತುವಾರಿ), ಎಂ.ಶಿವಣ್ಣ (ನರಸಿಂಹರಾಜ ಕ್ಷೇತ್ರದ ಉಸ್ತುವಾರಿ), ಭಾಸ್ಕರ್ ಎಲ್.ಗೌಡ (ಕೃಷ್ಣರಾಜ ಕ್ಷೇತ್ರ ಉಸ್ತುವಾರಿ), ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀಧರ್, ಮಂಜುನಾಥ್, ಸೈಯ್ಯದ್ ಇಕ್ಬಾಲ್, ಅಕ್ರಂ, ಶಿವ ಮಾಧು, ಸುಂದರ್‌ಕುಮಾರ್, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ, ಮುಖಂಡರಾದ ಕೆ.ಹರೀಶ್‌ಗೌಡ, ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಲತಾ ಚಿಕ್ಕಣ್ಣ, ಮಾಜಿ ಮೇಯರ್ ಪುಷ್ಪಲತಾ ಜಗನ್ನಾಥ್, ಮಾಜಿ ಉಪಮೇಯರ್ ಪುಷ್ಪವಲ್ಲಿ, ಕೆಪಿಸಿಸಿ ಸದಸ್ಯೆ ವೀಣಾ, ಪಾಲಿಕೆ ಸದಸ್ಯರಾದ ರಜನಿ ಅಣ್ಣಯ್ಯ, ಆರೀಫ್ ಹುಸೇನ್, ಮಾಜಿ ಸದಸ್ಯ ಎಂ.ಸುನೀಲ್, ನಗರ ವಕ್ತಾರ ಕೆ.ಮಹೇಶ್ ಇನ್ನಿತರರು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಗುಂಡ : ಅಜ್ಜಿ ಇವತ್ತು ನಮ್ಮ ಶಾಲೆಯಲ್ಲಿ ಓಟದ ಸ್ಪರ್ಧೆ ಇದೆ. ಆಶೀರ್ವಾದ ಮಾಡಜಿ

ಅಜ್ಜಿ : ಉಸಾರು ಮಗಾ, ನಿಧಾನವಾಗಿ ಓಡು!

ಮೈಸೂರು ಮಿತ್ರ

ಶುಕ್ರವಾರ, 1 ಜುಲೈ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ದೊಡ್ಡವರು ಇತರರ ತಪ್ಪುಗಳನ್ನು ಮರೆಯುತ್ತಾರೆ. ಆದರೆ ಸಣ್ಣವರು ಇತರರ ತಪ್ಪುಗಳನ್ನು ಜಾಗಟೆ ಹೊಡೆದು ಹೇಳುತ್ತಾರೆ. – ತಿರುಕ್ಕುರುಳ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಬೇಗನೆ ಮಾಡಿದ್ದು ಹಾಗೆಯೇ ಹೋಗುವುದು

ನಿಮ್ಮ ಪತ್ರಗಳು

ಕನ್ನಯ್ಯಾಲಾಲ್ ಬರ್ಬರ ಹತ್ಯೆ ಮನುಕುಲ ತಲೆತಗ್ಗಿಸುವ ಹೇಯಕೃತ್ಯ

ಮಾನ್ಯರೆ,

ಮುಸ್ಲಿಂ, ಹಿಂದೂ, ಪಾರ್ಸಿ, ಜೈನ್, ಕ್ರೈಸ್ತ, ಬೌದ್ಧ ಸಮುದಾಯದ ಯಾವುದೇ ವ್ಯಕ್ತಿಗಳಾಗಿರಲಿ, ಅವರು ಇನ್ನೊಂದು ಸಮುದಾಯದ ವ್ಯಕ್ತಿಯನ್ನು ಬರ್ಬರವಾಗಿ ಹತ್ಯೆ ಮಾಡುತ್ತಾರೆಂದರೆ, ಅವರು ಧರ್ಮಾಂಧರು ಹಾಗೂ ವಿಕೃತ ಮನಸ್ಸಿನವರು. ಇಂತಹವರಿಂದ ಇನ್ನೊಂದಷ್ಟು ಜನ ವಿಕೃತ ಕೃತ್ಯಕ್ಕೆ ಪ್ರೇರೇಪಿಸಲ್ಪಡುತ್ತಾರೆ ಹಾಗೂ ಇನ್ನೊಂದಷ್ಟು ಆಘಾತಕಾರಿ ಕೃತ್ಯಗಳಾಗುತ್ತವೆ. ಇಂತಹ ಘಟನೆಗಳು ನಿಧಾನವಾಗಿ ಸಮುದಾಯಗಳ ಮಧ್ಯೆ ವೈರತ್ವವನ್ನುಂಟು ಮಾಡಿ ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡುತ್ತವೆ. ಏನೇ ಆಗಲಿ ಇಂತಹ ದುಷ್ಕೃತ್ಯವನ್ನು ಎಸಗಿದವರು ಯಾವುದೇ ಸಮುದಾಯಕ್ಕೆ ಸೇರಿದವರಾಗಲಿ, ಅಂತಹವರನ್ನು ಸರ್ಕಾರವು ಬಂಧಿಸಿ ವಿಚಾರಣೆಯ ಕ್ರಿಯೆಗಳನ್ನು ಶೀಘ್ರವಾಗಿ ಮುಗಿಸಿ ಗಲ್ಲಿಗೇರಿಸಬೇಕು. ದುಷ್ಕೃತ್ಯವನ್ನು ಎಸಗಿದವರ ಸಮುದಾಯದವರಿಗೆ ಮುಂದೊಂದು ದಿನ ಇಂತಹ ಕೃತ್ಯ ಎಸಗಲು ಭಯವಾಗಬೇಕು. ಇಂತಹ ಪಾಪಿಗಳು ನಮ್ಮ ಸಮುದಾಯದಲ್ಲಿದ್ದರಲ್ಲ ಎನ್ನುವ ಅಸಹ್ಯ ಅವರಿಗೇ ಉಂಟಾಗಬೇಕು. ಆಗಿದ್ದು ಆಗಿ ಹೋಯಿತು. ಆದರೆ ಈಗ ಕೊಲೆಯಾದ ವ್ಯಕ್ತಿಯ ಹೆಂಡತಿ, ಮಕ್ಕಳು, ತಂದೆ–ತಾಯಿಗಳ ಗತಿ ಏನು? ಕುಟುಂಬಕ್ಕೆ ದುಡಿಯುವವನು ಆತನೊಬ್ಬನೇ ಆಗಿದ್ದರೆ ಆ ಕುಟುಂಬದ ಮುಂದಿನ ಪಾಡೇನು. Consequences of crime stay longer than the crime itself ಅಪರಾಧಕ್ಕಿಂತ ಅಪರಾಧದ ಪರಿಣಾಮಗಳು ಹೆಚ್ಚು ದಿನವಿರುತ್ತದೆ ಎನ್ನುವ ಹಾಗೆ ಸತ್ತವನ ಕುಟುಂಬದ ಸದಸ್ಯನೊಬ್ಬ ಬಿಸಿರಕ್ತದ ಯುವಕನಾಗಿದ್ದು, ಪಾತಕಿಗಳು ಸಮುದಾಯದ ಮುಗ್ಧರನ್ನು ಕೊಚ್ಚಿ ಹಾಕಿದ್ದಾರೆ? ಇವೆಲ್ಲವೂ ಒಂದಕ್ಕೊಂದು ಕೊಂಡಿ ಇದ್ದಂತೆ. ಇಲ್ಲಿ ತಕ್ಷಣವೇ ಎಲ್ಲರೂ ಎಚ್ಚೆತ್ತುಕೊಳ್ಳಬೇಕು. ಮನುಷ್ಯರಿಗೆ ಚಿಂತನೆಯಲ್ಲಿ ಪರಿಪಕ್ವತೆ ಬರದಿದ್ದರೆ ಇಂತಹ ಅನಾಹುತಗಳು ಅವ್ಯಾಹತ. ಇದರ ಬಗ್ಗೆ ಬುದ್ಧಿಜೀವಿಗಳು, ರಾಜಕೀಯ ಮುತ್ಸದ್ದಿಗಳು, ಧರ್ಮಗುರುಗಳು ಗಾಢವಾಗಿ ಚಿಂತಿಸಬೇಕಾಗಿದೆ. ಪೂರ್ಣಚಂದ್ರ ತೇಜಸ್ವಿಯವರ ವಾಕ್ಯ ನೆನಪಾಗುತ್ತದೆ. ಬೇರೆಯವರನ್ನು ಕೊಂದು ಉಳಿಸಿಕೊಳ್ಳಬೇಕಾದ ಧರ್ಮವೇನಾದರೂ ಇದೆಯಾ?

–ಯಾಚೇನಹಳ್ಳಿ ಸಾಸಲಾರಾಧ್ಯ, ಮೈಸೂರು.

ವೈದ್ಯರು ಕೂಡ ಮನುಷ್ಯರು...

ಮಾನ್ಯರೆ,

ಮನುಷ್ಯ ಹುಟ್ಟುವಾಗ ಮತ್ತು ಸಾಯುವಾಗ ನೋಡುವ ಮೊದಲ ಮತ್ತು ಕೊನೆಯ ವ್ಯಕ್ತಿ ಓರ್ವ ವೈದ್ಯ. ಜೀವನದ ಪ್ರತಿ ವಯಸ್ಸಿನಲ್ಲೂ ಮನುಷ್ಯ ವೈದ್ಯರ ಹತ್ತಿರ ಬರಲೇಬೇಕು. ಈ ಭೂಮಿಯಲ್ಲಿ ಬಹುಶಃ ವೈದ್ಯನ ಬಳಿ ಹೋಗದೆ ಇರುವ ವ್ಯಕ್ತಿ ಸಿಗಲಾರ. ಬಹಳ ಅಪರೂಪ. ಎಲ್ಲೋ ಲಕ್ಷಕ್ಕೆ ಒಬ್ಬ ಇರಬಹುದೇನೋ?

ಒಬ್ಬ ವ್ಯಕ್ತಿ ವೈದ್ಯನಾಗಲು ಅನೇಕ ಕಷ್ಟಗಳನ್ನು ಎದುರಿಸಿ ರಾತ್ರಿ ಹಗಲು ಕಷ್ಟಪಟ್ಟು ಓದಿ MBBS ಪದವಿ ಪಡೆಯುತ್ತಾನೆ. ನಂತರ ಕೂಡ ಹೋರಾಟವೇ. ಪದವಿ, PG, ಆಮೇಲೆ ಮದುವೆ, ಮಕ್ಕಳು. ಹೀಗೆ ಎಲ್ಲವೂ ತಡವಾಗಿ ಅರ್ಧ ಆಯುಷ್ಯ ಕಳೆದು ಹೋಗಿ ತಾಳ್ಮೆ ಕಳೆದುಕೊಂಡಿರುತ್ತಾನೆ. ಆದರೂ ಎಲ್ಲೂ ತೋರದೆ ತನ್ನ ವೃತ್ತಿಯನ್ನು ಪ್ರೀತಿಸಿ ಗೌರವಿಸಿ ಬದುಕು ಕಟ್ಟಿಕೊಳ್ಳಲು ಕಷ್ಟ ಪಡುತ್ತಾನೆ.

ಬಹುಷ್ಟು ಜನ ವೈದ್ಯರು ತುಂಬಾ ಸಂಪಾದಿಸಿ ಮಜಾ ಮಾಡುತ್ತಾರೆ ಎಂದು ತಿಳಿದಿರುತ್ತಾರೆ. ಎಲ್ಲ ವೈದ್ಯರ ಪರಿಸ್ಥಿತಿ ಒಂದೇ ಆಗಿರಲ್ಲ. ಇತ್ತೀಚೆಗೆ ವೈದ್ಯಕೀಯ ರಂಗವು Commercial ಆಗಿದ್ದು ಜನರ ನೋಡುವ ದೃಷ್ಟಿ ಬದಲಾಗಿದೆ. ಆಸ್ಪತ್ರೆಗಳು ಹಣ ಮತ್ತು ರಕ್ತ ಹೀರುವ ಕೂಪಗಳೆಂದು ಜನ ಮಾತನಾಡಿಕೊಳ್ಳುತ್ತಾರೆ. ವಿವಾಹ ಹೊಂದಿರುವ ರೋಗಿಗಳಿಗೆ ಬೇರೇನೇ Rate list ಇರುತ್ತೆ.

ಮೊದಲೆಲ್ಲಾ Family Doctor Concept ಇತ್ತು. ಒಂದು ಕುಟುಂಬದ ಎಲ್ಲಾ ಸದಸ್ಯರ ಬಗ್ಗೆ ವೈದ್ಯರಿಗೆ ಚೆನ್ನಾಗಿ ತಿಳಿದಿತ್ತು. ಅವರು ಶಿಫಾರಸ್ಸು ಮಾಡಿದ ಆಸ್ಪತ್ರೆಗೆ ಹೋಗುತ್ತಿದ್ದರು. ಈಗ ಜನರು ಹೆಚ್ಚು ಬುದ್ಧಿವಂತರಾಗಿದ್ದಾರೆ. ಅವರೇ ನಿರ್ಧರಿಸುತ್ತಾರೆ. ಜೊತೆಗೆ ಪೈಪೋಟಿ ಕೂಡ ಹೆಚ್ಚಿದೆ. ರೋಗಿಗಳ ಶಿಫಾರಸ್ಸಿಗೂ ಶುಲ್ಕದ ಆಮಿಷ. ಹೀಗೆ ಆದರೆ ಮುಂದೊಂದು ದಿನ ಬಲಗಣ್ಣಿಗೊಬ್ಬ ಎಡಗಣ್ಣಿಗೊಬ್ಬ ವೈದ್ಯರನ್ನು ನೋಡಬೇಕಾಗುತ್ತದೆ.! ವೈದ್ಯರಿಗೂ ಕೂಡ ಮನೆ ಸಂಸಾರ ಇರುತ್ತೆ. ಇತರರಂತೆ ಆಸೆ ಆಮಿಷಗಳು ಇರುತ್ತೆ. ಅವರನ್ನು ಮನುಷ್ಯರಂತೆ ನೋಡಿ. ಹೊತ್ತಿಲ್ಲದ ಹೊತ್ತಿನಲ್ಲಿ ಚಿಕ್ಕ ಪುಟ್ಟ ವಿಷಯಕ್ಕೆಲ್ಲಾ ಕರೆ ಮಾಡದೆ ಅವರು ಲಭ್ಯ ಇರುವ ಸಮಯದಲ್ಲಿ ಸಂಪರ್ಕಿಸಿ. ಯಾಕೆಂದರೆ ವೈದ್ಯರು ಕೂಡ ಮನುಷ್ಯರೇ! ಸಮಸ್ತ ಜನತೆಗೆ ವೈದ್ಯ ದಿನಾಚರಣೆ ದಿನದ ಪ್ರಣಾಮಗಳು ಹಾಗೂ ರಾಜ್ಯದ ಜನತೆ ಸದಾ ಆರೋಗ್ಯದಿಂದ ಇರಲೆಂದು ಹರಸುವೆ!

–ಡಾ ರವೀಂದ್ರ, ಹೆಬ್ಬಾಳು, ಮೈಸೂರು.

ದೇಶದ ರಕ್ಷಣಾ ವ್ಯವಸ್ಥೆಯಲ್ಲಿ ರಾಜಿ ಬೇಡ

ಮಾನ್ಯರೆ,

ನಮ್ಮ ದೇಶದ ಭದ್ರತೆ ವಿಚಾರದಲ್ಲಿ ವಿರೋಧ ಪಕ್ಷಗಳು ರಾಜಕಾರಣ ಮಾಡುತ್ತಿವೆ. 1962ರಲ್ಲಿ ನಡೆದ ಚೀನಾ, ಭಾರತ ಯುದ್ಧದಲ್ಲಿ ಸಾವಿರಾರು ಸೈನಿಕರು ಪ್ರಾಣವನ್ನು ಅರ್ಪಿಸಿದರು. ಅನಂತರ ಸಾವಿರಾರು ಅಡಿ ಜಾಗವನ್ನು ಚೀನಾ ವಶಪಡಿಸಿಕೊಂಡಿತು. ಆಗಿನ ಪ್ರಧಾನಿ ನೆಹರೂ ಅವರು ವಿಶ್ವಸಂಸ್ಥೆಗೆ ದೂರು ನೀಡಿ ಸುಮ್ಮನಾದರು. ಅನಂತರ ಕಾಶ್ಮೀರ ಕಣಿವೆಯಲ್ಲಿ ಫಲವತ್ತಾದ ಜಾಗವನ್ನು ಪಾಕಿಸ್ತಾನ ಆಕ್ರಮಿಸಿಕೊಂಡಿತು. ಇಂದಿಗೂ ಈ ಜಾಗ ವಿವಾದಗ್ರಸ್ಥವಾಗಿ ಭಾರತಕ್ಕೆ ತೊಂದರೆ ನೀಡುತ್ತಿದೆ. ಇದಕ್ಕೆ ಕಾರಣ ಆಗಿನ ಭಾರತದ ರಕ್ಷಣಾ ವ್ಯವಸ್ಥೆ. ಬ್ರಿಟೀಷರ ಕಾಲದಲ್ಲಿ ಇದ್ದ ಮದ್ದು ಗುಂಡುಗಳು ನಮ್ಮ ಸೈನಿಕರಿಗೆ ಹಿಮಾಲಯದಲ್ಲಿ ಯುದ್ಧ ಮಾಡಿ ಅಭ್ಯಾಸವಿಲ್ಲದೆ ವೀರ ಮರಣವನ್ನು ಹೊಂದಬೇಕಾಯಿತು.

ಈಗಿನ ಪ್ರಧಾನಿಗಳು ಭಾರತದ ರಕ್ಷಣಾ ವ್ಯವಸ್ಥೆಯನ್ನು ಆಧುನೀಕರಣಗೊಳಿಸುತ್ತಿದ್ದಾರೆ. 'ಅಗ್ನಿಪಥ್' ಎನ್ನುವ ಹೊಸ ಆವಿಷ್ಕಾರಗಳೊಂದಿಗೆ ಸೇನೆಯಲ್ಲಿ ಹೊಸತನವನ್ನು ತರಲು ಪ್ರಯತ್ನಿಸುತ್ತಿದ್ದಾರೆ. ಈ ಮಾದರಿಯ ಸೈನಿಕರು ಅಮೆರಿಕಾ ಹಾಗೂ ಇಸ್ರೇಲ್ ದೇಶಗಳಲ್ಲಿ ಈಗಾಗಲೇ ಕಾರ್ಯ ಪ್ರವೃತ್ತವಾಗಿದ್ದಾರೆ. ಇಂತಹ ಸಮಯದಲ್ಲಿ ವಿರೋಧ ಪಕ್ಷಗಳು ದೇಶದ ರಕ್ಷಣೆಗೆ ಕೈಜೋಡಿಸುವುದನ್ನು ಬಿಟ್ಟು, ವಿರೋಧ ವ್ಯಕ್ತಪಡಿಸುವುದು ಎಷ್ಟು ಸರಿ? ಕಾಶ್ಮೀರದಲ್ಲಿ ಜಿಹಾದಿಗಳು ಅಮಾಯಕ ನಾಗರಿಕರನ್ನು ಸಾಯಿಸುತ್ತಿದ್ದಾರೆ. ಇತ್ತ ಚೀನಾ ದೇಶ ನಮ್ಮ ಗಡಿಯನ್ನು ಉಲ್ಲಂಘಿಸುತ್ತಿವೆ. ನಮ್ಮ ರಕ್ಷಣಾ ವ್ಯವಸ್ಥೆಯಲ್ಲಿ ಅಗ್ನಿಪಥ್ ಎನ್ನುವ ಪರಿ ಭಾರತೀಯ ಯುವಕರಿಗೆ ಉದ್ಯೋಗಾವಕಾಶ ನೀಡುತ್ತಿದೆ. ವಿರೋಧ ಪಕ್ಷಗಳು ಇದನ್ನು ವಿರೋಧಿಸುತ್ತಿವೆ. ಬಿಹಾರದಲ್ಲಿ ರೈಲು ಗಾಡಿಗಳಿಗೆ ಬೆಂಕಿ ಹಚ್ಚಿ ಸುಡುತ್ತಿದ್ದಾರೆ. ದೇಶದ ಇನ್ನಿತರ ಭಾಗಗಳಲ್ಲೂ ರಸ್ತೆ ಬಂದ್, ಸರ್ಕಾರಿ ವಾಹನಗಳಿಗೆ ಬೆಂಕಿ ಇಡುತ್ತಿವೆ. ಇದಕ್ಕೆ ಸರಕಾರ ಆಸ್ಪದ ಕೊಡಬಾರದು. ನಾಯಿ ಬಾಲ ಮುದುಡಿ ಕುಳಿತರೆ ಕಲ್ಲು ಹೊಡೆಯುವವರು ಜಾಸ್ತಿ. ದೇಶದ ರಕ್ಷಣಾ ವ್ಯವಸ್ಥೆಯಲ್ಲಿ ಯಾವ ರಾಜಿಯನ್ನೂ ಮಾಡಬಾರದು.

– ಮಜೂರು ರಘುವೀರ ಪುರಾಣಿಕ, ಮೈಸೂರು.




ಪ್ರೊ. ಎ.ವಿ. ನರಸಿಂಹಮೂರ್ತಿ
ಮಾಜಿ ಮುಖ್ಯಸ್ಥರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಶಾಸ್ತ್ರ ವಿಭಾಗ,
ಮೈಸೂರು ವಿಶ್ವವಿದ್ಯಾನಿಲಯ.

ಇತಿಹಾಸದ ಪುಟಗಳು

ಐವರು ಶ್ರೇಷ್ಠ ವೈಣಿಕರು




ವೀಣೆ ವೆಂಕಟಗಿರಿಯಪ್ಪ.



ವೀಣೆ ಶೇಷಣ್ಣ



ವೀಣೆ ಸುಬ್ಬಣ್ಣ



ವಿ. ದೊರೆಸ್ವಾಮಿ ಅಯ್ಯಂಗಾರ್

ವೀಣೆಯು ಪ್ರಾಚೀನ ಭಾರತೀಯ ವಾದ್ಯ. ಕ್ರಿ.ಪೂ. 1500ರಷ್ಟು ಹಿಂದೆಯೇ ವೀಣೆ ಎಂಬ ಪದ ಕಂಡುಬಂದಿದೆ. ಕ್ರಿಸ್ತಪೂರ್ವ ಸುಮಾರು 3500–3000ರಲ್ಲಿ ಸಿಂಧೂ ನಾಗರಿಕತೆಯ ಮುದ್ರೆಗಳ ಮೇಲೆ ವೀಣೆಯ ರೇಖಾಚಿತ್ರವಿದೆ. ಕ್ರಿ.ಪೂ. ಸು. 1500ರ ವೇದಗಳ ಕಾಲದಲ್ಲಿ, ಯಜ್ಞ ಮಾಡುವಾಗ ಸಾಮಗನ (ಸಾಮವೇದ) ಪತ್ನಿ **ಔದುಂಬರಿ** ಎಂಬ ಹೆಸರಿನ ವೀಣೆಯನ್ನು ನುಡಿಸುತ್ತಿದ್ದಳು. ನಂತರ ಮೆಟ್ಟಿಲುಗಳಿರುವ ವೀಣೆಯು ಬಳಕೆಗೆ ಬಂದಿತು. ಯಜುರ್ವೇದದಲ್ಲಿ ವೀಣೆಯನ್ನು **'ವೀಣಾ'** ಎಂದು ಕರೆಯುತ್ತಿದ್ದರೆಂಬ ಉಲ್ಲೇಖವಿದೆ. **ತೈತ್ತಿರೀಯ ಬ್ರಾಹ್ಮಣ**ದಲ್ಲಿ **ಪಿಚ್ಛೋಲ, ಕರ್ಕರಿಕಾ, ಸ್ತುಬಲ** ಮುಂತಾದ ವೀಣೆಗಳ ಪ್ರಸ್ತಾಪವಿದೆ. **ರಾಮಾಯಣ**ದಲ್ಲಿ ರಾವಣನ ಅರಮನೆಯನ್ನು ವಿವರಿಸುವ ಸಂದರ್ಭದಲ್ಲಿ ವಿಪಂಚಿ ಎನ್ನುವ ವೀಣೆಯ ಮಾಹಿತಿ ದೊರಕುತ್ತದೆ. **ಮಹಾಭಾರತ**ದಲ್ಲಿ ವೀಣೆಯನ್ನು ಗಾಯನಕ್ಕೆ ಪಕ್ಕವಾದ್ಯವಾಗಿ ಉಪಯೋಗಿಸಲಾಗಿದ್ದಿತು ಎನ್ನುವ ವಿಷಯ ಕಂಡು ಬಂದಿದೆ. ಶತಪಥ ಬ್ರಾಹ್ಮಣ ಹಾಗೂ ತೈತ್ತಿರೀಯ ಸಂಹಿತೆಯಲ್ಲಿ ವೀಣೆಯನ್ನು ನೃತ್ಯಕ್ಕೆ ಪಕ್ಕವಾದ್ಯವಾಗಿ ಬಳಸುತ್ತಿದ್ದರು ಎಂದು ತಿಳಿದುಬಂದಿದೆ. ಭರತನ ನಾಟ್ಯಶಾಸ್ತ್ರದಲ್ಲಿ ವೀಣೆಗೆ ಕೊಳಲನ್ನು ಪಕ್ಕವಾದ್ಯವಾಗಿ ಬಳಸುವ ಅಂಶ ಉಲ್ಲೇಖಿತವಾಗಿದೆ. ಸುಮಾರು ಕ್ರಿ.ಪೂ. 350ರಲ್ಲಿ ರಚಿತವಾದ ಕೌಟಿಲ್ಯನ **ಅರ್ಥಶಾಸ್ತ್ರದಲ್ಲಿ** ವೀಣೆಯನ್ನು ಬಳಸುತ್ತಿದ್ದರು ಎಂದು ಹೇಳಿದೆ. ಕ್ರಿ.ಪೂ. 350ರ ಸಮಯದಲ್ಲಿ ವೀಣೆಯ ಧ್ವನಿಗೆ ಕ್ವಣ, ನಿಕ್ವಣ ಮತ್ತು ನಿಕ್ವಾಣ ಎಂಬ ಹೆಸರುಗಳಿದ್ದವು.

ಈಗ ಬಳಕೆಯಲ್ಲಿರುವ ವೀಣೆಯನ್ನು ಹಲಸಿನ ಮರದಿಂದ ತಯಾರಿಸುತ್ತಾರೆ. ಆದರೆ ಫೈಬರ್ ಗ್ಲಾಸ್ ಬಳಕೆಗೆ ಬಂದ ನಂತರ, ಇದರಿಂದಲೇ ವೀಣೆಯನ್ನು ತಯಾರಿಸುತ್ತಾರೆ. ಇತ್ತೀಚಿನ ದಿನಗಳಲ್ಲಿ ವೀಣೆಯ ವಿಭಿನ್ನ ಭಾಗಗಳನ್ನು ಕಳಚಿಟ್ಟು ಜೋಡಿಸಬಹುದಾದ ವೀಣೆಯೂ ಈಗ ಬಳಕೆಯಲ್ಲಿದೆ. ವೀಣೆಗೆ ಒಂದು **ನಾದಪೆಟ್ಟಿಗೆ** ಇರುತ್ತದೆ. ಇದನ್ನು ಮರದಲ್ಲಿ ಕೊರೆದು **ವೀಣೆಯನ್ನು** ಸಿದ್ಧಪಡಿಸುತ್ತಾರೆ. ಈಗಿನ ಕಾಲದ ವೀಣೆಗಳಿಗೆ **ಪೌರಾಣಿಕ ಪ್ರಾಣಿ** ವ್ಯಾಳಿಯ ಕೆಳಮುಖವಾಗಿ ಜೋಡಿಸಲಾಗಿದೆ. **ಜೇನುಮೇಣ**ವನ್ನು ಬಳಸಿ ಹಿತ್ತಾಳೆ ಅಥವಾ ಕಂಚಿನ ಮೆಟ್ಟಿಲುಗಳನ್ನು ಕೂರಿಸಿರುತ್ತಾರೆ. ವೀಣೆಗಳಲ್ಲಿರುವ ಮೊದಲನೆಯ ಮತ್ತು ಎರಡನೆಯ ತಂತಿಗಳನ್ನು ಉಕ್ಕಿನಿಂದ ಮಾಡಿರುತ್ತಾರೆ. ಅವುಗಳೇ **ಷಡ್ಜ ಮತ್ತು ಪಂಚಮ ತಂತಿಗಳು**. ಮೂರು ಹಾಗೂ ನಾಲ್ಕನೆಯ ತಂತಿಗಳನ್ನು ಹಿತ್ತಾಳೆಯಿಂದ ಮಾಡಿರುತ್ತಾರೆ. ಇಂದಿನ ದಿನಗಳಲ್ಲಿ ಸಣ್ಣ ಬುರುಡೆಯನ್ನು ತಗಡಿನಿಂದ ಹಾಗೂ ಪೇಪರ್ ಮೆಷ್‌ನಿಂದ ತಯಾರಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಶ್ರೇಷ್ಠ ವಾದಕರ ಬಗ್ಗೆ ಅರಿಯುವುದು ಅವಶ್ಯ.

ಮೊದಲನೆಯವರು ವೀಣೆ ವೆಂಕಟಗಿರಿಯಪ್ಪ.

ಇವರು 24.6.1887ರಲ್ಲಿ ಮೈಸೂರಿನಲ್ಲಿ ಜನಿಸಿದರು. ಇವರು ತಮ್ಮ ವೀಣೆಯ ಪಾಠವನ್ನು ತಮ್ಮ ಅಜ್ಜನವರಾದ ವೀಣಾ ವಿದ್ವಾನ್ ಚಿಕ್ಕಸುಬ್ಬರಾಯರಲ್ಲಿ ಕಲಿತರು. ವೈಣಿಕ ಶಿಖಾಮಣಿ ಶೇಷಣ್ಣನವರ ವೀಣಾ ವಾದನವನ್ನು ಕೇಳಿ, ಅವರಿಂದ ಪ್ರಭಾವಿತರಾದರು. ವೆಂಕಟಗಿರಿಯಪ್ಪನವರು ತಮ್ಮ ಪ್ರತಿಭೆಯಿಂದಲೇ ಮೈಸೂರು ಅರಮನೆಯಲ್ಲಿ ಆಸ್ಥಾನ ವಿದ್ವಾಂಸರಾಗಿ ನೇಮಕಗೊಂಡು, ಮಹಾರಾಜರ ಅಭಿಮಾನಕ್ಕೆ ಪಾತ್ರರಾದರು. ಇವುಗಳ ಜೊತೆಗೆ, ಇವರು ಅರಮನೆ ಬ್ಯಾಂಡಿನ ನಿರ್ದೇಶಕರಾಗಿ ಮತ್ತು ಆಸ್ಥಾನ ವಿದ್ವಾಂಸರಾಗಿ ಹಾಗೂ ಮಹಾರಾಣಿ ಪ್ರೌಢಶಾಲೆಯ ಸಂಗೀತದ ಅಧ್ಯಾಪಕರಾಗಿ, ಮೈಸೂರು ಸರ್ಕಾರದ ಪರೀಕ್ಷಾ ಮಂಡಲಿ ಅಧ್ಯಕ್ಷರಾಗಿ ಕೆಲಸವನ್ನು ನಿರ್ವಹಿಸಿದರು.

ಇವರ ವೀಣಾಶೈಲಿಯಲ್ಲಿ ಮೈಸೂರು ವೈಣಿಕ ಸಂಪ್ರದಾಯದ ಎಲ್ಲಾ ವೈಶಿಷ್ಟ್ಯಗಳು ಸೇರಿದ್ದವು. **ವಾದನ ತಂತ್ರದಲ್ಲಿ ಬೆರಳುಗಳ ವೇಗ, ಮೀಟಿನ ಮಾರ್ದವತೆ** ಮತ್ತು ಇಂಪಾದ ನಾದ ಇವರ ವಾದನದಲ್ಲಿದ್ದ ಮುಖ್ಯ ಗುಣಗಳು. ಇವರು ಪಾಶ್ಚಾತ್ಯ ಸಂಗೀತದಲ್ಲಿ ವಿಶೇಷ ಪರಿಶ್ರಮ ಪಡೆದು ಇವುಗಳನ್ನು ಕರ್ನಾಟಕ ಸಂಗೀತಕ್ಕೆ ಅಳವಡಿಸಿದರು. ಇವರಿಗೆ ಹಿಂದೂಸ್ಥಾನಿ ಸಂಗೀತದ ಬಗೆಗೂ ಇವರಿಗೆ ವಿಶೇಷ ವಾದ ಅಭಿಮಾನ ವಿದ್ದಿತು. ಭಾರತದಾದ್ಯಂತ ಪ್ರವಾಸ ಮಾಡಿ ತಮ್ಮ ಸುಮಧುರ ವೀಣಾವಾದನದಿಂದ ರಸಿಕರ ಮೆಚ್ಚುಗೆ ಗಳಿಸಿದರು. ಇವರು ಬರೆದಿರುವ **ಸಂಗೀತಾಮೃತಸಾರ** ಎಂಬ ಗ್ರಂಥವು ಸಂಗೀತ ಪ್ರಪಂಚಕ್ಕೆ ಇವರು ಕೊಟ್ಟ ಶ್ರೇಷ್ಠ ಕಾಣಿಕೆ. ಇವರು ರಚಿಸಿರುವ ವರ್ಣಗಳು, ಕೃತಿಗಳು ಮತ್ತು ತಿಲ್ಲಾನಗಳು ಶ್ರೇಷ್ಠ ರಚನೆಗಳಾಗಿವೆ. ಇವರು ಸಂಗೀತದಲ್ಲಿ ಸಂಪ್ರದಾಯ ಶುದ್ಧತೆಗೆ ಹೆಚ್ಚು ಪ್ರಾಶಸ್ತ್ಯ ಕೊಡುತ್ತಿದ್ದರು. ಇವರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು **ವೈದಿಕ ಪ್ರವೀಣಾ** ಬಿರುದನ್ನು ನೀಡಿದರು. ಜಯಚಾಮರಾಜ ಒಡೆಯರ್ ಅವರು ಇವರಿಗೆ **ಸಂಗೀತ ವಿಶಾರದ** ಬಿರುದನ್ನು ನೀಡಿದರು. ಕಂಚಿ ಕಾಮಕೋಟಿ ಪೀಠಾಧ್ಯಕ್ಷರು **ವೈಣಿಕ ಶಿಖಾಮಣಿ** ಎಂಬ ಬಿರುದನ್ನೂ **ತೋಡಾ** ಮತ್ತು ಸ್ವರ್ಣಪದಕಗಳೊಂದಿಗೆ ಇವರನ್ನು ಗೌರವಿಸಿದರು. ವೆಂಕಟಗಿರಿಯಪ್ಪನವರು ತಮ್ಮ ಅರವತ್ತೈದನೆಯ ವಯಸ್ಸಿನಲ್ಲಿ 31.12.1952ರಂದು ನಿಧನರಾದರು.

ಎರಡನೆಯವರು ವೀಣೆ ವೆಂಕಟಸುಬ್ಬಯ್ಯ

ಇವರು 1899ರಲ್ಲಿ ವೈಣಿಕರ ಮನೆತನದಲ್ಲಿ ಜನಿಸಿದರು. ಇವರು ಪ್ರಸಿದ್ಧ ವೈಣಿಕರಾಗಿದ್ದ ವೀಣೆ ಶಾಮಣ್ಣನವರ ಮೊಮ್ಮಕ್ಕಳು. ವೀಣಾ ವಿದ್ವಾನ್ ರಾಮಣ್ಣ ಇವರ ತಂದೆ. ಇವರು ವೀಣೆಯ ಶಿಕ್ಷಣವನ್ನು ತಮ್ಮ ಅಜ್ಜ ಶಾಮಣ್ಣ ಹಾಗೂ ಇವರ ಚಿಕ್ಕಪ್ಪ ಸುಬ್ರಹ್ಮಣ್ಯ ಅಯ್ಯರ್ ಮತ್ತು ವೀಣೆ ಶೇಷಣ್ಣನವರಿಂದ ಪಡೆದರು. ತಮ್ಮ ವಿದ್ಯಾಪ್ರೌಢಿಮೆಯಿಂದ ರಾಜಮನೆತನದವರ ಮೆಚ್ಚುಗೆಗೆ ಪಾತ್ರರಾಗಿ, ಆಸ್ಥಾನ ವಿದ್ವಾಂಸರಾದರು. ಅನಂತರ ಮೈಸೂರಿನ ಕುರುಡರ ಹಾಗೂ ಮೂಗರ ಶಾಲೆಯಲ್ಲಿ ಪಿಟೀಲು ಉಪಾಧ್ಯಾಯರಾಗಿಯೂ ಮತ್ತು ನಾಲ್ಕು ವರ್ಷಗಳ ಕಾಲ ತುಮಕೂರಿನ ಎಂಪ್ರೆಸ್ ಬಾಲಕಿಯರ ಪ್ರೌಢಶಾಲೆಯಲ್ಲಿ ಉಪಾಧ್ಯಾಯರಾಗಿ ಕಾರ್ಯವನ್ನು ಮಾಡಿದರು. ಅನಂತರ ಇವರು ಮೈಸೂರು ಮಹಾರಾಣಿ ಟ್ರೈನಿಂಗ್ ಕಾಲೇಜು ಮತ್ತು ಮಹಾರಾಣಿ ಪ್ರೌಢಶಾಲೆಯಲ್ಲಿ ಸಂಗೀತ ಮತ್ತು ವೀಣಾ ಉಪಾಧ್ಯಾಯರಾಗಿ ಹಲವು ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಇವರು ತಮ್ಮ ಅರವತ್ತೈದನೆಯ ವಯಸ್ಸಿನಲ್ಲಿ 31.1.1952 ರಂದು ನಿಧನರಾದರು.

ಮೂರನೇಯವರು ವೀಣೆ ಶೇಷಣ್ಣ.

ಇವರು 1852ರಲ್ಲಿ ತಂಜಾವೂರಿನಲ್ಲಿ ಹುಟ್ಟಿದರು. ಇವರು **ಖ್ಯಾತ ವೈಣಿಕರು** ಹಾಗೂ **ಶ್ರೇಷ್ಠ ವಾಗ್ಗೇಯಕಾರ**ರೂ ಆಗಿದ್ದರು. ಇವರು ಬಾಲ್ಯದಲ್ಲಿದ್ದಾಗಲೇ ಅಸಾಧಾರಣ ಸ್ವರಾಲಯವನ್ನು ಹೊಂದಿದ್ದರು. ಪ್ರಖ್ಯಾತ ವೈಣಿಕರಾಗಿದ್ದ ತಂಜಾವೂರಿನ ಆದಿ ಅಪ್ಪಯ್ಯ ಇವರ ಪೂರ್ವಜರು. ಇವರ ತಂದೆ ಚಿಕ್ಕರಾಮಪ್ಪನವರು ವೈಣಿಕ ವಿದ್ವಾಂಸರಾಗಿದ್ದರು. ಇವರ ಕುಟುಂಬದವರು ನೆಲ್ಲೂರಿನಿಂದ ಮೈಸೂರಿಗೆ ಬಂದರು. ಮೈಸೂರಿನ ಮಹಾರಾಜರ ಆಶ್ರಯದಲ್ಲಿ ಸಂಗೀತ ಇಲಾಖೆಯಲ್ಲಿ ಅಧಿಕಾರಿಗಳಾಗಿದ್ದರು. ತಮ್ಮ ಹತ್ತನೆಯ ವಯಸ್ಸಿನಲ್ಲಿ ಮೈಸೂರಿನ ಮಹಾರಾಜರ ಸಮ್ಮುಖದಲ್ಲಿ ಹಾಡುವ ಅವಕಾಶ ದೊರಕಿತು. ಇವರ ಸ್ವರಮಾಧುರ್ಯವನ್ನು ಮೆಚ್ಚಿಕೊಂಡು ಮಹಾರಾಜರಿಂದ ಸನ್ಮಾನಿತರಾದರು. ನಂತರ ಇವರು **ದೊಡ್ಡ ಶೇಷಣ್ಣ** ಹಾಗೂ ಸದಾ ಶಿವ ರಾಯರಲ್ಲಿ ತಮ್ಮ ಸಂಗೀತ ಶಿಕ್ಷಣವನ್ನು ಮುಂದುವರಿಸಿದರು. ಇವರು ತಮ್ಮ ಸಮರ್ಥ ಸಾಧನೆಯಿಂದ ವಿದ್ವತ್ತನ್ನು ಬೇಗ ಗಳಿಸಿ, ಇಪ್ಪತ್ತನೆಯ ವಯಸ್ಸಿನಲ್ಲಿ ಭಾರತದಾದ್ಯಂತ ಪ್ರಯಾಣ ಮಾಡಿದರು. ಇವರ ಪ್ರತಿಭೆಯನ್ನು ಗಮನಿಸಿ ರಾಮನಾಥ್ ಹಾಗೂ ಬರೋಡಾ ಮಹಾರಾಜರುಗಳಿಂದ **ಸನ್ಮಾನ** ಹಾಗೂ **ಖಿಲ್ಲತ್ತುಗಳನ್ನು** ಪಡೆದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಇವರಿಗೆ **ವೈಣಿಕ ಶಿಖಾಮಣಿ** ಬಿರುದನ್ನು ನೀಡಿ ಗೌರವಿಸಿದರು. ಪಿಟೀಲು, ಜಲ ತರಂಗ್, ಪಿಯಾನೋ ಮುಂತಾದ ವಾದ್ಯಗಳನ್ನು ನುಡಿಸುವುದರಲ್ಲಿ ಇವರು ನಿಷ್ಣಾತರಾಗಿದ್ದರು. ಮೈಸೂರಿನಲ್ಲಿ ಕೃಷ್ಣ ಜನ್ಮಾಷ್ಟಮಿಯಲ್ಲಿ ಸಂಗೀತ ಕಛೇರಿಗಳನ್ನು ಮೊಟ್ಟ ಮೊದಲ ಬಾರಿಗೆ ಆಚರಿಸಿದ ಕೀರ್ತಿ ಇವರದ್ದು. ಶೇಷಣ್ಣನವರ ವೀಣಾವಾದನದ ವೈಶಿಷ್ಟ್ಯವೆಂದರೆ, ರಾಗ, ಭಾವ ಮಾಧುರ್ಯ, ಪಲ್ಲವಿ, ನೆರವಲ್, ಮನೋಧರ್ಮ, ಸ್ವರಕಲ್ಪನೆ, ಅಪೂರ್ವ ಸಂಚಾರಗಳು, ದಾಟು ಸ್ವರಗಳು, ತಂತಿಗಳ ಮೃದು ಮಧುರವಾದ ಮಾರ್ದವತೆ, ರಾಗಾಲಾಪನೆ, ಸ್ವರ ಕಲ್ಪನೆಯ ಪ್ರಯೋಗಗಳನ್ನು ಮಾಡುತ್ತಿದ್ದವರಲ್ಲಿ ಇವರೇ ಮೊದಲನೆಯವರು.

ಇವರು ಶ್ರೇಷ್ಠ ವಾಗ್ಗೇಯಕಾರರೂ ಆಗಿದ್ದರು. ಹನ್ನೊಂದು **ಸ್ವರಜತಿಗಳು,** ಏಳು ವರ್ಣಗಳು, ಎರಡು ರಾಗ ಮಾಲಿಕೆಗಳು, ಹನ್ನೊಂದು ತೆಲುಗು ಸಂಗೀತ ಕೃತಿಗಳು, ಐದು ಕನ್ನಡ ಕೃತಿಗಳು ಮತ್ತು ಹದಿನೇಳು ತಿಲ್ಲಾನಗಳನ್ನು ರಚಿಸಿ ಇವರು ಸಂಗೀತ ಸರಸ್ವತಿಯ ಭಂಡಾರವನ್ನು ಹೆಚ್ಚಿಸಿದ್ದಾರೆ. ಇವರ ಶಿಷ್ಯರಲ್ಲಿ ಮುಖ್ಯರಾದವರೆಂದರೆ **ವೀಣೆ ವೆಂಕಟ ಗಿರಿಯಪ್ಪ ಕಲಾವಿದ ವೆಂಕಟಪ್ಪ ಶಮಾದೇವಿ, ಸುಬ್ರಹ್ಮಣ್ಯ ಶಾಸ್ತ್ರಿ, ನಾರಾಯಣ ಅಯ್ಯರ್,** ಇವರ ಮೊಮ್ಮಕ್ಕಳಾದ **ಸ್ವರಮೂರ್ತಿ ವೆಂಕಟ ನಾರಾಯಣರಾವ್ ಮತ್ತು ಎ.ಎಸ್.ಚಂದ್ರಶೇಖರಯ್ಯ.** ವೀಣೆ ಶೇಷಣ್ಣ ನವರು 1946ರಲ್ಲಿ ನಿಧನರಾದರು.

ನಾಲ್ಕನೆಯವರು ವೀಣೆ ಸುಬ್ಬಣ್ಣ.

ಇವರು 1858ರಲ್ಲಿ ಮೈಸೂರಿನಲ್ಲಿ ಜನಿಸಿದರು. ಮುಮ್ಮಡಿ ಕೃಷ್ಣರಾಜ ಒಡೆಯರ್ ಆಸ್ಥಾನದಲ್ಲಿ ಆಸ್ಥಾನ ವಿದ್ವಾಂಸರಾಗಿದ್ದ ವೆಂಕಟಸುಬ್ಬಯ್ಯನವರು ಇವರ ಅಜ್ಜ. ಇವರ ತಂದೆಯವರು ವೀಣೆ ಮತ್ತು ಸಂಗೀತದಲ್ಲಿ ವಿದ್ವಾಂಸರಾಗಿದ್ದ ದೊಡ್ಡ ಶೇಷಣ್ಣನವರು. ಸುಬ್ಬಣ್ಣನವರು ತಮ್ಮ ತಂದೆಯವರಿಂದ ವೀಣಾ ವಾದನವನ್ನು ಕಲಿತರು. ಹೆಚ್ಚಿನ ಸಂಗೀತಾಭ್ಯಾಸವನ್ನು ಪ್ರಸಿದ್ಧ ವಾಗ್ಗೇಯಕಾರರಾದ ಮೈಸೂರು ಸದಾಶಿವರಾಯರಲ್ಲಿ ಮುಂದುವರಿಸಿದರು. ಇವರ ಬಂಧುಗಳಾದ ವೀಣೆ ಶೇಷಣ್ಣನವರು ಇವರ ಸಹಪಾಠಿಗಳಾಗಿದ್ದರು. ಚಾಮರಾಜ ಒಡೆಯರ್ ಇವರ ಬಾಲ್ಯ ಸ್ನೇಹಿತರು ಸಹಪಾಠಿಗಳಾಗಿದ್ದರು.

ವೀಣಾವಾದನ ಮತ್ತು ಸಂಗೀತದಲ್ಲಿ ವಿದ್ವತ್ತನ್ನು ಗಳಿಸಿದ ನಂತರ, ಇವರು ಭಾರತದಾದ್ಯಂತ ಸಂಚಾರ ಮಾಡಿ ಅನೇಕ ನಗರಗಳಲ್ಲಿ ಸಂಗೀತ ಕಛೇರಿಗಳನ್ನು ಕೊಟ್ಟರು. ನಂತರ ನಾಲ್ವಡಿ ಕೃಷ್ಣರಾಜ ಒಡೆಯರ್ ಆಸ್ಥಾನದಲ್ಲಿ ಇವರು ವೀಣಾ ವಿದ್ವಾಂಸರಾದರು. ಇವರಿಗೆ ಶಂಕರಾಭರಣ, ಕಲ್ಯಾಣಿ, ಕಾಂಭೋಜಿ, ಕೇದಾರಗಾಳ ಮುಂತಾದ ರಾಗಗಳಲ್ಲಿ ಆಳವಾದ ಜ್ಞಾನವಿದ್ದಿತು. ಇವರು ಉತ್ತಮ ವಾಗ್ಗೇಯಕಾರರೂ ಆಗಿದ್ದರು. ಧರ್ಮಾವತಿ, ಋಷಭಪ್ರಿಯ, ಧೇನುಕಾ ಮುಂತಾದ ರಾಗಗಳಲ್ಲಿ ಇವರು ಹನ್ನೆರಡು ಕೀರ್ತನೆಗಳನ್ನು ರಚಿಸಿದ್ದಾರೆ. ಕಂಠೀರವ ನರಸರಾಜ ಒಡೆಯರ್ ವಿವಾಹದ ಸಂದರ್ಭದಲ್ಲಿ ಇವರು ರಚಿಸಿದ ನವರಾಗ ಮಾಲಿಕೆ ಪ್ರಸಿದ್ಧವಾದದ್ದು. ವೀಣೆ ಸುಬ್ಬಣ್ಣನವರಿಗೆ ಕನ್ನಡ ಸಾಹಿತ್ಯದ ಬಗೆಗೆ ವಿಶೇಷ ಗೌರವವಿದ್ದಿತು. ಇವರಿಗೆ ಅನೇಕ ಬಿರುದುಗಳು ಲಭಿಸಿವೆ. ಇವುಗಳಲ್ಲಿ ಮುಖ್ಯವಾದವುಗಳೆಂದರೆ ವೈಣಿಕ ವರಕೇಸರಿ, ವೈಣಿಕ ಚೂಡಾಮಣಿ, ವೈಣಿಕ ಪ್ರವೀಣ.

ಇವರಿಗೆ ಅಪಾರವಾದ ಶಿಷ್ಯರಿದ್ದರು. ಚಿಕ್ಕರಾಮರಾಯರು, ಬೆಳಕವಾಡಿ ಶ್ರೀನಿವಾಸ ಅಯ್ಯಂಗಾರ್, ಆರ್.ಎಸ್.ಕೇಶವಮೂರ್ತಿ, ವಿ. ಶ್ರೀಕಂಠ ಅಯ್ಯರ್, ಸ್ವರಮೂರ್ತಿ ವೆಂಕಟನಾರಾಯಣರಾವ್, ವಿದುಷಿ ಸುಬ್ಬಮ್ಮ ಮೊದಲಾದವರು ಮುಖ್ಯರು. ಇವರು ನುಡಿಸುತ್ತಿದ್ದ ವೀಣೆಯು ಇವರ ಶಿಷ್ಯರಲ್ಲಿ ಒಬ್ಬರಾದ ಆರ್.ಎಸ್. ಕೇಶವಮೂರ್ತಿಯವರ ಮನೆಯಲ್ಲಿಯೇ ಇದೆ. ವೀಣೆ ಸುಬ್ಬಣ್ಣನವರು 1961ರಲ್ಲಿ ನಿಧನರಾದರು.

ಐದನೆಯವರು ವಿ.ದೊರೆಸ್ವಾಮಿ ಅಯ್ಯಂಗಾರ್.

ಇವರು 1920ರಲ್ಲಿ ಜನಿಸಿದರು. ಇವರ ತಂದೆಯವರು ವೆಂಕಟೇಶ ಅಯ್ಯಂಗಾರ್. ಇವರು ಸ್ವತಃ ವೀಣೆಯನ್ನು ನುಡಿಸುವುದರಲ್ಲಿ ಸಿದ್ಧಹಸ್ತರಾಗಿದ್ದರು. ದೊರೆಸ್ವಾಮಿ ಅಯ್ಯಂಗಾರ್ ಅವರು ತಮ್ಮ ತಂದೆಯವರಲ್ಲಿಯೇ ಮೊದಲಿಗೆ ವಿದ್ಯಾಭ್ಯಾಸವನ್ನು ಮಾಡಿದರು. ನಂತರ ಪ್ರೌಢ ವ್ಯಾಸಂಗವನ್ನು ವೈಣಿಕ ಪ್ರವೀಣರು ಮತ್ತು ಆಸ್ಥಾನ ವಿದ್ವಾಂಸರೂ ಆಗಿದ್ದ ವೆಂಕಟಗಿರಿಯಪ್ಪನವರಲ್ಲಿ ಮುಂದುವರಿಸಿ, ಅವರ ಪ್ರಿಯ ಶಿಷ್ಯರಾದರು. ಚಿಕ್ಕ ವಯಸ್ಸಿನಲ್ಲಿಯೇ ನಾಲ್ವಡಿ ಕೃಷ್ಣರಾಜ ಒಡೆಯರ್ ಆಸ್ಥಾನದಲ್ಲಿ ವಿದ್ವಾಂಸರಾಗಿ ಗೌರವಕ್ಕೆ ಭಾಜನರಾದರು. ಟಿ. ಚೌಡಯ್ಯನವರ ಜೊತೆಯಲ್ಲಿ ಭಾರತದಾದ್ಯಂತ ಸುಮಾರು ಹತ್ತು ವರ್ಷಗಳಿಗೂ ಮೀರಿ ಸಂಗೀತ ಕಚೇರಿಗಳನ್ನು ಮಾಡಿದರು. ಇವರು ಮೈಸೂರು ವಿಶ್ವವಿದ್ಯಾನಿಲಯದ ಪದವೀಧರರೂ ಆಗಿದ್ದರು. 8.9.1960ರಲ್ಲಿ ಹಿಮಾಲಯದ ಯೋಗ ವೇದಾಂಗ ಆಶ್ರಮದ, ಸ್ವಾಮಿ ಶಿವಾನಂದರ ಅನುಗ್ರಹಕ್ಕೆ ಪಾತ್ರರಾಗಿ ವೈಣಿಕ ವಿದ್ಯಾಪಾರಂಗತ ಎಂಬ ಪ್ರಶಸ್ತಿಯನ್ನು ಗಳಿಸಿದರು. ಮದ್ರಾಸಿನ ಮ್ಯೂಸಿಕ್ ಅಕಾಡೆಮಿ ಮೊದಲಾದ ಭಾರತದ ಅನೇಕ ಸಭೆಗಳಲ್ಲಿ ವೀಣೆ ಕಛೇರಿಗಳನ್ನು ನಡೆಸಿ, ಕರ್ನಾಟಕಕ್ಕೆ ಕೀರ್ತಿಯನ್ನು ತಂದುಕೊಟ್ಟರು. 1970ರಲ್ಲಿ ಶಿರಾಜ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿ ಕೀರ್ತಿ ಹಾಗೂ ಪ್ರಶಂಸೆಗಳಿಗೆ ಭಾಜನರಾದರು. ಬಹಳ ಮೃದು ಸ್ವಭಾವದವರೂ ಮತ್ತು ನಿರಾಡಂಬರ ವ್ಯಕ್ತಿತ್ವವುಳ್ಳವರೂ ಹಾಗೂ ಖ್ಯಾತ ವಿದ್ವಾಂಸರ ಮೆಚ್ಚುಗೆಗೆ ಪಾತ್ರರಾದರು. 1971ರಲ್ಲಿ ಇವರಿಗೆ ರಾಷ್ಟ್ರ ಗೌರವ ಪ್ರಶಸ್ತಿ ದೊರಕಿತು. ಮೈಸೂರು ವಿಶ್ವವಿದ್ಯಾನಿಲಯವು ಇವರಿಗೆ ಗೌರವ ಡಾಕ್ಟರೇಟ್ ಪ್ರಶಸ್ತಿ ನೀಡಿ ಗೌರವಿಸಿತು. ಇವರು ಬೆಂಗಳೂರಿನ ಆಕಾಶವಾಣಿಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ದೊರೆಸ್ವಾಮಿ ಅಯ್ಯಂಗಾರರು 26.10.1997ರಲ್ಲಿ ನಿಧನರಾದರು.

ಮೈಸೂರು ವಿಭಾಗೀಯ ರೈಲ್ವೆ ಬಳಕೆದಾರರ ಸಲಹಾ ಸಮಿತಿ ಸದಸ್ಯರ ಸಭೆ

ರೈಲ್ವೆ ಸೇವೆಗಳ ಕುರಿತು ಚರ್ಚೆ; ಹಲವು ರೈಲು ಓಡಾಟಕ್ಕೆ ಸಲಹೆ



ಮೈಸೂರು,ಜೂ.30(ಆರ್‌ಕೆಬಿ)–ನೈಋತ್ಯ ರೈಲ್ವೆ ಮೈಸೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕರ ಕಚೇರಿ ಸಭಾಂಗಣದಲ್ಲಿ ವಿಭಾಗೀಯ ರೈಲ್ವೆ ಬಳಕೆದಾರರ ಸಲಹಾ ಸಮಿತಿ ಸದಸ್ಯರ ಸಭೆ ಗುರುವಾರ ನಡೆಯಿತು.

ಸಭೆಯಲ್ಲಿ ವಿವಿಧ ವೇದಿಕೆಗಳು ಮತ್ತು ಬೇರೆ ಬೇರೆ ಕ್ಷೇತ್ರಗಳನ್ನು ಪ್ರತಿನಿಧಿಸುವವರು ಹಾಗೂ ವಿಭಾಗದಾದ್ಯಂತ ಚುನಾಯಿತ ಸದಸ್ಯರ ಪ್ರತಿನಿಧಿಗಳು ಭಾಗವಹಿಸಿದ್ದರು. ಮೈಸೂರು ವಿಭಾಗದ ವ್ಯಾಪ್ತಿಯಲ್ಲಿ ಬರುವ ಪ್ರಯಾಣಿಕರ ಸೇವೆಗಳ ಸುಧಾರಣೆಗೆ ಸಂಬಂಧಿಸಿದಂತೆ ಹಲವಾರು ವಿಷಯಗಳ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

ದಾವಣಗೆರೆ, ಹರಿಹರ ಮತ್ತು ಹಾವೇರಿ ರೈಲು ನಿಲ್ದಾಣಗಳಲ್ಲಿ ಪ್ರಯಾಣಿಕರ ಸೌಲಭ್ಯಗಳನ್ನು ಹೆಚ್ಚಿಸುವುದು, ಮೈಸೂರಿನಿಂದ ದಾದರ್, ಅಜ್ಮೀರ್ ಮತ್ತು ನಿಜಾಮುದ್ದಿನ್ ನಿಲ್ದಾಣಗಳಿಗೆ ಈಗ ಇರುವ ಸಾಪ್ತಾಹಿಕ ಮತ್ತು ವಾರಕ್ಕೆ ಎರಡು ದಿನದ ಸೇವೆಯಿಂದ ವಾರಕ್ಕೆ ನಾಲ್ಕು ದಿನಗಳಿಗೆ ರೈಲು ಸೇವೆಗಳ ಹೆಚ್ಚಳ ಮುಂತಾದ ವಿವಿಧ ವಿಷಯಗಳ ಕುರಿತು ಸಮಿತಿಯ ಸದಸ್ಯರು ಚರ್ಚಿಸಿದರು.

ಮೈಸೂರು–ಬೆಂಗಳೂರು ಮಧ್ಯೆ ಸಂಚರಿಸುವ ಎಲ್ಲಾ ಸೂಪರ್ ಫಾಸ್ಟ್ ರೈಲುಗಳನ್ನು ಮತ್ತಷ್ಟು ವೇಗಗೊಳಿಸುವುದು, ಮೈಸೂರು ಮತ್ತು ಬೆಂಗಳೂರು ನಡುವೆ ಓಡುವ ಮಾಲ್ಗುಡಿ ಎಕ್ಸ್‌ಪ್ರೆಸ್‌ನಲ್ಲಿ ಹವಾ ನಿಯಂತ್ರಿತ ಬೋಗಿಗಳನ್ನು ಹೆಚ್ಚಿಸುವುದು, ಮೈಸೂರಿನಿಂದ ಹಾಸನ ಮತ್ತು ಮಂಗಳೂರು ಮೂಲಕ ಕರ್ನಾಟಕದ ಕರಾವಳಿ ಪ್ರದೇಶದೊಂದಿಗೆ ಸಂಪರ್ಕಿಸುವ ಹೊಸ ರೈಲು ಸೇವೆಗಳು, ತಾಳಗುಪ್ಪ ಮತ್ತು ಶಿವಮೊಗ್ಗ ಟೌನ್‌ನಿಂದ ಚೆನ್ನೈ ಮತ್ತು ಮೈಸೂರು ಕಡೆಗೆ ಕೋವಿಡ್ ಪೂರ್ವ ಅವಧಿಯಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದ ಎಲ್ಲಾ ರೈಲು ಸೇವೆಗಳನ್ನು ಪುನಾರಂಭಿಸುವುದು, ಶಿವಮೊಗ್ಗ ನಿಲ್ದಾಣದಿಂದ ಸಿಕಂದರಾಬಾದ್ ಮತ್ತು ಭುವನೇಶ್ವರದಂತಹ ವಿವಿಧ ರಾಜ್ಯಗಳ ರಾಜಧಾನಿಗಳನ್ನು ಸಂಪರ್ಕಿಸುವ ಹೊಸ ರೈಲು ಸೇವೆಗಳನ್ನು ಪ್ರಾರಂಭಿಸುವುದು, ಶಿವಮೊಗ್ಗ ಸಮೀಪದ ಕೋಟೆಗಂಗೂರಿನಲ್ಲಿ ಮಂಜೂರಾಗಿರುವ ಬೋಗಿ ಆರೈಕೆ ಕೇಂದ್ರದ ಕಾಮಗಾರಿಯನ್ನು ವೇಗಗೊಳಿಸುವುದು ಇತ್ಯಾದಿ ಹಲವಾರು ಕ್ರಮಗಳ ಬಗ್ಗೆ ಸಲಹೆಗಳು ಕೇಳಿ ಬಂದವು.

ಶುಚಿತ್ವ, ವಿಶೇಷ ರೈಲುಗಳ ಪ್ರಾರಂಭ, ಬೋಗಿಗಳ ಹೆಚ್ಚಳ ಸೇರಿದಂತೆ ವಿಭಾಗವು ಕೈಗೊಂಡಿರುವ ಹಲವಾರು ಅಭಿವೃದ್ಧಿ ಕಾರ್ಯಗಳ ಬಗ್ಗೆ ತೃಪ್ತಿ ವ್ಯಕ್ತಪಡಿಸಿದ ಸದಸ್ಯರು, ಮೈಸೂರು ಮತ್ತು ನಾಗನಹಳ್ಳಿ ನಿಲ್ದಾಣಗಳ ವಿಸ್ತರಣೆ ಸೇರಿದಂತೆ ವಿವಿಧ ಕಾಮಗಾರಿಗಳಿಗೆ ಮಂಜೂರಾತಿ ಪಡೆಯಲು ಮಾಡಿದ ಪ್ರಯತ್ನಗಳನ್ನು ಶ್ಲಾಘಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಮೈಸೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ರಾಹುಲ್ ಅಗರ್ವಾಲ್ ಮಾತನಾಡಿ, ಕೋವಿಡ್ ಸಾಂಕ್ರಾಮಿಕವು ಇಡೀ ಜಗತ್ತನ್ನು ಬಾಧಿಸುತ್ತಿರುವ ಸಂದರ್ಭದಲ್ಲಿಯೂ 2020–2021 ಮತ್ತು 2021–2022ರ ಆರ್ಥಿಕ ವರ್ಷದಲ್ಲಿ ಮೈಸೂರು ವಿಭಾಗವು ಗಮನಾರ್ಹ ಸಾಧನೆ ಮಾಡಿದೆ. ವಿಭಾಗದ ವಿವಿಧ ನಿಲ್ದಾಣಗಳಲ್ಲಿ ಮೂಲ ಸೌಕರ್ಯ ಅಭಿವೃದ್ಧಿಗೆ ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿದೆ. ಪ್ರಯಾಣಿಕರ ಸುರಕ್ಷತೆ ಮತ್ತು ಸಂರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಮೈಸೂರು ವಿಭಾಗವು ರೈಲು ಬಳಕೆದಾರರಿಗೆ ಉತ್ತಮ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಮತ್ತು ಒದಗಿಸಲು ಬದ್ಧವಾಗಿದೆ. ಸಭೆಯಲ್ಲಿ ಸದಸ್ಯರು ನೀಡಿರುವ ಸಲಹೆಗಳನ್ನು ಪರಿಗಣಿಸಲಾಗುವುದು ಎಂದರು. ರಾಹುಲ್ ಅಗರ್ವಾಲ್, ಈ ಎಲ್ಲಾ ಸಲಹೆಗಳನ್ನು ಪರಿಗಣಿಸಲಾಗುವುದು ಎಂದು ಭರವಸೆ ನೀಡಿದರು.

ಸಮಿತಿ ಸದಸ್ಯರಾದ, ಗುಂಡ್ಲುಪೇಟೆ ಶಾಸಕ ಸಿ.ಎಸ್. ನಿರಂಜನಕುಮಾರ್, ದಾವಣಗೆರೆ ಪ್ರಯಾಣಿಕರ ಸಮಿತಿ ಪ್ರಧಾನ ಕಾರ್ಯದರ್ಶಿ ರೋಹಿತ್ ಕುಮಾರ್ ಎಸ್. ಜೈನ್, ನಂಜನಗೂಡು ಕೈಗಾರಿಕಾ ಸಂಘದ ಕಾರ್ಯದರ್ಶಿ ಬಿ.ಎಸ್.ಚಂದ್ರಶೇಖರ್, ಎಂಎಂಇಸಿ ಸೈಡಿಂಗ್ ಲಾಜಿಸ್ಟಿಕ್ಸ್‌ನ ಸಲಹೆಗಾರ ಶ್ರೀನಿವಾಸಮೂರ್ತಿ, ಮೈಸೂರು ವಾಣಿಜ್ಯ ಮಂಡಳಿ ಖಜಾಂಚಿ ಮಹಾ ವೀರ್‌ಚಂದ್ ಬನ್ಸಾಲಿ, ಹಾಸನ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಮಂಡಳಿ ಅಧ್ಯಕ್ಷ ಎಂ.ಧನಪಾಲ್, ಶಿವಮೊಗ್ಗ ಜಿಲ್ಲಾ ಮಂಡಳಿ ಮತ್ತು ವಾಣಿಜ್ಯ ಕೈಗಾರಿಕಾ ನಿರ್ದೇಶಕ ಎಸ್.ಎಸ್. ಉದಯ್‌ಕುಮಾರ್, ಲಕ್ಷ್ಮೀಸಾಗರ ಚೆಲುವೇಗೌಡ, ಚಿನ್ನಯ್ಯ, ಮೈಸೂರು ವಿಭಾಗದ ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕರಾದ ದೇವಸಹಾಯಂ, ಇ.ವಿಜಯ, ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ಮಂಜುನಾಥ ಕನಮಡಿ, ಹಿರಿಯ ವಿಭಾಗೀಯ ಕಾರ್ಯಾಚರಣೆ ವ್ಯವಸ್ಥಾಪಕ ಲೋಹಿತೇಶ್ವರ, ಹಿರಿಯ ವಿಭಾಗೀಯ ಅಭಿಯಂತರ (ಸಮನ್ವಯ) ಕೆ.ರವಿಚಂದ್ರನ್ ಇನ್ನಿತರ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಬಾಲಮಂದಿರದಿಂದ ಬಾಲಕ ನಾಪತ್ತೆ



ಮೈಸೂರು,ಜೂ.30–ಮೈಸೂರಿನ ವಿಜಯನಗರ 4ನೇ ಹಂತದಲ್ಲಿರುವ ಬಾಲಕರ ಬಾಲಮಂದಿರದಿಂದ ಅಭಿಷೇಕ್‌ಕುಮಾರ್ (14) ಜೂ. 18ರಿಂದ ಕಾಣೆಯಾಗಿರುವ ಬಗ್ಗೆ ವಿಜಯನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಕೋಲುಮುಖ, ಸಾಧಾರಣ ಮೈಕಟ್ಟು, ಗೋಧಿ ಮೈಬಣ್ಣ ಹೊಂದಿದ್ದು, ಕನ್ನಡ ಭಾಷೆ ಮಾತನಾಡುತ್ತಾನೆ. ಈತನ ಬಗ್ಗೆ ಮಾಹಿತಿ ತಿಳಿದಲ್ಲಿ ವಿಜಯನಗರ ಪೊಲೀಸ್ ಠಾಣೆ ದೂ. 0821–2418117, 2418317, ಪೊಲೀಸ್ ಕಂಟ್ರೋಲ್ ರೂಂ ದೂ. 0821–2418330, ಮೊ. 9964155713 ಸಂಪರ್ಕಿಸಲು ಕೋರಲಾಗಿದೆ.

ವಿಶ್ವಕರ್ಮ ವಿದ್ಯಾರ್ಥಿ ನಿಲಯಕ್ಕೆ ಪ್ರವೇಶ

ಮೈಸೂರು, ಜೂ. 30– ಮೈಸೂರಿನ ಸರಸ್ವತಿಪುರಂನ ಶ್ರೀ ವಿಶ್ವಕರ್ಮ ವಿದ್ಯಾವರ್ಧಕ ಸಂಘದ ವಿದ್ಯಾರ್ಥಿನಿಲಯದ ಪ್ರವೇಶಕ್ಕೆ ವಿಶ್ವಕರ್ಮ ಜನಾಂಗದ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ನಿಲಯದ ಕಾರ್ಯಾಲಯದಲ್ಲಿ ಅರ್ಜಿ ನಮೂನೆಗಳನ್ನು ಪಡೆದು ಜು. 25ರೊಳಗೆ ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9880777103, 9591445325 ಸಂಪರ್ಕಿಸಬಹುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ
ಶುಕ್ರವಾರ
1-7-2022

ಬೆಳ್ಳಿ ಬೆಳಕು

ಸತ್ಯಮೂರ್ತಿ ತೋಳಹುಣಸೆ

ಯಶಸ್ಸಿನ ಹಾದಿಯಲ್ಲಿ ತ್ರಿವಿಕ್ರಮ



ಕ್ರೇಜಿಸ್ಟಾರ್ ರವಿಚಂದ್ರನ್ ದ್ವಿತೀಯ ಪುತ್ರ ವಿಕ್ರಮ್ ಅಭಿನಯದ ತ್ರಿವಿಕ್ರಮ ಕಳೆದ ವಾರ ಬಿಡುಗಡೆಯಾಗಿದ್ದು ಚಿತ್ರಕ್ಕೆ ಎಲ್ಲೆಡೆ ಉತ್ತಮ ಪ್ರತಿಕ್ರಿಯೆ ಬರುತ್ತಿದೆ. ನಿರ್ದೇಶಕ ಸಹನಾಮೂರ್ತಿ ಅವರು ಹೇಳಿರುವ ಭಾವನಾತ್ಮಕ ಪ್ರೇಮಕಥೆಯನ್ನು ಕನ್ನಡ ಜನ ಒಪ್ಪಿ, ಅಪ್ಪಿಕೊಂಡಿದ್ದಾರೆ. ದಿನದಿಂದ ದಿನಕ್ಕೆ ಚಿತ್ರದ ಕಲೆಕ್ಷನ್ ಕೂಡ ಹೆಚ್ಚಾಗುತ್ತಿದ್ದು, ಆ ಖುಷಿಯನ್ನು ಹಂಚಿಕೊಳ್ಳಲೆಂದೇ ನಿರ್ಮಾಪಕ ರಾಮ್ಕೋ ಸೋಮಣ್ಣ ಅವರು ಪತ್ರಿಕಾಗೋಷ್ಠಿ ಆಯೋಜಿಸಿದ್ದರು. ಈ ಸಕ್ಸಸ್ ಪ್ರೆಸ್‌ಮೀಟ್‌ನಲ್ಲಿ 'ತ್ರಿವಿಕ್ರಮ' ಚಿತ್ರದ ನಿರ್ದೇಶಕ ಸಹನಾ ಮೂರ್ತಿ, ನಿರ್ಮಾಪಕ ರಾಮ್ಕೋ ಸೋಮಣ್ಣ ಹಾಗೂ ನಾಯಕ ನಟ ವಿಕ್ರಂ ರವಿಚಂದ್ರನ್ ಕೂಡ ಹಾಜರಿದ್ದು ಖುಷಿಯ ವಿಚಾರಗಳನ್ನು ಹಂಚಿಕೊಂಡರು. ಮಧ್ಯಮವರ್ಗದ ಹುಡುಗನೊಬ್ಬ ಪ್ರೀತಿಯ ಹಿಂದೆ ಬಿದ್ದಾಗ ಅದು ಆತನ ತಂದೆ, ತಾಯಿ ಜೊತೆಗಿನ ಸಂಬಂಧಗಳ ಮೇಲೆ ಯಾವ ರೀತಿ ಪರಿಣಾಮ ಬೀರುತ್ತೆ ಫ್ಯಾಮಿಲಿ ಸಂಬಂಧಗಳು ಹೇಗೆ ಕ್ಷೀಣಿಸುತ್ತದೆ ಎಂಬುದನ್ನು ಅತ್ಯಂತ ಪರಿಣಾತ್ಮಕವಾಗಿ ಚಿತ್ರದಲ್ಲಿ ಹೇಳಲಾಗಿದೆ.

ನಂತರ ನಿರ್ಮಾಪಕ ಸೋಮಣ್ಣ ಮಾತನಾಡಿ ಚಿತ್ರಕ್ಕೆ ಜನರಿಂದ ಬರುತ್ತಿರುವ ಪ್ರತಿಕ್ರಿಯೆ ಕಂಡು ಖುಷಿಯಾಗಿದೆ. ಮೊದಲ ದಿನಕ್ಕಿಂತ ಎರಡನೇ, ಮೂರನೇ ದಿನಕ್ಕೆ ಕಲೆಕ್ಷನ್ ಇಂಪ್ರೂವ್ ಆಗ್ತಿದೆ. ನಮ್ಮ ನಿರೀಕ್ಷೆಗೂ ಮೀರಿ ಜನ ಚಿತ್ರವನ್ನು ಇಷ್ಟಪಡುತ್ತಿದ್ದಾರೆ. ಇದು ನಮಗೆ ನಿಜಕ್ಕೂ ಖುಷಿ ತಂದಿದೆ ಎಂದರು.

ನಾಯಕ ವಿಕ್ರಂ ಮಾತನಾಡಿ, ನಮ್ಮ ಚಿತ್ರದ ಕಂಟೆಂಟ್ ಪ್ರೇಕ್ಷಕರಿಗೆ ಇಷ್ಟವಾಗಿದೆ. ಮಧ್ಯಮವರ್ಗದ ಹುಡುಗನ ಪ್ರೇಮಕಥೆ ನೋಡುಗರಿಗೆ ಕನೆಕ್ಟ್ ಆಗುತ್ತದೆ ಎಂದು ಹೇಳಿದರು. ಚಿತ್ರದಲ್ಲಿ ಒಟ್ಟು 6 ಹಾಡುಗಳಿದ್ದು, ಮ್ಯಾಜಿಕಲ್ ಕಂಪೋಸರ್ ಅರ್ಜುನ್‌ಜನ್ಯ ಸಂಗೀತ ಸಂಯೋಜನೆ ಮಾಡಿದ್ದಾರೆ. ಸೋಮಣ್ಣ ಟಾಕೀಸ್ ಅಡಿಯಲ್ಲಿ ರಾಮ್ಕೋ ಸೋಮಣ್ಣ ಅವರು ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ವಿಕ್ರಮ್ ಜೋಡಿಯಾಗಿ ಸಂತೂರ್‌ಬೆಡಗಿ ಆಕಾಂಕ್ಷಾ ಶರ್ಮಾ ನಟಿಸಿದ್ದು, ತುಳಸಿ ಶಿವಮಣಿ ನಾಯಕನ ತಾಯಿಯಾಗಿ ಕಾಣಿಸಿಕೊಂಡಿದ್ದಾರೆ. ಸುಚೇಂದ್ರಪ್ರಸಾದ್, ಸಾಧುಕೋಕಿಲ, ರೋಹಿತ್‌ರಾಯ್, ಶಿವಮಣಿ, ಆದಿಲೋಕೇಶ್, ನಾಗೇಂದ್ರ ಶಾ, ಚಿಕ್ಕಣ್ಣ ಉಳಿದ ತಾರಾಗಣದಲ್ಲಿದ್ದಾರೆ.

ಹೋಪ್ ಟ್ರೇಲರ್ ಸಚಿವರಿಂದ ಬಿಡುಗಡೆ



ಒಂದಷ್ಟು ನಿರೀಕ್ಷೆಗಳ ನಡುವೆ ಬಿಡುಗಡೆಗೆ ಸಜ್ಜಾಗಿರುವ ಹೋಪ್ ಸಿನಿಮಾ ಜುಲೈ 8ರಂದು ರಾಜ್ಯಾದ್ಯಂತ ರಿಲೀಸ್ ಆಗುತ್ತಿದೆ. ಈಗಾಗಲೇ ಪೋಸ್ಟರ್, ಟೀಸರ್ ಮೂಲಕ ಸದ್ದು ಮಾಡುತ್ತಿರುವ 'ಹೋಪ್' ಚಿತ್ರದ ಟ್ರೇಲರ್ ಅನ್ನು ಸಚಿವ ಅಶ್ವತ್ಥ್ ನಾರಾಯಣ್ ಅವರು ಬಿಡುಗಡೆ ಮಾಡಿದರು. ನಂತರ ಮಾತನಾಡಿದ ಅವರು, ವರ್ಗಾವಣೆ ಸರ್ಕಾರದ ಮುಖ್ಯ ಬಾಧೆ. ನಾವು ಅದರಲ್ಲೇ ಮುಳುಗಿರುವವರು. ನಾನು ಅದನ್ನು ತುಂಬ ಚೆನ್ನಾಗಿ ಅರ್ಥ ಮಾಡಿಕೊಂಡಿದ್ದೇನೆ. ವರ್ಗಾವಣೆ ಅನ್ನೋದು ಪಿಡುಗು. ಅದೊಂದು ಚಾಲೆಂಜ್. ಹೀಗಾಗಿ ಇದರ ಮೇಲೆ ಬೆಳಕು ಚೆಲ್ಲುವ ಕೆಲಸ ಮಾಡಿರುವುದು ಶ್ಲಾಘನೀಯ. ಇದು ಸಮಾಜದ ಮೇಲೆ ಹೇಗೆ ಪರಿಣಾಮ ಬೀರುತ್ತದೆ, ಜಾಗೃತಿ ಮೂಡಿಸುವ ಕೆಲಸ ಆಗಬೇಕು ಅನ್ನುವ ಪ್ರಯತ್ನವನ್ನು ಈ ಸಿನಿಮಾ ಮೂಲಕ ಮಾಡಿದ್ದಾರೆ ಎಂದು ಹೇಳಿದರು.

ಸ್ನೂಕರ್ ಆಟಗಾರ್ತಿಯಾದ ನಿರ್ಮಾಪಕಿ ವರ್ಷಾ ಸಂಜೀವ್ ಮಾತನಾಡಿ, ಜುಲೈ 8ಕ್ಕೆ ನಮ್ಮ ಸಿನಿಮಾ ರಿಲೀಸ್ ಆಗುತ್ತಿದೆ. ಟ್ರೇಲರ್ ಎಲ್ಲರಿಗೂ ಇಷ್ಟವಾಗಿದೆ ಎಂದು ಭಾವಿಸುತ್ತೇನೆ. ಪ್ರತಿಯೊಬ್ಬರು ತುಂಬಾ ಚೆನ್ನಾಗಿ ಅಭಿನಯಿಸಿದ್ದಾರೆ. ಕೋವಿಡ್ ಟೈಮ್ ನಲ್ಲಿಯೂ ಕಲಾವಿದರು ಕೆಲಸ ಮಾಡಿದ್ದಾರೆ. ಒಳ್ಳೆ ಔಟ್‌ಪುಟ್ ಬಂದಿದೆ. ರಾಜಕೀಯ ಒತ್ತಡದಿಂದ ವರ್ಗಾವಣೆ ಹೇಗೆಲ್ಲಾ ನಡೆಯುತ್ತಿದೆ ಅನ್ನೋದನ್ನು ಸಿನಿಮಾದಲ್ಲಿ ಕಟ್ಟಿಕೊಡಲಾಗಿದೆ ಎಂದರು. ಅಂಬರೀಶ್ ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದು, ಎಸ್.ಹಲ್ಲೇಶ್ ಕ್ಯಾಮರಾ ವರ್ಕ್ ಮಾಡಿದ್ದಾರೆ. ರಿತ್ವಿಕ್ ಮುರಳೀಧರ್ ಸಂಗೀತ ನೀಡಿದ್ದಾರೆ.



ಬನಾರಸ್‌ನಿಂದ ಹಾಡಾಗಿ ಹರಿದ ಮಾಯಾಗಂಗೆ




ಭಾರತದ ಪುಣ್ಯಕ್ಷೇತ್ರಗಳಲ್ಲಿ ಕಾಶಿಗೆ ವಿಶೇಷ ಸ್ಥಾನ. ಕಾಶಿಯನ್ನು ಬನಾರಸ್ ಅಂತಲೂ ಕರೆಯುತ್ತಾರೆ. ಗಂಗೆ ಬನಾರಸ್‌ನಲ್ಲಿ ಹರಿದು ಎಷ್ಟೋ ಜನರ ಪಾಪ ಕಳೆಯುತ್ತಿದ್ದಾಳೆ. ಈ ಪವಿತ್ರ ನಗರದ ಹೆಸರಿನಲ್ಲಿ ಪ್ಯಾನ್ ಇಂಡಿಯಾದಿಂದ ಸಿನಿಮಾವೊಂದು ನಿರ್ಮಾಣವಾಗಿದೆ. ಜಯತೀರ್ಥ ನಿರ್ದೇಶನದ, ಝೈದ್‌ಖಾನ್ ಹಾಗೂ ಸೋನಾಲ್ ಮೊಂತೆರೊ ನಾಯಕ-ನಾಯಕಿಯಾಗಿ ನಟಿಸಿರುವ ಈ ಚಿತ್ರದ ಮೊದಲಹಾಡು "ಮಾಯಾಗಂಗೆ" ಇತ್ತೀಚೆಗೆ ಬಿಡುಗಡೆಯಾಗಿದೆ. ಕನ್ನಡ ಹಾಗೂ ಮಲೆಯಾಳಂ ಭಾಷೆಯ ಹಾಡುಗಳನ್ನು ಏಕಕಾಲಕ್ಕೆ ಬಿಡುಗಡೆ ಮಾಡಲಾಯಿತು.

ಡಾ॥ವಿ.ನಾಗೇಂದ್ರಪ್ರಸಾದ್ ಬರೆದಿರುವ ಈ ಹಾಡಿಗೆ ಅಜನೀಶ್ ಲೋಕನಾಥ್ ಸಂಗೀತ ನೀಡಿದ್ದಾರೆ. ನಿರ್ಮಾಪಕಿ ಶೈಲಜಾನಾಗ್ ಅವರು ಈ ಹಾಡನ್ನು ಬಿಡುಗಡೆ ಮಾಡಿದರು. ಅಭಿಷೇಕ್ ಅಂಬರೀಶ್, ವಿನೋದ್ ಪ್ರಭಾಕರ್ ಹಾಗೂ ಯಶಸ್‌ಸೂರ್ಯ, ಲಹರಿವೇಲು, ಆರ್.ಚಂದ್ರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಕಾಶಿಯಲ್ಲಿ ಚಿತ್ರೀಕರಣ ಮಾಡುವುದು ಅಷ್ಟು ಸುಲಭವಲ್ಲ. ಅಲ್ಲಿನ 84 ಘಾಟ್‌ಗಳಲ್ಲೂ ನಮ್ಮ ಚಿತ್ರದ ಚಿತ್ರೀಕರಣ ನಡೆದಿದೆ. ನಾಯಕ ಜೈದ್‌ಖಾನ್, ಸೋನಾಲ್ ಅವರ ಅಭಿನಯ ಕೂಡ ಚೆನ್ನಾಗಿದೆ. ಸೆನ್ಸಾರ್ ಕೂಡ ಮುಗಿದಿದ್ದು ಸದ್ಯದಲ್ಲೇ "ಬನಾರಸ್" ನಿಮ್ಮ ಮುಂದೆ ಬರಲಿದೆ ಎಂದರು ನಿರ್ದೇಶಕ ಜಯತೀರ್ಥ. ಇನ್ನು ಇಡೀ ಚಿತ್ರತಂಡದ ಪರಿಶ್ರಮದಿಂದ "ಬನಾರಸ್" ಚೆನ್ನಾಗಿ ಬಂದಿದೆ ಎಂದು ನಿರ್ಮಾಪಕರು ತಿಳಿಸಿದರು. ಚಿತ್ರದಲ್ಲಿ ಪಾತ್ರ ಮಾಡಿರುವ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಸುಧಾಕರ್‌ರಾವ್, ಛಾಯಾಗ್ರಾಹಕ ಅದ್ವೈತ ಹಾಗೂ ಮಲೆಯಾಳಂ ಗೀತರಚನೆಕಾರ ಆ "ಬನಾರಸ್" ಬಗ್ಗೆ ಮಾತನಾಡಿದರು.

ಸಿನಿಪದಬಂಧ-014

ಆಜ್ಹಾದ್ ಜಿ. ಆಚಾರ್ಯ 6361429085



ಹೆಸರು ______________________

ವಿಳಾಸ ______________________

____

ದೂರವಾಣಿ ಸಂಖ್ಯೆ ______________________

ಎಡದಿಂದ ಬಲಕ್ಕೆ

1. ನಾಯಕ, ಖಳನಾಯಕರ ದ್ವಿಪಾತ್ರದಲ್ಲಿ ಡಾ. ರಾಜ್ (7)
3. (ಅರಣ್ಯಾಧಿಕಾರಿ ಪಾತ್ರದಲ್ಲಿ) ವಿಷ್ಣುವರ್ಧನ್ ನಟಿಸಿದ ಚಿತ್ರ (4)
4. ರಾಜಕುಮಾರ್ ಹರಿಣಿ ನಟನೆಯ ವಿಠ್ಠಲ್ ನಿರ್ದೇಶನದ ಚಿತ್ರ (4)
6. ಶ್ರೀಪ್ರಿಯಾ ನಿರ್ದೇಶನದ ಶಂಕರನಾಗ್-ಗೀತಾ ಚಿತ್ರ ಹಿಂತಿರುಗಿದೆ (3)
9. ಬಂಗಾರಿ ಯಾರೇ ನೀ ಬುಲ್ ಬುಲ್ ಹಾಡಿನ ಚಿತ್ರ (2)
11. ಸಂತೆಯಲ್ಲಿ ನಿಂತ ---, ಶಿವರಾಜಕುಮಾರ್ ಚಿತ್ರ (3)
12. ಸೂರಿ ನಿರ್ದೇಶನದಲ್ಲಿ ಶಿವಣ್ಣ-ಡಾಲಿ ಚಿತ್ರ (3)
13. ಪ್ರೇಮ್ ನಿರ್ದೇಶನದಲ್ಲಿ ದರ್ಶನ್ ಕಪ್ಪಾದರೇ? (3)
14. ವಿಷ್ಣುವರ್ಧನರನ್ನು ಅಭಿಮಾನಿಗಳು ಪ್ರೀತಿಯಿಂದ ಕರೆದಿದ್ದು ಹೀಗೆ (2)
16. ಶಿವಣ್ಣ-ಸುಧಾರಾಣಿ-ದೇವರಾಜ್ ಚಿತ್ರಕ್ಕೆ ಗುರುದತ್ತ್ ನಿರ್ದೇಶನ (3)
18. ಬಿ.ಸಿ.ಪಾಟೀಲ್-ವಿಜಯಲಕ್ಷ್ಮಿ ಅಭಿನಯದ ಚಿತ್ರ (4)
19. ಶಶಿಕುಮಾರ್-ಸುಧಾರಾಣಿ ಹಾಡಿದ ನೂತನ ಸ್ವರ (4)
20. ಲೋಕವೇ ಕೊಂಡಾಡಿದ ಪುತ್ರ ಡಾ. ರಾಜ್ ಚಿತ್ರ (7)

ಮೇಲಿನಿಂದ ಕೆಳಕ್ಕೆ


1. ಬೇಬಿ ಶ್ಯಾಮಿಲಿ-ಶ್ರೀನಾಥ್ ಅಭಿನಯದ ಚಿತ್ರ (4)
2. ---- ಗರ್ವಭಂಗ ರಾಘಣ್ಣ-ಮಾಲಾಶ್ರೀ ಚಿತ್ರ (4)
5. ತರುಣ್ ಚಂದ್ರ-ರೇಖಾ ಜೋಡಿಯ ಚಿತ್ರ (4)
7. ವಿಷ್ಣುವರ್ಧನ್ ನಾಯಕ ನಟರಾದ ಮೊದಲ ಚಿತ್ರ (5)
8. ಬಾಗಿಲನು ತೆರೆದು.... ಪ್ರಸಿದ್ಧ ಚಿತ್ರಗೀತೆಯ ಕರ್ತೃ (5)
10. ರಶ್ಮಿಕಾ ಮಂದಣ್ಣ-ಧ್ರುವ ಸರ್ಜಾ ಅಭಿನಯದ (ಇತ್ತೀಚಿನ) ಚಿತ್ರ (3)
11. ಕೆ.ಎಸ್.ಆರ್ ದಾಸ್ ನಿರ್ದೇಶನದಲ್ಲಿ ವಿಷ್ಣು-ದ್ವಾರಕೀಶ್ ಚಿತ್ರ (4)
15. ಮತ್ತೇರಿದ ಆನೆ- ಶ್ರೀಮುರಳಿ ನಟನೆಯ ಚಿತ್ರ (4)
17. ಜಗವೇ ಒಂದು ---- ಎಂದು ಡಾ.ರಾಜ್ ಹಾಡಿದರು (4)

ಸಿನಿ ಪದಬಂಧ 013ರ ಸರಿ ಉತ್ತರ

ಜ	ಗ	ಮೆ	ಚ್ಚಿ	ದ	ಮ	ಗ		ಚಿಂ	ಗಾ	ರಿ
ನು		ರ			ದ				ಜಿ	
ಮ		ವ		ಚಿ	ರಂ	ಜೀ	ವಿ		ನ	
ದ		ಣಿ			ಗಿ				ಮ	ಸ್ತಿ
ಜೋ		ಗೆ				ಅ	ರ	ಮ	ನೆ	
ಡಿ			ಸ್ನೇ				ಚ್ಚು			ಜ
	ನ	ಗೆ	ಹ	ಬ್ಬ				ಭ		ಗ
ಅ	ಮ್ಮ				ಜೇ			ಕ್ತ		ತ್
	ಸಂ		ಅ	ಮಾ	ನು	ಷ		ವಿ		ಕಿ
	ಸಾ				ಗೂ			ಜ		ಲಾ
ಯಾ	ರ	ದು		ಬಿ	ಡು	ಗ	ಡೆ	ಯ	ಬೇ	ಡಿ

ವಿಜೇತರು: ಧನುಷ್.ಎಂ
ನಂ.85, 5ನೇ ಮೇನ್, 2ನೇ ಹಂತ, ಎಂ.ಬ್ಲಾಕ್,
ಕುವೆಂಪುನಗರ, ಮೈಸೂರು ಜಿಲ್ಲೆ

ಪದ್ಮಾವತಿ ಹಾಡುಗಳ ಅನಾವರಣ



ಈಹಿಂದೆ 'ತಲೆ ಬಾಚ್ಕಳ್ಳಿ ಪೌಡ್ರು ಹಾಕ್ಕಳ್ಳಿ' ಚಿತ್ರದಲ್ಲಿ ನಟಿಸಿದ್ದ ವಿಕ್ರಂ ಆರ್ಯ ಒಂದಷ್ಟು ಗ್ಯಾಪ್ ನಂತರ 'ಪದ್ಮಾವತಿ' ಚಿತ್ರದಲ್ಲಿ ಮಿಲಿಟರಿ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದಾರೆ. ನಾಮದೇವ ಭಟ್ಟರ್ ಹೆಸರಿನಲ್ಲಿ ನಿರ್ಮಾಪಕರೂ ಆಗಿದ್ದಾರೆ. ಇದೇ 15ರಂದು ಬಿಡುಗಡೆಯಾದ ಪದ್ಮಾವತಿ ಚಿತ್ರದ ಹಾಡುಗಳ ಅನಾವರಣ ಕಾರ್ಯಕ್ರಮ ಇತ್ತೀಚೆಗೆ ನೆರವೇರಿತು. ಈ ಚಿತ್ರಕ್ಕೆ ಮಿಥುನ್ ಚಂದ್ರಶೇಖರ್ ಚಿತ್ರಕತೆ, ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದಾರೆ.

ಏನೂ ಅರಿಯದ ವಯಸ್ಸಿನಲ್ಲಿ ತಪ್ಪುಗಳನ್ನು ಮಾಡುವುದು ಸಹಜ. ಅದನ್ನು ಹಲವಾರು ವರ್ಷಗಳ ನಂತರ ಸರಿಪಡಿಸಿಕೊಳ್ಳುವ ದಾರಿಯಲ್ಲಿ ಒಬ್ಬ ಹೆಣ್ಣು ತನ್ನ ಹಳೆಯ ನೆನಪುಗಳನ್ನು ಕೆದಕಿಕೊಂಡು ಹೋಗುತ್ತಾಳೆ. ಅಲ್ಲಿಂದ ಅವಳ ಜೀವನದ ಹಾದಿ ಯಾವ ಹಂತಕ್ಕೆ ಸಾಗುತ್ತದೆ ಎಂಬುದನ್ನು 'ಪದ್ಮಾವತಿ' ಚಿತ್ರದಲ್ಲಿ ಹೇಳಲಾಗಿದೆ. ಜೊತೆಗೆ ತಾಯಿ ಮಗನ ನಡುವಿನ ಸೆಂಟಿಮೆಂಟ್ ಕೂಡ ಚಿತ್ರದಲ್ಲಿದೆ. ಶಿವಳ್ಳಿಬೆಟ್ಟ, ಸಾಗರ, ಹೊಸನಗರ, ಚಿಕ್ಕಮಗಳೂರು, ಶಿವಮೊಗ್ಗ ಹಾಗೂ ಬೆಂಗಳೂರು ಮುಂತಾದ ಕಡೆಗಳಲ್ಲಿ 51 ದಿನಗಳ ಕಾಲ ಚಿತ್ರೀಕರಣ ನಡೆಸಲಾಗಿದೆ.

ಪ್ರಾಯದ ಯುವತಿ, ಮಧ್ಯವಯಸ್ಸಿನ ಮಹಿಳೆ ಮತ್ತು 50 ವರ್ಷದ ವಯಸ್ಕಳಾಗಿ ಮೂರು ಶೇಡ್‌ಗಳಲ್ಲಿ ನಾಯಕಿ ಸಾಕ್ಷಿ ಮೇಘನಾ ಕಾಣಿಸಿಕೊಂಡಿದ್ದಾರೆ.

ಉಳಿದಂತೆ ಸುರೇಶ್ ಸ್ವಾಮಿರಾವ್, ಕವಿತಾ ಪ್ರಿಯಾ, ರಾಘವಕುಮಾರ್, ಅಭಿಲಾಶ್.ಬಿ. ಹೊಸನಗರ, ಶಿವಮೊಗ್ಗ ರಾಮಣ್ಣ, ಅರ್ಚನಾ ಶೆಟ್ಟಿ, ರಾಜೇಶ್ವರಿ ಪಾಂಡೆ, ಶರಣ್‌ಗಿನಕೇರಿ ಮುಂತಾದವರ ತಾರಾಗಣವಿದೆ. ಪುಟ್ಟರಾಜ ಗವಾಯಿಗಳ ಆಶ್ರಮದ ವಿದ್ಯಾರ್ಥಿ ಶರಣ್ ಕುಮಾರ್ ಚಿತ್ರದ ನಾಲ್ಕು ಹಾಡುಗಳಿಗೆ ಸಾಹಿತ್ಯ ರಚಿಸಿದ್ದಾರೆ. ಜ್ಯೂ.ಎಸ್.ಜಾನಕಿ ಎಂದೇ ಹೆಸರಾದ ಕೊಪ್ಪಳದ ಗಂಗಮ್ಮ ಒಂದು ಗೀತೆಗೆ ಧ್ವನಿಯಾಗಿದ್ದಾರೆ. ದಿನೇಶ್‌ಕುಮಾರ್ ಅವರ ಸಂಗೀತ, ಕೆ.ಎಂ. ಶೋಯಿಬ್ ಅಹ್ಮದ್ ಅವರ ಛಾಯಾಗ್ರಹಣ, ಲತಾ.ಎಸ್, ಅವರ ಕಥೆ, ಈಶ್ವರ್ ಸಂಕಲನ ಹಾಗೂ ಥ್ರಿಲ್ಲರ್ ಮಂಜು ಅವರ ಸಾಹಸ ಈ ಚಿತ್ರಕ್ಕಿದೆ.


ಈ ವಾರ ತೆರೆಗೆ ವಿಂಡೋಸೀಟ್



ನಟಿ, ನಿರೂಪಕಿ ಶೀತಲ್ ಶೆಟ್ಟಿ ಮೊದಲ ಬಾರಿಗೆ ನಿರ್ದೇಶಿಸಿರುವ ಚಿತ್ರ 'ವಿಂಡೋಸೀಟ್' ಈ ವಾರ ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ. ಈ ಚಿತ್ರವನ್ನು ಶಾಲಿನಿ ಆರ್ಟ್ಸ್ ಮೂಲಕ ಶಾಲಿನಿ ಮಂಜುನಾಥ್ ನಿರ್ಮಿಸಿದ್ದಾರೆ.

ಚಿತ್ರದ ನಾಯಕನಾಗಿ ನಿರೂಪ್ ಭಂಡಾರಿ ಜೊತೆಗೆ ಸಂಜನಾ ಆನಂದ್ ಹಾಗೂ ಅಮೃತಾ ಅಯ್ಯಂಗಾರ್ ಇಬ್ಬರು ನಾಯಕಿಯರು. ಈ ಹಿಂದೆ ಕಿರುಚಿತ್ರ ನಿರ್ದೇಶಿಸಿದ್ದ ಶೀತಲ್ ಶೆಟ್ಟಿ ಅವರು ಇದೇ ಮೊದಲ ಬಾರಿಗೆ ನಿರ್ದೇಶಿಸಿರುವ ಚಿತ್ರ ಇದಾಗಿದ್ದು, ಕಥೆ ಹಾಗೂ ಚಿತ್ರಕಥೆಯನ್ನು ಅವರೇ ಬರೆದಿದ್ದಾರೆ.

'ವಿಂಡೋಸೀಟ್' ಒಂದು ಸಸ್ಪೆನ್ಸ್, ಥ್ರಿಲ್ಲರ್ ಜೊತೆಗೆ ಮಿಸ್ಟ್ರಿ ಕಥೆ ಇರುವ ಚಿತ್ರ. ಟ್ರೈಲರನ್ನು ಕಿಚ್ಚ ಸುದೀಪ್ ಅವರು ಟ್ವಿಟರ್‌ನಲ್ಲಿ ರಿಲೀಸ್ ಮಾಡಿ ಶುಭ ಹಾರೈಸಿದ್ದರು. ತಾಳಗುಪ್ಪದಿಂದ ಸಾಗರದವರೆಗೆ ಟ್ರೈನ್‌ನಲ್ಲಿ ಪ್ರಯಾಣಿಸುವ ನಾಯಕನ ಜರ್ನಿಯಲ್ಲಿ ಚಿಗುರುವ ಪ್ರೀತಿ, ಜೊತೆಗೊಂದು ಮರ್ಡರ್ ಮಿಸ್ಟ್ರಿ ಈ ಚಿತ್ರದಲ್ಲಿದೆ. ನಿರೂಪ್ ಭಂಡಾರಿ ತಾಳಗುಪ್ಪದ ರಘು ಎಂಬ ಹಾಡುಗಾರನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಸದಾ ವಿಂಡೋಸೀಟನ್ನೇ ಇಷ್ಟಪಡುವ ನಾಯಕನ 'ವಿಂಡೋಸೀಟ್' ವ್ಯಾಮೋಹವೇ ಆತನನ್ನು ದೊಡ್ಡ ಸಂಕಷ್ಟಕ್ಕೆ ತಳ್ಳುತ್ತದೆ. ಆ ಸುಳಿಯಿಂದ ರಘು ಪಾರಾಗುತ್ತಾನಾ? ಅಥವಾ ಕಟ್ಟುಪಾಡುಗಳಿಗೆ ಸಿಕ್ಕು ಸಂಕಷ್ಟಕ್ಕೆ ಸಿಲುಕುತ್ತಾನಾ ಅನ್ನೋದು 'ವಿಂಡೋಸೀಟ್' ಚಿತ್ರದ ಥೀಮ್. ಅರ್ಜುನ್ ಜನ್ಯ ಅವರ ಸಂಗೀತ ನಿರ್ದೇಶನ ಹಾಗೂ ವಿಘ್ನೇಶ್‌ರಾಜ್ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ.



ವೃಕ್ಷಮಾತೆ ಸಾಲುಮರದ ತಿಮ್ಮಕ್ಕನಿಗೆ ಪರಿಸರ ರಾಯಭಾರಿ ಗೌರವ



ಸಂಪುಟ ದರ್ಜೆ ಸ್ಥಾನಮಾನ

ಬೆಂಗಳೂರು, ಜೂ.30– ವೃಕ್ಷಮಾತೆ ಸಾಲು ಮರದ ತಿಮ್ಮಕ್ಕ ಅವರಿಗೆ ಪರಿಸರ ರಾಯಭಾರಿ ಗೌರವ ನೀಡಿ, ಜೊತೆಗೆ ಕ್ಯಾಬಿನೆಟ್ ದರ್ಜೆಯ ಸ್ಥಾನಮಾನ ನೀಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದಿಲ್ಲಿ ತಿಳಿಸಿದ್ದಾರೆ.

ಬೆಂಗಳೂರಿನ ಅಂಬೇಡ್ಕರ್ ಭವನದಲ್ಲಿ ಗುರುವಾರ ನಡೆದ ಸಾಲುಮರದ ತಿಮ್ಮಕ್ಕನವರ 111ನೇ ಜನ್ಮದಿನದ ಸಂಭ್ರಮ ಹಾಗೂ ಸಾಲುಮರದ ತಿಮ್ಮಕ್ಕ ಗ್ರೀನರಿ ಅವಾರ್ಡ್ ಪ್ರದಾನ ಸಮಾರಂಭದಲ್ಲಿ ಪಾಲ್ಗೊಂಡು ತಿಮ್ಮಕ್ಕ ಅವರಿಗೆ ಶಾಲು ಹೊದಿಸಿ, ಹಾರಹಾಕಿ, ಚಿನ್ನದ ಕಡಗ ತೊಡಿಸಿ ಸನ್ಮಾನಿಸಿ, ಮಾತನಾಡಿದ ಅವರು, ರಾಜ್ಯದ ಉದ್ದಕ್ಕೂ ಪರಿಸರ ರಕ್ಷಣೆಯ ಪ್ರಚಾರ ಮಾಡಲು ಈ ಸ್ಥಾನಮಾನ ನೀಡಲಾಗಿದೆ. ಹೊರ ರಾಜ್ಯಕ್ಕೆ ತೆರಳಿದರೆ ಸರ್ಕಾರದಿಂದಲೇ ಖರ್ಚು ಭರಿಸಲಾಗುವುದು. ವಾರ್ತಾ ಇಲಾಖೆಯಿಂದ ಸಾಲುಮರದ ತಿಮ್ಮಕ್ಕ ಅವರ ವೆಬ್ ಸೀರಿಸ್ ಮಾಡಲಾಗುವುದು. ಅವರಿಗೆ ಬೇಲೂರು ತಾಲೂಕಿನಲ್ಲಿ ಹತ್ತು ಎಕರೆ ಭೂಮಿ ಮಂಜೂರು ಮಾಡಲಾಗುವುದು. ಬೆಂಗಳೂರಿನಲ್ಲಿ ಬಿಡಿಎ ನಿವೇಶನ ನೀಡಲಾಗಿದೆ. ಆ ನಿವೇಶನದಲ್ಲಿ ಮನೆ ನಿರ್ಮಿಸಿ ಕೊಡಲಾಗುವುದು ಎಂದರು. ಬೇಲೂರು ಶಾಸಕ ಲಿಂಗೇಶ್ ಮಾತನಾಡಿ, ಸಾಲುಮರದ ತಿಮ್ಮಕ್ಕ ಅವರಿಗೆ ಲಭಿಸಿದ ಪ್ರಶಸ್ತಿಗಳು ಹಾಗೂ ಅವರ ಸಾಧನೆ ಬಿಂಬಿಸಲು ವಸ್ತು ಸಂಗ್ರಹಾಲಯ ನಿರ್ಮಿಸಲು ಅನುದಾನ ಹಾಗೂ ಬಳ್ಳೂರು ಅಭಿವೃದ್ಧಿಗೆ 2 ಕೋಟಿ ರೂ. ಅನುದಾನ ನೀಡುವಂತೆ ಮನವಿ ಮಾಡಿದರು.

ಒಂದನೇ ಪುಟದಿಂದ

ಶತಸಿದ್ಧ

ಇಲಾಖೆ ಅನುಮತಿ ಪಡೆಯಲು ಸೂಚಿಸಿತ್ತು. ರಾಜ್ಯ ಸರ್ಕಾರ ವರದಿ ಸಲ್ಲಿಸಿದ ನಂತರ ಸಾಕಷ್ಟು ಸಭೆಗಳು ನಡೆದಿದ್ದರೂ ರಾಜ್ಯ ಸರ್ಕಾರದ ವಿಸ್ತೃತ ಯೋಜನೆ ಚರ್ಚೆಗೆ ಬಂದಿರಲಿಲ್ಲ. ಈ ಮಧ್ಯೆ ತಮಿಳುನಾಡು ಸರ್ಕಾರ ಯೋಜನೆಗೆ ಕ್ಯಾತೆ ತೆಗೆದಿದ್ದಲ್ಲದೆ, ಕಾನೂನು ಹೋರಾಟ ಒಂದು ಕಡೆ ನಡೆಸಿದರೆ, ಮತ್ತೊಂದೆಡೆ ವಿಸ್ತೃತ ಯೋಜನೆಗೆ ಅನುಮತಿ ನೀಡಬಾರದೆಂದು ಸಿಡಬ್ಲ್ಯೂಸಿಗೆ ಪತ್ರ ಬರೆದಿತ್ತು. ಜತೆಗೆ ಕೇಂದ್ರದ ಮೇಲೆ ರಾಜಕೀಯ ಒತ್ತಡ ಹೇರಿತ್ತು. ಒತ್ತಡ ಮತ್ತು ಕಾನೂನು ಹೋರಾಟದ ನಡುವೆಯೂ ಯೋಜನೆಗೆ ಮಂಜೂರಾತಿ ನೀಡಬೇಕೇ ಅಥವಾ ಬೇಡವೇ ಎಂಬ ವಿಚಾರಕ್ಕೆ ಸಂಬಂಧಿಸಿದಂತೆ ಜುಲೈ6 ಮತ್ತು 7 ರಂದು ರಾಜ್ಯ ಸರ್ಕಾರ ಮೇಕೆದಾಟು ಯೋಜನೆಗೆ ಸಂಬಂಧಿಸಿದಂತೆ ನೀಡಿರುವ ವಿಸ್ತೃತ ಯೋಜನೆ ಕುರಿತಂತೆ ಚರ್ಚೆಗೆ ಕೈಗೆತ್ತಿಕೊಳ್ಳಲಿದೆ. ಸಭೆ ನಡೆಯುತ್ತಿರುವುದನ್ನು ಜಲಸಂಪನ್ಮೂಲ ಸಚಿವ ಗೋವಿಂದ ಕಾರ್ಜೋಳ ಸುದ್ದಿಗಾರರಿಗೆ ಖಚಿತಪಡಿಸಿದ್ದಾರೆ. ವಿಸ್ತೃತ ಯೋಜನೆ ಸಭೆಯ ಮುಂದೆ ಬಾರದ ರೀತಿಯಲ್ಲೇ ತಮಿಳುನಾಡು ಸರ್ಕಾರ ನೋಡಿಕೊಳ್ಳುತ್ತಿತ್ತು.

ತಮಿಳುನಾಡು ರಾಜಕೀಯವಾಗಿ ಈ ಯೋಜನೆ ಬಳಕೆ ಮಾಡಿಕೊಳ್ಳುತ್ತಿದೆ. ನಮ್ಮ ನೀರನ್ನು ನಮ್ಮ ನೆಲದಲ್ಲಿ ಬಳಕೆ ಮಾಡಿಕೊಳ್ಳಲು ಯಾರ ಅನುಮತಿಯೂ ಬೇಕಿಲ್ಲ. ಕುಡಿಯುವ ನೀರು ಮತ್ತು ವಿದ್ಯುತ್ ಉತ್ಪಾದನೆ ಮಾಡುವ ಏಕೈಕ ಉದ್ದೇಶದಿಂದ ಹೆಚ್ಚುವರಿಯಾಗಿ ಸಮುದ್ರಕ್ಕೆ ಹರಿದುಹೋಗುವ ನೀರನ್ನು ತಡೆಯಲು ಅಣೆಕಟ್ಟು ನಿರ್ಮಿಸುತ್ತಿದ್ದೇವೆ. ಈ ಯೋಜನೆ ಎರಡೂ ರಾಜ್ಯಗಳಿಗೂ ಉಪಯುಕ್ತ. ತಮಿಳುನಾಡಿಗೆ 177 ಟಿಎಂಸಿ ನೀಡಿದ ನಂತರವೂ ಸಾಕಷ್ಟು ಬಾರಿ ಹೆಚ್ಚುವರಿ ನೀರು ತಮಿಳುನಾಡಿಗೆ ಹರಿದುಹೋಗುತ್ತಿತ್ತು. ಅಷ್ಟೇ ಅಲ್ಲ, ಕೆಲವೊಮ್ಮೆ ನೂರಾರು ಟಿಎಂಸಿಯಷ್ಟು ನೀರು ಸಮುದ್ರದ ಪಾಲಾಗುತ್ತಿತ್ತು. ಮುಂದೆ ಹೆಚ್ಚುವರಿ ನೀರು ನಮಗೆ ಲಭ್ಯವಾಗುವುದಿಲ್ಲ ಎಂಬ ಕಾರಣಕ್ಕೆ ತಮಿಳುನಾಡು ಯೋಜನೆಗೆ ಅಪಸ್ವರ ಎತ್ತುತ್ತಿದೆ ಎಂದರು. ಕಾವೇರಿ ನ್ಯಾಯ ಮಂಡಳಿಯ ತೀರ್ಪಿನ ಪ್ರಕಾರ ತಮಿಳುನಾಡಿಗೆ ನಿಗದಿಯಾದ ನೀರು ಹರಿದು ಹೋದ ಮೇಲೆ ಕರ್ನಾಟಕ ತನ್ನ ಪಾಲಿನ ನೀರನ್ನು ಹೇಗಾದರೂ ಬಳಸಿಕೊಳ್ಳಬಹುದು ಎಂದು ಕಾರ್ಜೋಳ ತಿಳಿಸಿದರು. ಎಲ್ಲ ಕೋನಗಳಿಂದಲೂ ನಮ್ಮ ವಿಸ್ತೃತ ಯೋಜನೆಗೆ ಅನುಮತಿ ದೊರೆಯಲೇಬೇಕು. ದೊರೆತೇ ತೀರುತ್ತದೆ. ನಾವು ಕೆಲವೇ ತಿಂಗಳುಗಳಲ್ಲೇ ಯೋಜನೆ ಕೈಗೆತ್ತಿಕೊಳ್ಳುತ್ತೇವೆ. ಇದಕ್ಕಾಗಿ 1 ಸಾವಿರ ಕೋಟಿ ರೂ ಮೀಸಲಿಟ್ಟಿದ್ದೇವೆ ಎಂದು ಹೇಳಿದರು.

ತಾಯಿ ಚಾಮುಂಡೇಶ್ವರಿ ಸನ್ನಿಧಿಯಲ್ಲಿ ಮೊದಲ ಆಷಾಢ ಪೂಜೆ







ಒಂದನೇ ಪುಟದಿಂದ

ಭಕ್ತರಿಗಾಗಿ ಉಚಿತ ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ. ಶುಕ್ರವಾರ ಮುಂಜಾನೆ 5.30ರಿಂದ ದರ್ಶನಕ್ಕೆ ಅವಕಾಶವಿದ್ದರೂ ಮುಂಜಾನೆ 3 ಗಂಟೆಯಿಂದಲೇ ಬಸ್ ಸಂಚಾರ ಆರಂಭವಾಗಲಿದೆ. ಈ ಬಾರಿ ಹೆಚ್ಚಿನ ಸಂಖ್ಯೆಯ ಭಕ್ತರು ಆಗಮಿಸುವ ನಿರೀಕ್ಷೆ ಇರುವುದರಿಂದ ಸರತಿಯಲ್ಲಿ ಸಾಗಲು ಬ್ಯಾರಿಕೇಡ್, ಕುಡಿಯುವ ನೀರು, ಪ್ರಸಾದ ವ್ಯವಸ್ಥೆ ಸೇರಿದಂತೆ ಸಮರ್ಪಕ ನಿರ್ವಹಣೆಗೆ ಸಕಲ ವ್ಯವಸ್ಥೆ ಮಾಡಿಕೊಳ್ಳಲಾಗಿದೆ.

ದರ್ಶನಕ್ಕೆ 3 ಸಾಲು: ದೇವಿಯ ದರ್ಶನಕ್ಕೆ ಎಂದಿನಂತೆ ಮೂರು ರೀತಿಯ ಪ್ರವೇಶಾವಕಾಶ ಕಲ್ಪಿಸಲಾಗಿದೆ. 300 ರೂ. ಹಾಗೂ 50 ರೂ. ವಿಶೇಷ ದರ್ಶನ ಟಿಕೆಟ್ ಪಡೆದವರು ಹಾಗೂ ಧರ್ಮ ದರ್ಶನಕ್ಕೆ ಪ್ರತ್ಯೇಕ ಪ್ರವೇಶ ವ್ಯವಸ್ಥೆ ಮಾಡಲಾಗಿದೆ. ದೇವಿಯ ದರ್ಶನಕ್ಕೆ ಗಂಟೆಗಟ್ಟಲೆ ಸರತಿಯಲ್ಲಿ ನಿಲ್ಲಬೇಕಾದ ಪರಿಸ್ಥಿತಿ ಎದುರಾದಾಗ ಮಳೆ ಹಾಗೂ ಬಿಸಿಲಿನಿಂದ ರಕ್ಷಣೆಗೆ ವಾಟರ್ ಪ್ರೂಫ್ ಟೆಂಟ್ ಅಳವಡಿಸಲಾಗಿದೆ. ವಿಶೇಷ ದರ್ಶನದ ಟಿಕೆಟ್ ಖರೀದಿಸಲು ನಾಲ್ಕು ಕೌಂಟರ್ ವ್ಯವಸ್ಥೆ ಮಾಡಲಾಗಿದೆ.

ಸಿಂಗಾರಗೊಂಡ ಗ್ರಾಮ: ಆಷಾಢ ಮಾಸದ ಮೊದಲ ಶುಕ್ರವಾರದ ವಿಶೇಷ ಪೂಜೆಗೆ ಚಾಮುಂಡೇಶ್ವರಿ ದೇವಾಲಯದ ಜೊತೆಗೆ ಇಡೀ ಗ್ರಾಮವೇ ಸಿಂಗಾರಗೊಂಡಿದ್ದು, ತಳಿರು ತೋರಣಗಳಿಂದ ಕಂಗೊಳಿಸುತ್ತಿದೆ. ದೇವಾಲಯವನ್ನು ಬಣ್ಣ ಬಣ್ಣದ ಬಗೆ ಬಗೆಯ ಹೂಗಳಿಂದ ಅಲಂಕೃತಗೊಳಿಸಲಾಗಿದೆ. ಬೆಟ್ಟದ ಮುಖ್ಯರಸ್ತೆ, ದೇವಾಲಯದ ಸುತ್ತಮುತ್ತ, ನಂದಿ ವಿಗ್ರಹ ಬಹುತೇಕ ಕಡೆಗಳಲ್ಲಿ ವಿದ್ಯುತ್ ದೀಪಾಲಂಕಾರ ಕಣ್ಣು ಕೋರೈಸುವಂತಿದೆ. ವಿದ್ಯುತ್ ದೀಪಗಳ ಸ್ವಾಗತ ಕಮಾನು ಅಳವಡಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ.

ಮೊದಲ ಬಾರಿಗೆ ಎಲ್‌ಇಡಿ: ದೇವಿಯ ದರ್ಶನಕ್ಕೆ ಮಧ್ಯರಾತ್ರಿಯಿಂದಲೇ ಭಕ್ತರು ಕಾದು ನಿಲ್ಲುತ್ತಾರೆ. ಆ ಸಂದರ್ಭದಲ್ಲಿ ತಾಯಿ ಚಾಮುಂಡೇಶ್ವರಿಯ ಉತ್ಸವ ಮೂರ್ತಿ ಮೆರವಣಿಗೆ ಸಹಿತ ಭಕ್ತಿ ಗೀತೆಗಳ ಪ್ರಸಾರ ಮಾಡಿದರೆ ಭಕ್ತರ ದಣಿವು ನೀಗಬಹುದು ಎಂಬ ಕಾರಣಕ್ಕೆ ಮೊದಲ ಬಾರಿಗೆ ಸುಮಾರು 20 ಬೃಹತ್ ಎಲ್‌ಇಡಿ ಟಿವಿಗಳನ್ನು ಅಳವಡಿಸಲಾಗಿದೆ. ದೇವಸ್ಥಾನದ ಎದುರಿನ ರಾಗ ರಾಗಿಣಿ ಮಂಟಪದಲ್ಲಿ ಬೆಳಗ್ಗೆ 6.30ರಿಂದ ರಾತ್ರಿ 8.30ರವರೆಗೆ ಕಲಾವಿದರಿಂದ ಭಕ್ತಿ ಗೀತೆಗಳ ಗಾಯನ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಇರಲಿದೆ.

ಪ್ರಸಾದ ವ್ಯವಸ್ಥೆ: ಈ ಬಾರಿ ತಾಯಿಯ ದರ್ಶನದ ಜೊತೆಗೆ ಪ್ರಸಾದ ಸ್ವೀಕರಿಸುವುದಕ್ಕೂ ಅವಕಾಶ ಕಲ್ಪಿತವಾಗಿದೆ. ಈ ಹಿನ್ನೆಲೆಯಲ್ಲಿ ಮಹಿಷಾಸುರ ಪ್ರತಿಮೆ ಆವರಣದಲ್ಲಿ ದಾನಿಗಳಿಂದ ಬಾಳೆಲೆ ಊಟಕ್ಕೆ ವ್ಯವಸ್ಥೆ ಮಾಡಲಾಗಿದೆ. ಏಕಕಾಲದಲ್ಲಿ ಸಾವಿರ ಜನರನ್ನು ಕೂರಿಸಿ ಅವರಿಗೆ ಪ್ರಸಾದ ನೀಡಬಹುದಾಗಿದೆ. ಅಲ್ಲದೆ ಸಮೀಪದ ಬಸ್ ನಿಲ್ದಾಣದ ಶೆಲ್ಟರ್‌ನಲ್ಲೂ 10 ಕೌಂಟರ್‌ಗಳಲ್ಲಿ ಪ್ರಸಾದ ವಿನಿಯೋಗಕ್ಕೂ ವ್ಯವಸ್ಥೆಗೊಳಿಸಲಾಗಿದೆ. ಪ್ರಸಾದ ವಿತರಿಸುವ ಭಕ್ತರು ನೋಂದಣಿ ಮಾಡಿಕೊಂಡು, ನಿಗದಿತ ಸ್ಥಳದಲ್ಲಿ ಭಕ್ತರಿಗೆ ವಿತರಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ.



ಶಾಸಕ ರಾಮದಾಸ್‌ರಿಂದ ಅಂತಿಮ ಹಂತದ ಪರಿಶೀಲನೆ

ಬಿಗಿ ಭದ್ರತೆ; ಸಿಸಿ ಕ್ಯಾಮರಾ: ಚಾಮುಂಡಿ ಬೆಟ್ಟ ಪ್ರವೇಶ ಸ್ಥಳದಿಂದ ದೇವಾಲಯದೊಳಗೆ ದೇವಿಯ ದರ್ಶನ ಪಡೆಯುವ ಸ್ಥಳದವರೆಗೂ ಯಾವುದೇ ಗೊಂದಲವಾಗದಂತೆ ಪೊಲೀಸರು ಬಿಗಿ ಬಂದೋಬಸ್ತ್ ಮಾಡಿಕೊಂಡಿದ್ದಾರೆ. ಉಚಿತ ಬಸ್ ವ್ಯವಸ್ಥೆ ಇರುವ ಲಲಿತಮಹಲ್ ಹೋಟೆಲ್ ಬಳಿಯ ಪ್ರದೇಶ, ಬೆಟ್ಟದ ಮೆಟ್ಟಿಲು ಹತ್ತುವ ಸ್ಥಳದಲ್ಲೂ ಹೆಚ್ಚಿನ ಸಂಖ್ಯೆಯ ಪೊಲೀಸರನ್ನು ನಿಯೋಜಿಸಲಾಗಿದೆ. ಪೊಲೀಸ್ ಅಧಿಕಾರಿಗಳು ಈಗಾಗಲೇ ಎಲ್ಲಾ ವ್ಯವಸ್ಥೆಯನ್ನೂ ಪರಿಶೀಲನೆ ನಡೆಸಿದ್ದಾರೆ. ಪೊಲೀಸ್ ಭದ್ರತೆ ಜೊತೆಗೆ ದೇವಾಲಯದ ಒಳ ಹಾಗೂ ಹೊರ ಆವರಣ, ಜನ ಸರತಿಯಲ್ಲಿ ಸಾಗುವ ಸ್ಥಳ, ಮೆಟ್ಟಿಲು ಮಾರ್ಗ ಸೇರಿದಂತೆ ಹಲವು ಕಡೆ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಮೆಟ್ಟಿಲು ಮಾರ್ಗದಲ್ಲೂ ತಾತ್ಕಾಲಿಕ ವಿದ್ಯುತ್ ದೀಪಗಳ ವ್ಯವಸ್ಥೆ ಮಾಡಲಾಗಿದ್ದು, ಸಾರ್ವಜನಿಕರ ಅನುಕೂಲಕ್ಕಾಗಿ ಹೆಚ್ಚು ಸಂಖ್ಯೆಯ ಮೊಬೈಲ್ ಶೌಚಗೃಹದ ವ್ಯವಸ್ಥೆ ಮಾಡಲಾಗಿದೆ.

ಶಾಸಕರಿಂದ ಪರಿಶೀಲನೆ: ಚಾಮುಂಡಿ ಬೆಟ್ಟದಲ್ಲಿ ಆಷಾಢ ಮಾಸದ ಸಿದ್ಧತೆಯನ್ನು ಗುರುವಾರ ಪರಿಶೀಲಿಸಿದ ಶಾಸಕ ಎಸ್.ಎ. ರಾಮದಾಸ್ ಮಾತನಾಡಿ, ದೇವಿ ದರ್ಶನಕ್ಕೆ 3 ವಿಧವಾದ ಸಾಲು, ದರ್ಶನ ಪಡೆದವರಿಗೆ ಕುಂಕುಮ ಹಾಗೂ ಪ್ರಸಾದ ನೀಡಲು ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಒಂದೇ ಸಮಯದಲ್ಲಿ ಸಾವಿರ ಜನಕ್ಕೆ ಬಾಳೆಲೆಯಲ್ಲಿ ಊಟ ಪ್ರಸಾದ ನೀಡುವಂತಹ ಕಾರ್ಯಕ್ಕೆ ವ್ಯವಸ್ಥೆ ಮಾಡಲಾಗಿದೆ. ಮತ್ತೊಂದೆಡೆ ದೊನ್ನೆಯಲ್ಲೂ ಪ್ರಸಾದ ವಿತರಿಸಲಾಗುತ್ತದೆ. ಕೂಡಲೇ ತ್ಯಾಜ್ಯ ವಿಲೇವಾರಿಗೆ ಪಾಲಿಕೆ ಅಧಿಕಾರಿಗಳು ಕ್ರಮ ಕೈಗೊಂಡಿದ್ದಾರೆ. ತಿ.ನರಸೀಪುರ ರಸ್ತೆ ಹಾಗೂ ಎಂ.ಜಿ.ರಸ್ತೆಯ ಜಂಕ್ಷನ್‌ನಲ್ಲಿರುವ ಮೈದಾನದಲ್ಲಿ ಭಕ್ತರು ತಮ್ಮ ವಾಹನ ನಿಲ್ಲಿಸಿ, ಬಸ್‌ನಲ್ಲಿ ಬೆಟ್ಟಕ್ಕೆ ತೆರಳಿ ತಾಯಿಯ ದರ್ಶನ ಪಡೆಯಬಹುದು. ಇದಕ್ಕಾಗಿ ಎಲ್ಲಾ ರೀತಿಯ ವ್ಯವಸ್ಥೆಯನ್ನೂ ಕೈಗೊಳ್ಳಲಾಗಿದೆ ಎಂದರು.

ಶ್ರೀ ಜಯತೀರ್ಥರ ಮೂಲ ವೃಂದಾವನದ ಬಗ್ಗೆ ಅಪಪ್ರಚಾರ ಖಂಡಿಸಿ ಮೈಸೂರಲ್ಲಿ ಮೌನ ಮೆರವಣಿಗೆ



ಮೈಸೂರು,ಜೂ.30(ಎಸ್‌ಬಿಡಿ)–ನವ ವೃಂದಾವನದಲ್ಲಿನ ಶ್ರೀ ರಘುವರ್ಯರ ವೃಂದಾವನವನ್ನೇ ಶ್ರೀ ಜಯತೀರ್ಥರ ಮೂಲ ವೃಂದಾವನ ಎಂಬ ಅಪಪ್ರಚಾರದೊಂದಿಗೆ ಅಲ್ಲಿ ಆಚರಿಸಲು ಉದ್ದೇಶಿಸಿರುವ ಆರಾಧನೆಯನ್ನು ತಡೆದು ಸಮಾಜದ ಸ್ವಾಸ್ಥ್ಯ ಕಾಪಾಡಬೇಕೆಂದು ಆಗ್ರಹಿಸಿ ಮೈಸೂರಲ್ಲಿ ಗುರುವಾರ ಮೌನ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.

ಜಿಲ್ಲಾ ಬ್ರಾಹ್ಮಣ ಸಂಘ, ಉತ್ತರಾದಿ ಮಠ ಹಾಗೂ ವ್ಯಾಸರಾಜ ಮಠದ ಸಹಯೋಗದೊಂದಿಗೆ ಬ್ರಾಹ್ಮಣ ಸಮುದಾಯದವರು ನಗರದ ಕೋಟೆ ಆಂಜನೇಯ ಸ್ವಾಮಿ ದೇವಾಲಯದಿಂದ ಡಿಸಿ ಕಚೇರಿವರೆಗೆ ಶಾಂತ ರೀತಿಯ ಮೆರವಣಿಗೆಯಲ್ಲಿ ತೆರಳಿ, ಜಿಲ್ಲಾಧಿಕಾರಿ ಮೂಲಕ ಮುಖ್ಯಮಂತ್ರಿಗಳಿಗೆ ತಮ್ಮ ಮನವಿ ಸಲ್ಲಿಸಿದರು.

ಶ್ರೀ ಮಧ್ವಾಚಾರ್ಯರ ಪೀಠ ಪರಂಪರೆಯಲ್ಲಿ ಐದನೆಯವರಾದ ತತ್ವಜ್ಞಾನಿ ಶ್ರೀ ಜಯತೀರ್ಥರು ಮಾಧ್ವಸಮಾಜದ ಸಕಲರಿಗೂ ಮಾನ್ಯರಾಗಿದ್ದಾರೆ. ದೇಶದುದ್ದಕ್ಕೂ ಸಂಚಾರ ಮಾಡಿ ಧರ್ಮ–ತತ್ವಜ್ಞಾನ ಪ್ರಸಾರ ಮಾಡಿ ಕಲಬುರ್ಗಿ ಜಿಲ್ಲೆ ಸೇಡಂ ತಾಲೂಕು ಮಳಖೇಡ ಗ್ರಾಮ ಕಾಗಿನೀ ನದಿದಡದಲ್ಲಿ ಸಮಾಧಿಮಗ್ನರಾಗಿ ಇಹಲೋಕ ತ್ಯಜಿಸಿ ವೃಂದಾವನ ಪ್ರವೇಶಿಸಿದರು. ಅಂದಿನಿಂದಲೂ ಯತಿಗಳು, ಹರಿದಾಸರು ಸಂತರಾಧಿಯಾಗಿ ಭಕ್ತರೆಲ್ಲಾ ವೃಂದಾವನ ದರ್ಶನ ಮಾಡುತ್ತಿದ್ದಾರೆ. ಪ್ರತಿ ವರ್ಷ ಆರಾಧನೆ ವೇಳೆ ಭಕ್ತ ಸಮೂಹವೇ ನೆರೆಯುತ್ತದೆ. ಆದರೆ ಇತ್ತೀಚೆಗೆ ಶ್ರೀಜಯತೀರ್ಥರ ಮೂಲ ವೃಂದಾವನದ ಅಪಪ್ರಚಾರ ಮಾಡಲಾಗುತ್ತಿದೆ. ಕೊಪ್ಪಳ ಜಿಲ್ಲೆ ಗಂಗಾವತಿ ತಾಲೂಕು ಆನೆಗುಂಡಿ ಗ್ರಾಮದ ನಡುಗಡ್ಡೆಯ ನವ ವೃಂದಾವದಲ್ಲೇ ಶ್ರೀಜಯತೀರ್ಥರ ವೃಂದಾವನವಿದೆ. ಅಲ್ಲಿರುವ ಉತ್ತರಾದಿಮಠದ ಶ್ರೀ ರಘುವರ್ಯರ ವೃಂದಾವನವೇ ಶ್ರೀಜಯತೀರ್ಥರ ವೃಂದಾವನ ಎಂದು ಶ್ರೀರಾಯರಮಠದವರು ತಪ್ಪಾಗಿ ಪ್ರಚಾರ ಮಾಡುವ ಮೂಲಕ ಸಮಾಜದಲ್ಲಿ ವಿವಾದ ಸೃಷ್ಟಿ ಮಾಡಿದ್ದಾರೆ. ಅಲ್ಲದೆ ಶ್ರೀರಾಯರಮಠದ ಶ್ರೀ ಸುಬುಧೇಂದ್ರತೀರ್ಥರ ನೇತೃತ್ವದಲ್ಲಿ ಜು.17ರಿಂದ 3 ದಿನ ಶ್ರೀಜಯತೀರ್ಥರ ಆರಾಧನೆಯನ್ನು ವೈಭವದಿಂದ ಆಚರಿಸಲು ಕರೆ ನೀಡಿದ್ದಾರೆ. ಇದರಿಂದ ಶ್ರೀಜಯತೀರ್ಥರ ಭಕ್ತರಿಗೆ ಅತೀವ ನೋವುಂಟಾಗಿದೆ.

ಶ್ರೀಜಯತೀರ್ಥರ ಮೂಲ ವೃಂದಾವನದ ವಿಚಾರವಾಗಿ ಇತಿಹಾಸ ತಿರುಚುವ ಹುನ್ನಾರವನ್ನು ತಡೆಯಬೇಕು. ಶ್ರೀರಾಯರ ಮಠದವರು ನವವೃಂದಾವನದಲ್ಲಿ ನಡೆಸಲು ಉದ್ದೇಶಿಸಿರುವ ಶ್ರೀಜಯತೀರ್ಥರ ಆರಾಧನೆಯನ್ನು ತಡೆಯಬೇಕು. ಇನ್ನೆಂದೂ ಈ ರೀತಿಯ ಪ್ರಯತ್ನಕ್ಕೆ ಮುಂದಾಗದಂತೆ ತಿಳುವಳಿಕೆ ನೀಡಬೇಕು. ಜೊತೆಗೆ ಶ್ರೀ ಉತ್ತರಾದಿಮಠದವರು ಶ್ರೀ ರಘುವರ್ಯತೀರ್ಥರ ಪೂಜೆ ಹಾಗೂ ಆರಾಧನೆ ನಡೆಸಲು ಯಾವುದೇ ಅಡ್ಡಿಯಾಗದಂತೆಯೂ ಕ್ರಮ ವಹಿಸಬೇಕು. ಈ ಮೂಲಕ ಸಮಾಜದ ಸ್ವಾಸ್ಥ್ಯ ಕಾಪಾಡಬೇಕೆಂದು ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದಾರೆ. ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಪಂಡಿತ್ ರಂಗಾಚಾರ್ಯ, ಅನಿರುದ್ಧಾಚಾರ್ ಜಿ.ಪಾಂಡುರಂಗಿ, ಹರೀಶಾಚಾರ್, ವಾಸುದೇವಮೂರ್ತಿ, ಶ್ರೀನಾಥ್, ವಿಜಯ ವಿಠ್ಠಲ ರಾವ್, ಮಧು, ನಿಶಾಂತ್ ಮತ್ತಿತರರು ಮೌನ ಪ್ರತಿಭಟನಾ ಮೆರವಣಿಗೆಯಲ್ಲಿ ಭಾಗಿಯಾಗಿದ್ದರು.

ಮಂಡ್ಯದಲ್ಲಿ ರೌಡಿಶೀಟರ್‌ಗಳ ಅಟ್ಟಹಾಸ ಹಿನ್ನೆಲೆ

ಅಶೋಕ್ ಪೈ ಸೇರಿದಂತೆ ರೌಡಿಗಳಿಗೆ ಪೊಲೀಸರ ಎಚ್ಚರಿಕೆ ಸಂದೇಶ

ಮಂಡ್ಯ, ಜೂ.30(ಮೋಹನ್‌ರಾಜ್)– ಜಿಲ್ಲೆಯಲ್ಲಿ ದಿನೇ ದಿನೇ ಅಪರಾಧ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಬುಧವಾರ ರಾತ್ರಿ ಫೀಲ್ಡ್‌ಗಿಳಿದ ಮಂಡ್ಯ ಖಾಕಿ ಪಡೆ ರೌಡಿಶೀಟರ್‌ಗಳು ಹಾಗೂ ಪುಡಿ ರೌಡಿಗಳ ಮನೆಗಳಿಗೆ ತೆರಳಿ ಎಚ್ಚರಿಕೆ ನೀಡಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್, ಎಎಸ್ಪಿ ವೇಣುಗೋಪಾಲ್ ನೇತೃತ್ವದಲ್ಲಿ ಡಿವೈಎಸ್ಪಿ, ಎಎಸ್ಪಿ, ಸರ್ಕಲ್ ಇನ್ಸ್‌ಪೆಕ್ಟರ್ ಸೇರಿದಂತೆ ಆಯಾ ಠಾಣೆ ವ್ಯಾಪ್ತಿಯ ಪೊಲೀಸ್ ಅಧಿಕಾರಿಗಳ ನೇತೃತ್ವದಲ್ಲಿ ನಗರದ ಪುಡಿ ರೌಡಿಗಳಿಗೆ ಬಿಸಿ ಮುಟ್ಟಿಸಿದರು.

ಜೂನ್ ತಿಂಗಳೊಂದರಲ್ಲೇ ಜಿಲ್ಲೆಯಲ್ಲಿ ಮೂರ್ನಾಲ್ಕು ಕೊಲೆ, ಕೊಲೆ ಯತ್ನ ಸೇರಿದಂತೆ ಮಾರಣಾಂತಿಕ ಹಲ್ಲೆಯಂತಹ ಅಪರಾಧ ಪ್ರಕರಣಗಳು ನಡೆದಿದ್ದು, ಎಲ್ಲೆಂದರಲ್ಲಿ ಕ್ರೌರ್ಯ ವಿಜೃಂಭಿಸಲಾರಂಭಿಸಿದೆ. ಇದರಿಂದ ಅಲರ್ಟ್ ಆಗಿರುವ ಜಿಲ್ಲಾ ಪೊಲೀಸರು ಮಂಡ್ಯ ಕುಖ್ಯಾತ ರೌಡಿಗಳ ಮನೆಗಳಿಗೆ ಭೇಟಿ ನೀಡಿ, ರೌಡಿ ಎಲಿಮೆಂಟ್ಸ್ ಆಕ್ಟಿವಿಟೀಸ್ ನಿಲ್ಲಿಸಿ ಸಮಾಜದಲ್ಲಿ ಗೌರವದಿಂದ ಬದುಕುವಂತೆ ಎಚ್ಚರಿಸಿದರು.

ಪೈ ಮನೆಗೆ ಪೊಲೀಸರ ಭೇಟಿ: ಮೊದಲು ಮಂಡ್ಯ ರೌಡಿಸಂ ಇತಿಹಾಸದಲ್ಲೇ ಕುಖ್ಯಾತಿ ಪಡೆದಿರುವ ಅಶೋಕ್ ಪೈ ಮನೆಗೆ ಭೇಟಿ ಕೊಟ್ಟ ಪೊಲೀಸರು ಆತನ ಮನೆ ನೋಡಿ ಒಂದು ಕ್ಷಣ ಹೌಹಾರಿದರು. ಅಶೋಕ್ ಪೈ ಮನೆಗೆ ಬಂದ ಎಸ್ಪಿ ಯತೀಶ್ ಆತನ ಮನೆ ನೋಡಿ ಏನಪ್ಪ ಇದು ಮ್ಯಾನ್ಷನ್. ಏನ್ ಕೆಲಸ ಮಾಡ್ತಿಯಾ? ಎಷ್ಟು ಸಂಪಾದನೆ ಮಾಡ್ತಿಯಾ? ಅಷ್ಟು ಸಂಪಾದನೆಯಲ್ಲಿ ಇಷ್ಟೊಂದು ದೊಡ್ಡ ಮನೆ ಹೇಗೆ ಸಾಧ್ಯ. ನಿನಗೆ ಅಶೋಕ್ ಪೈ ಅಂತ ಯಾಕೆ ಕರೀತಾರೆ. ನಿನ್ನ ಮೇಲೆ ಎಷ್ಟು ಕೇಸ್‌ಗಳಿವೆ ಗೊತ್ತಾ ಎಂದೆಲ್ಲಾ ಪ್ರಶ್ನಿಸಿದರು.

ಇದಕ್ಕೆ ಉತ್ತರಿಸಿದ ಅಶೋಕ್ ಪೈ, ಸರ್ ನನ್ನ ಮೇಲೆ 18 ಕೇಸ್‌ಗಳಿವೆ. ಅವುಗಳಲ್ಲಿ ಕೆಲವು ಪ್ರಕರಣಗಳ ಮೇಲೆ ನಾನು ಜೈಲಿಗೂ ಹೋಗಿದ್ದೆ. ನನಗೆ ಜೀವಾವಧಿ ಶಿಕ್ಷೆಯಾಗಿತ್ತು. ಶಿಕ್ಷೆ ಖುಲಾಸೆಗೊಳಿಸಿಕೊಂಡು ಸದ್ಯ ಆರೇಳು ತಿಂಗಳಿಂದ ಮನೆಯಲ್ಲೇ ಇದ್ದೀನಿ ಎಂದು ಉತ್ತರಿಸಿದರು. ಮುಂದಿನ ದಿನಗಳಲ್ಲಿ ಯಾವುದೇ ಅಪರಾಧ ಚಟುವಟಿಕೆಯಲ್ಲಿ ಭಾಗಿಯಾಗದೇ ಕುಟುಂಬದ ಜೊತೆ ಜೀವನ ನಡೆಸುವಂತೆ ಎಸ್ಪಿ ಸೂಚಿಸಿದರು.

ಮೊನ್ನೆಯಷ್ಟೇ ಕೆ.ಆರ್.ಪೇಟೆಯಲ್ಲಿ ರೌಡಿಯೊಬ್ಬನನ್ನು ಕೊಚ್ಚಿ ಕೊಲೆ ಮಾಡಲಾಗಿತ್ತು. ಇದಕ್ಕೂ ಮುನ್ನಾ ಒಂದೆರಡು ದಿನಗಳ ಹಿಂದೆಯಷ್ಟೆ ಕಿಕ್ಕೇರಿಯಲ್ಲಿ ಮಹಿಳೆಯನ್ನು ಹಾಡಹಗಲೆ ಹತ್ಯೆ ಮಾಡಲಾಗಿತ್ತು. ಪ್ರೀತಿಗೆ ನಿರಾಕರಿಸಿದಳು ಎಂಬ ಕಾರಣಕ್ಕೆ ಪ್ಯಾರಾ ಮೆಡಿಕಲ್ ವಿದ್ಯಾರ್ಥಿನಿ ಮೇಲೆ ಆಕೆಯ ಪ್ರೇಮಿಯೇ ಮಾರಣಾಂತಿಕ ಹಲ್ಲೆ ನಡೆಸಿದ್ದ. ಈ ತಿಂಗಳ ಆರಂಭದಲ್ಲಿ ಪಾಂಡವಪುರ ಮತ್ತು ಅರಕೆರೆ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಪತ್ತೆಯಾದ ರುಂಡವಿಲ್ಲದ ಮಹಿಳೆಯರಿಲ್ಲದ ಮೃತದೇಹದ ಪತ್ತೆ ಪ್ರಕರಣ ಇನ್ನೂ ಪತ್ತೆಯಾಗಿಲ್ಲ. ಆ 2 ಕೊಲೆಗಳ ಬಗೆಗೆ ಮಾಹಿತಿ ನೀಡಿದರೆ ಲಕ್ಷ ರೂ. ಬಹುಮಾನ ನೀಡಲಾಗುವುದು ಎಂದು ಪೊಲೀಸರೆ ಘೋಷಣೆ ಮಾಡಿದ್ದರೆ, ಮೊನ್ನೆಯಷ್ಟೇ ಯಲಿಯೂರು ಬಳಿ ಹಾಡಹಗಲೇ ವೃದ್ಧನ ಮೇಲೆ ದುಷ್ಕರ್ಮಿಗಳ ತಂಡ ದಾಳಿ ನಡೆಸಿತ್ತು.

ಜನಪ್ರತಿನಿಧಿಗಳಲ್ಲೂ ಆತಂಕ: ಒಂದೇ ತಿಂಗಳಲ್ಲಿ ಮೇಲಿಂದ ಮೇಲೆ ಇಷ್ಟೊಂದು ಅಪರಾಧ ಪ್ರಕರಣ ನಡೆದಿರುವುದು ಜನರಲ್ಲಷ್ಟೇ ಆತಂಕ ಉಂಟು ಮಾಡಿಲ್ಲ. ಜನಪ್ರತಿನಿಧಿಗಳಲ್ಲೂ ಆತಂಕ ಉಂಟು ಮಾಡಿದೆ. ಈ ಬಗ್ಗೆ ಮಾತನಾಡಿದ ಶಾಸಕ ಸಿ.ಎಸ್.ಪುಟ್ಟರಾಜು ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಜನರ ಸಮಸ್ಯೆಗೆ ಸ್ಪಂದಿಸುತ್ತಿಲ್ಲ. ಎಲ್ಲೆಂದರಲ್ಲಿ ಪುಡಿ ರೌಡಿಗಳ ಅಟ್ಟಹಾಸ ಎಲ್ಲೇ ಮೀರಿದೆ ಎಂದು ಪೊಲೀಸರ ಕಾರ್ಯವೈಖರಿ ಬಗ್ಗೆ ಅಸಮಾಧಾನ ಹೊರ ಹಾಕಿದ್ದಾರೆ. ಒಟ್ಟಾರೆ ಜಿಲ್ಲೆಯಲ್ಲಿ ಒಂದೇ ತಿಂಗಳಲ್ಲಿ ಹಲವು ಅಪರಾಧ ಪ್ರಕರಣ ನಡೆದಿರುವುದು ಜಿಲ್ಲೆಯಲ್ಲಿ ರೌಡಿಸಂ ಪ್ರಕರಣಗಳು ಹೆಚ್ಚಾಗ್ತಿದ್ಯಾ ಎಂಬ ಅನುಮಾನದ ಬೆನ್ನಲ್ಲೇ ಅಲರ್ಟ್ ಆಗಿರುವ ಪೊಲೀಸರು ರೌಡಿಗಳಿಗೆ ಖಡಕ್ ವಾರ್ನಿಂಗ್ ನೀಡಿದ್ದಾರೆ.



ನಗರದಾದ್ಯಂತ ಪೊಲೀಸರ ರೌಂಡ್ಸ್

ಮಂಡ್ಯದ ಗಾಂಧಿನಗರ, ಕಲ್ಲಹಳ್ಳಿ, ಹೌಸಿಂಗ್ ಬೋರ್ಡ್, ಹೊಸಹಳ್ಳಿ ಬಡಾವಣೆ, ಗುತ್ತಲು, ಆನೆಕರೆ ಬೀದಿ, ಹಾಲಹಳ್ಳಿ, ಶಂಕರಮಠದಲ್ಲಿ ರೌಡಿಸಂ ಚಟುವಟಿಕೆಯಲ್ಲಿ ಭಾಗಿಯಾಗಿರುವ, ರೌಡಿಶೀಟರ್ ತೆರೆದಿರುವ ಹಾಗೂ ಪುಡಿರೌಡಿಗಳ ಮನೆಗಳಿಗೆ ಪೊಲೀಸರು ಭೇಟಿ ನೀಡಿ ಖಡಕ್ ವಾರ್ನಿಂಗ್ ನೀಡಿದರು.

ಇನ್ನು ಕೆಲವು ಬಡಾವಣೆಗಳಲ್ಲಿ ರೌಡಿ ಚಟುವಟಿಕೆಯಲ್ಲಿ ಭಾಗಿಯಾಗುತ್ತಿರುವವರ ಬಗ್ಗೆ ಮಾಹಿತಿ ಪಡೆದು ಅವರ ಮನೆಗಳಿಗೆ ತೆರಳಿ ವಾರ್ನಿಂಗ್ ನೀಡಿ, ಪುಡಿರೌಡಿಗಳ ಸಂಬಳ ಎಷ್ಟು? ಆ ಸಂಬಳದಲ್ಲಿ ಹೇಗೆ ಜೀವನ ನಡೆಸುತ್ತಿದ್ದೀರಿ ಎಂಬ ಬಗ್ಗೆಯೂ ಮಾಹಿತಿ ಪಡೆದರು. ವರ್ತಕರ ಬಳಿ ವಸೂಲಿಗೆ ತೆರಳಿದರೆ ಕಠಿಣ ಕಾನೂನು ಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡಿದ ಪೊಲೀಸರು, ರೌಡಿ ರೀತಿ ಜುಟ್ಟು ಬಿಟ್ಟುಕೊಂಡು, ಷರ್ಟ್ ಗುಂಡಿ ಹಾಕದ ಅದೆಷ್ಟೋ ಪುಡಿರೌಡಿಗಳಿಗೆ ಬೈದು ಬುದ್ಧಿ ಹೇಳಿದರು.

ಜಲಶಕ್ತಿ ಸಚಿವರಿಂದ ಡ್ರಿಪ್ ಕೆಲಸಗಳ ಪರಿಶೀಲನೆ



ಮಂಡ್ಯ, ಜೂ.30– ಕೇಂದ್ರದ ರಾಜ್ಯ ಜಲಶಕ್ತಿ ಸಚಿವ ಬಿಸ್ವೇಶ್ವರ್ ತುದು ಹಾಗೂ ತಂಡ ಗುರುವಾರ ಜಿಲ್ಲೆಯ ಕೆಆರ್‌ಎಸ್ ಜಲಾಶಯಕ್ಕೆ ಭೇಟಿ ನೀಡಿ ಡ್ರಿಪ್ 1, ಡ್ರಿಪ್ 2 ಕೆಲಸಗಳ ಕುರಿತು ಪರಿಶೀಲನೆ ನಡೆಸಿದರು.

ಕೆಆರ್‌ಎಸ್ ಜಲಾಶಯಕ್ಕೆ ಆಗಮಿಸಿದ ಕೇಂದ್ರ ಸಚಿವರನ್ನೊಳಗೊಂಡ ತಂಡವನ್ನು ಜಿಲ್ಲಾಧಿಕಾರಿ ಎಸ್.ಅಶ್ವತಿ, ಜಿಪಂ ಉಪ ಕಾರ್ಯದರ್ಶಿ ಸರಸ್ವತಿ ಹಾಗೂ ಉಪವಿಭಾಗಾಧಿಕಾರಿ ಶಿವಾನಂದ ಮೂರ್ತಿ ಸ್ವಾಗತಿಸಿದರು.

ಇಂದಿನ ದಿನಗಳಲ್ಲಿ ಅಣೆಕಟ್ಟು ನಿರ್ಮಾಣ ಮಾಡುವುದು ಕಷ್ಟಕರ ಕೆಲಸ. ಈ ಹಿನ್ನೆಲೆಯಲ್ಲಿ ಇರುವ ಅಣೆಕಟ್ಟುಗಳಲ್ಲಿ ಪುನಶ್ಚೇತನ ಕೆಲಸಗಳನ್ನು ನಡೆಸಿ ಹೆಚ್ಚಿನ ವರ್ಷ ಸಂರಕ್ಷಿಸಬೇಕಿದೆ. ಕೆಆರ್‌ಎಸ್ ಅಣೆಕಟ್ಟು 90 ವರ್ಷ ಹಳೆಯದಾಗಿದ್ದು, ಅಣೆಕಟ್ಟನ್ನು ಉತ್ತಮ ರೀತಿ ನಿರ್ವಹಣೆ ಮಾಡಿದರೆ ಇನ್ನೂ 100 ವರ್ಷ ಉಪಯುಕ್ತ ಸ್ಥಿತಿಯಲ್ಲಿರುತ್ತದೆ. ಈ ಹಿನ್ನೆಲೆಯಲ್ಲಿ 2015ರಲ್ಲಿ ಡ್ರಿಪ್ (Dam rehabilitation and improvement project) ಯೋಜನೆಯಡಿ ತರಲಾಗಿದೆ. ವರ್ಲ್ಡ್ ಬ್ಯಾಂಕ್ ಹಾಗೂ ರಾಜ್ಯ ಸರ್ಕಾರ ಡ್ರಿಪ್ ಯೋಜನೆಯಡಿ 111 ಕೋಟಿ ರೂ ವೆಚ್ಚ ಮಾಡುತ್ತಿದೆ. ಇದರಲ್ಲಿ ಮುಖ್ಯವಾಗಿ ಅಣೆಕಟ್ಟಿನ ಗೇಟ್‌ನ ಪುನಶ್ಚೇತನ ಕೆಲಸಗಳನ್ನು ಮಾಡಲಾಗುತ್ತಿದೆ ಎಂದು ಕೇಂದ್ರದ ಸಿಡಬ್ಲ್ಯೂಸಿ ಅಧಿಕಾರಿ ಅವಸ್ತಿ ಹಾಗೂ ಗುಲಷನ್ ರಾಜ್ ವಿವರಿಸಿದರು.

ಕಾವೇರಿ ನೀರಾವರಿ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕ ಶಂಕರೇಗೌಡ ಅವರು ತಂಡಕ್ಕೆ ಕೆಆರ್‌ಎಸ್ ಅಣೆಕಟ್ಟೆ ವಿಸ್ತೀರ್ಣ, ಅಣೆಕಟ್ಟೆಯಿಂದ ಕೃಷಿಗೆ, ಕುಡಿಯುವ ನೀರು ನೀಡುವ ಬಗ್ಗೆ ಮಾಹಿತಿ ನೀಡಿದರು. ತಂಡದಲ್ಲಿ ಸಚಿವರೊಂದಿಗೆ ಸಂಸದರಾದ ಡಾ.ಕೆ.ಜಯ್‌ಕುಮಾರ್, ಕಗೇನ್ ಮುರ್ಮಾ, ರಮೇಶ್ ಬಾಯಿ, ಲವೀಜ್ ಬಾಯಿ ದಡೂಕ್, ನಮ ನಗೇಶ್ವರ್ ರಾವ್, ಮಖೇಶ್ ರಾಜ್‌ಪುಟ್, ಡಾ.ಸಾಕ್ಷಿಜೀ ಸ್ವಾಮಿ ಮಹಾರಾಜ್, ಸತ್ಯಪಾಲ್ ಸಿಂಗ್, ಸುರೇಶ್ ಕೋಡಿ ಕುನೀಲ್, ಸಕಲ್‌ದಿಲ್ ರಾಜ್ ಉಪಸ್ಥಿತರಿದ್ದರು.

ಕೋರಮಂಡಲ್ ಸಕ್ಕರೆ ಕಾರ್ಖಾನೆ: ಕಬ್ಬು ಅರೆಯುವಿಕೆಗೆ ಚಾಲನೆ

ಕಿಕ್ಕೇರಿ, ಜೂ.30– ಲಾಭ, ನಷ್ಟಕ್ಕಿಂತ ರೈತರ ಹಿತ ಮುಖ್ಯ. ಹೀಗಾಗಿ ನಷ್ಟದಲ್ಲಿದ್ದರೂ ಕಾರ್ಖಾನೆ ನಡೆಸಲಾಗುತ್ತಿದೆ ಎಂದು ಕೋರಮಂಡಲ್ ಸಕ್ಕರೆ ಕಾರ್ಖಾನೆ ಹಿರಿಯ ವ್ಯವಸ್ಥಾಪಕ ವಿ.ಜೆ.ರವಿ ತಿಳಿಸಿದರು.

ಮಾಕವಳ್ಳಿಯ ಕೋರಮಂಡಲ್ ಸಕ್ಕರೆ ಕಾರ್ಖಾನೆಯಲ್ಲಿ ಗುರುವಾರ ಪ್ರಸಕ್ತ ಸಾಲಿನ ಕಬ್ಬು ನುರಿಯುವಿಕೆಗೆ ಚಾಲನೆ ನೀಡಿ ಮಾತನಾಡಿದ ಅವರು, ಕಬ್ಬು ಕಟಾವು ಕಾರ್ಮಿಕರಿಗೆ ಮುಂಗಡ ಹಣ ನೀಡಿ, ಮೂಲ ಸೌಲಭ್ಯ ಕಲ್ಪಿಸಿ ಬಳ್ಳಾರಿ, ಹೊಸಪೇಟೆಯಿಂದ ಕರೆ ತರುವುದು ಸವಾಲಿನ ಕೆಲಸ. ಈ ಪ್ರದೇಶದಲ್ಲಿ ಕಾರ್ಮಿಕರಿಗೆ ಬೇಡಿಕೆ ಹೆಚ್ಚಿದ್ದು, ಮುಂಗಡ ಹಣದ ಖಾತ್ರಿ ಭಯ ಕೂಡ ಇದೆ. ಸುಮಾರು 60 ಕೋಟಿ ರೂ. ಕಬ್ಬು ಕಟಾವಿನ ದಂಧೆ ತಾಲೂಕಿನಲ್ಲಿದೆ. ಪ್ರತಿ ಹಂಗಾಮಿನಲ್ಲಿ ತಲಾ 3 ಲಕ್ಷ ರೂ. ಸಂಪಾದಿಸಿಕೊಂಡು ಕಾರ್ಮಿಕರು ಊರಿಗೆ ವಾಪಸ್ಸಾಗುತ್ತಾರೆ. ಈ ಕಟಾವು ದಂಧೆ ನಿಯಂತ್ರಣಕ್ಕೆ ತಾಲೂಕಿನ ರೈತರು ಕಬ್ಬು ಕಟಾವು, ಕಡಿದ ಕಬ್ಬನ್ನು ವಾಹನಕ್ಕೆ ಸರಬರಾಜು ಮಾಡಲು ಮುಂದಾಗಿ. ರೈತರಿಗೆ ಮತ್ತಷ್ಟು ಹಣ ಸಿಗಲಿದೆ ಎಂದು ಮನವಿ ಮಾಡಿದರು.

ಕಳೆದ ಸಾಲಿನಲ್ಲಿ ಕಾರ್ಖಾನೆ 6.6 ಲಕ್ಷ ಟನ್ ಕಬ್ಬು ನುರಿದು ಪ್ರತಿ ಟನ್‌ಗೆ 2770 ರೂ. ರೈತರಿಗೆ ಪಾವತಿಸಿದೆ. ಪ್ರಸಕ್ತ ಸಾಲಿನಲ್ಲಿ ಪ್ರತಿ ಟನ್‌ಗೆ 2750 ರೂ. ಸಕಾಲದಲ್ಲಿ ಜೊತೆಗೆ ಕೇಂದ್ರ ಸರ್ಕಾರ ಸೂಚಿಸುವ ಎಫ್‌ಆರ್‌ಪಿ ದರ ನೀಡಲು ಬದ್ಧವಿದೆ. ತಾಲೂಕಿನಲ್ಲಿ 17 ಸಾವಿರ ಎಕರೆಯಲ್ಲಿ ಕಬ್ಬು ಬೆಳೆ ಇದ್ದು, ಕಾರ್ಖಾನೆಗೆ ನಿತ್ಯ 4 ಸಾವಿರ ಟನ್ ಕಬ್ಬು ಬೇಕಿದೆ. ಕಬ್ಬು ಕೊರತೆ ಕಾರಣ ಹೊರ ತಾಲೂಕು ಆಶ್ರಯಿಸಬೇಕಿದ್ದು, ರೈತರು ಹೆಚ್ಚು ಸುಧಾರಿತ ಕಬ್ಬಿನ ತಳಿ ಬೆಳೆಯಲು ವಿನಂತಿಸಿದರು.

ಕಬ್ಬು ವಿಭಾಗದ ಉಪ ಪ್ರಧಾನ ವ್ಯವಸ್ಥಾಪಕ ಕೆ.ಬಾಬುರಾಜ್ ಮಾತನಾಡಿ, 35 ಕಬ್ಬು ಕಟಾವು ತಂಡ ಬಂದಿದ್ದು, ಮತ್ತಷ್ಟು ತಂಡ ಬರಲಿದೆ. ಕಬ್ಬು ಕಟಾವು, ಕಂತೆ ಕಟ್ಟುವುದು, ಕಬ್ಬು ತುಂಬಲು ಎಲ್ಲಕ್ಕೂ ಪ್ರತ್ಯೇಕವಾಗಿ ಹಣ ನಿಗದಿಪಡಿಸಿದೆ. ರೈತರು ಕಟಾವುಗಾರರಿಗೆ ಹೆಚ್ಚಿನ ಹಣದ ಆಮಿಷ ತೋರದಿರಿ. ಮಣ್ಣಿನ ಫಲವತ್ತತೆಗಾಗಿ ರಿಯಾಯಿತಿ ದರದಲ್ಲಿ ಲಘು ಪೋಷಕಾಂಶ ಉತ್ತಮ ತಳಿ ಬಿತ್ತನೆ ಬೀಜ, ಬಡ್ಡಿರಹಿತ ಯಂತ್ರೋಪಕರಣ ಮತ್ತಿತರ ಸೌಲಭ್ಯ ನೀಡುತ್ತಿದ್ದು ಸದ್ಬಳಕೆ ಮಾಡಿಕೊಳ್ಳಿ ಎಂದರು.



ಕಡುಗಲು, ಕಟಾವು ಸಮಸ್ಯೆ, ರೈತರ ಭೂಮಿ ಮಣ್ಣಿನ ಪರೀಕ್ಷೆ ಮತ್ತಿತರ ಸಮಸ್ಯೆಗಳನ್ನು ಬಗೆಹರಿಸಲು ರೈತರು ಮನವಿ ಮಾಡಿದರು. ಈ ವೇಳೆ ವಕೀಲರಾದ ರವಿಶಂಕರ್, ಬಿ.ಎಲ್.ದೇವರಾಜು, ಮಾಕವಳ್ಳಿ ಗ್ರಾಪಂ ಅಧ್ಯಕ್ಷೆ ಎಚ್.ಎಸ್.ವೀಣಾ, ಕಬ್ಬು ಬೆಳೆಗಾರ ಸಂಘದ ಕುಮಾರ್, ಕಾಯಿ ಮಂಜೇಗೌಡ, ಮಂಜುನಾಥ್, ರಾಮೇಗೌಡ, ಕಾರ್ಖಾನೆ ಅಧಿಕಾರಿಗಳಾದ ದತ್ತಾತ್ರೇಯ, ನಾಗರಾಜು, ಮಲ್ಲಿಕಾರ್ಜುನ ಉಪಸ್ಥಿತರಿದ್ದರು.

ಟೈಲರ್ ಕನ್ನಯ್ಯಲಾಲ್ ಹತ್ಯೆ ಖಂಡಿಸಿ ಕರೆ ನೀಡಿದ್ದ

ಬೆಸಗರಹಳ್ಳಿ ಬಂದ್ ಯಶಸ್ವಿ, ಶ್ರೀರಂಗಪಟ್ಟಣದಲ್ಲಿ ಪ್ರತಿಭಟನೆ



ಮದ್ದೂರು/ಶ್ರೀರಂಗಪಟ್ಟಣ, ಜೂ.30– ರಾಜಸ್ಥಾನದ ಉದಯಪುರದಲ್ಲಿ ಟೈಲರ್ ಕನ್ನಯ್ಯಲಾಲ್ ಹತ್ಯೆ ಖಂಡಿಸಿ ವಿಶ್ವ ಹಿಂದೂ ಪರಿಷತ್, ಬಜರಂಗದಳ, ಶ್ರೀರಾಮಸೇನೆ ಹಾಗೂ ಹಿಂದೂ ಜಾಗರಣಾ ವೇದಿಕೆ ಕರೆ ನೀಡಿದ್ದ ಮದ್ದೂರು ತಾಲೂಕಿನ ಬೆಸಗರಹಳ್ಳಿ ಬಂದ್ ಸಂಪೂರ್ಣ ಯಶಸ್ವಿಯಾದರೇ, ಶ್ರೀರಂಗಟ್ಟಣದಲ್ಲಿ ಪ್ರತಿಭಟನೆ ನಡೆಸಲಾಯಿತು.

ಮದ್ದೂರು: ತಾಲೂಕಿನ ಬೆಸಗರಹಳ್ಳಿಯಲ್ಲಿ ವರ್ತಕರು, ವ್ಯಾಪಾರಸ್ಥರು ಸ್ವಯಂ ಪ್ರೇರಿತವಾಗಿ ಅಂಗಡಿ ಮುಂಗಟ್ಟು ಮುಚ್ಚಿ, ರಸ್ತೆ ತಡೆ ನಡೆಸಿ ಬಂದ್‌ಗೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದರಲ್ಲದೇ ಹತ್ಯೆ ಮಾಡಿದ ಆರೋಪಿಗಳ ಭಾವಚಿತ್ರಕ್ಕೆ ಪಾದರಕ್ಷೆ ಸೇವೆ ಸಲ್ಲಿಸಿ, ಆಕ್ರೋಶ ವ್ಯಕ್ತಪಡಿಸಿದರು. ಬಂದ್‌ನಿಂದ ಸಂಚಾರ ಅಸ್ತವ್ಯಸ್ತಗೊಂಡು, ಬಸ್ ನಿಲ್ದಾಣ ಸೇರಿದಂತೆ ಸಾರ್ವಜನಿಕ ಸ್ಥಳಗಳು ಬಿಕೋ ಎನ್ನುತ್ತಿದ್ದ ದೃಶ್ಯ ಕಂಡು ಬಂತು.

ಕನ್ನಯ್ಯಲಾಲ್ ಹತ್ಯೆ ಹಾಗೂ ಪ್ರಧಾನಿ ಮೋದಿಗೆ ಕೊಲೆ ಬೆದರಿಕೆಯೊಡ್ಡಿರುವ ಪುಂಡರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ ವಿಶ್ವ ಹಿಂದೂ ಪರಿಷತ್, ಬಜರಂಗದಳ, ಶ್ರೀರಾಮಸೇನೆ, ಹಿಂದೂ ಜಾಗರಣಾ ವೇದಿಕೆ ಕಾರ್ಯಕರ್ತರು, ಬೈಕ್ ರ್‍ಯಾಲಿ ನಡೆಸಿ ಹತ್ಯೆ ಆರೋಪಿಗಳಿಗೆ ಗಲ್ಲುಶಿಕ್ಷೆ ವಿಧಿಸುವಂತೆ ಒತ್ತಾಯಿಸಿದರು.

ದೇಶದೆಲ್ಲೆಡೆ ಹಿಂದೂ ಕಾರ್ಯಕರ್ತರ ಮೇಲೆ ಹಲ್ಲೆ, ದೌರ್ಜನ್ಯ, ಹತ್ಯೆ ಪ್ರಕರಣ ಜರುಗುತ್ತಿದ್ದು, ಇಂತಹ ಘಟನೆಗಳು ಮರು ಕಳಿಸದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮುನ್ನೆಚ್ಚರಿಕೆ ವಹಿಸುವಂತೆ ಒತ್ತಾಯಿಸಿದರು. ಇದೇ ವೇಳೆ ಪ್ರತಿಭಟನಾಕಾರರು ಕನ್ನಯ್ಯಲಾಲ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಶ್ರದ್ಧಾಂಜಲಿ ಸಲ್ಲಿಸಿದರು.

ಶ್ರೀರಂಗಪಟ್ಟಣ: ಟೈಲರ್ ಕನ್ನಯ್ಯಲಾಲ್ ಹತ್ಯೆ ಖಂಡಿಸಿ ವಿಶ್ವ ಹಿಂದೂ ಪರಿಷತ್ ಕಾರ್ಯಕರ್ತರು ಪಟ್ಟಣದ ತಾಲೂಕು ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು. ಪಟ್ಟಣದ ಕುವೆಂಪು ವೃತ್ತದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಬೈಕ್ ರಾಲಿ ಮೂಲಕ ತಾಲೂಕು ಕಚೇರಿಗೆ ತೆರಳಿ ಧರಣಿ ನಡೆಸಿ, ಆಕ್ರೋಶ ವ್ಯಕ್ತಪಡಿಸಿದರು.

ವಿಹಿಂಪ ಮುಖಂಡ ಬೆಳಗೊಳ ಸುನೀಲ್ ಮಾತನಾಡಿ, ಟೈಲರಿಂಗ್ ಕೆಲಸ ಮಾಡಿ ಜೀವನ ನಡೆಸುತ್ತಿದ್ದ ಕನ್ನಯ್ಯಲಾಲ್ ಹತ್ಯೆ ಖಂಡನೀಯ. ಹತ್ಯೆಗೈದ ಆರೋಪಿಗಳ ವಿರುದ್ಧ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಈ ವೇಳೆ 50ಕ್ಕೂ ಹೆಚ್ಚು ಪ್ರತಿಭಟನಾಕಾರರು ಉಪ ತಹಶೀಲ್ದಾರ್‌ಗೆ ಮನವಿ ಸಲ್ಲಿಸಿದರು.

ವಿರಾಜಪೇಟೆ ಕೊಡವ ಪೊಮ್ಮಕ್ಕಡ ಒಕ್ಕೂಟದಿಂದ ಒತ್ತೋರ್ಮೆ ಕೂಟ



ವಿರಾಜಪೇಟೆ, ಜೂ.30–ಕೊಡವ ಸಂಪ್ರದಾಯ ವಿಶಿಷ್ಟವಾಗಿದ್ದು ಪ್ರತಿಯೊಂದರಲ್ಲೂ ತನ್ನತನವನ್ನು ಕಾಪಾಡಿಕೊಂಡು ಬಂದಿದೆ. ಯುವ ಜನತೆ ಮುಂದೆ ಬರಲು ಗುರಿಯನ್ನು ಮುಂದಿಟ್ಟುಕೊಳ್ಳಬೇಕು ಎಂದು ಆಲ್ ಇಂಡಿಯಾ ಕರಾಟೆ ಫೆಡರೇಶನ್ ದಕ್ಷಿಣ ವಲಯದ ಅಧ್ಯಕ್ಷ, ಮಾಜಿ ವಿಧಾನಪರಿಷತ್ ಸದಸ್ಯ ಚೆಪ್ಪುಡಿರ ಅರುಣ್ ಮಾಚಯ್ಯ ಕರೆಕೊಟ್ಟರು.

ವಿರಾಜಪೇಟೆ ಕೊಡವ ಪೊಮ್ಮಕ್ಕಡ ಒಕ್ಕೂಟದ ವತಿಯಿಂದ ಕೊಡವ ಸಮಾಜದ ಸಭಾಂಗಣದಲ್ಲಿ ಆಯೋಜಿಸಿದ್ದ ಒತ್ತೋರ್ಮೆ ಕೂಟದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು ನಮ್ಮಲ್ಲೂ ರಾಷ್ಟ್ರೀಯ ಮಟ್ಟದ ಯುವ ಕ್ರೀಡಾಪಟುಗಳಿದ್ದು ಇವರನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುವಲ್ಲಿ ಪ್ರತಿಯೊಬ್ಬರು ಕೈಜೋಡಿಸಬೇಕು ಎಂದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಅಜ್ಜಮಾಡ ರಮೇಶ್ ಕುಟ್ಟಪ್ಪ, ಅತಿಥಿಗಳಾದ ಚಾಂದಿನಿ ಅರುಣ್ ಮಾಚಯ್ಯ, ಪೊಮ್ಮಕ್ಕಡ ಕೂಟದ ಅಧ್ಯಕ್ಷೆ ಮನೆಯಪಂಡ ಕಾಂತಿಸತೀಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕೊಡವರ ಸಾಂಪ್ರದಾಯಿಕ ಪದ್ಧತಿಯಂತೆ ಗೆಜ್ಜೆತಂಡ್ ಹಾಗೂ ಕಾವೇರಿ ಮಾತೆಗೆ ನಮಿಸುವುದರ ಮುಖಾಂತರ ಗಣ್ಯರು ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ವೇದಿಕೆಯಲ್ಲಿ ಚೆಪ್ಪುಡಿರ ಅರುಣ್ ಮಾಚಯ್ಯ, ಚಾಂದಿನಿ ಮಾಚಯ್ಯ ದಂಪತಿಗಳನ್ನು ಹಾಗೂ ಅಜ್ಜಮಾಡ ರಮೇಶ್ ಕುಟ್ಟಪ್ಪ ಮತ್ತು ಕೊಡವ ಸಮಾಜದ ಆಡಳಿತ ಮಂಡಳಿ ಚುನಾವಣೆಯಲ್ಲಿ ವಿಜೇತರಾದ ಪೊಮ್ಮಕ್ಕಡ ಒಕ್ಕೂಟದ ಸದಸ್ಯರಾದ ಮೇರಿಯಂಡ ಗಾಯತ್ರಿ, ಚೋಕಂಡ ರೇಖಾ, ಮುಲ್ಲೆಂಗಡ ಶೀಲಾ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಚುಮ್ಮಕ್ಕ ಗ್ರೂಪಿನ ಅಧ್ಯಕ್ಷೆ ಉದ್ದಪಂಡ ವಿಮಲ ಸಭೆಯನ್ನುದ್ದೇಶಿಸಿ ಮಾತನಾಡಿದರು. ವೇದಿಕೆಯಲ್ಲಿ ಉಪಾಧ್ಯಕ್ಷೆ ಅಮ್ಮುಣಿಚಂಡ ಗಂಗಮ್ಮ, ಖಜಾಂಚಿ ತಾತಂಡ ಯಶು ಕಬೀರ್, ಹಿರಿಯರಾದ ಕುಪ್ಪಂಡ ಪುಷ್ಪ ಮುತ್ತಣ್ಣ ಉಪಸ್ಥಿತರಿದ್ದರು.

ಭೂ ಕಂಪನ ಪೀಡಿತ ಪ್ರದೇಶಗಳಿಗೆ ಭೂ ವಿಜ್ಞಾನಿಗಳ ಭೇಟಿ

ಚೆಂಬು ಗ್ರಾಮದಲ್ಲಿ 'ಬ್ರಾಡ್ ಬ್ಯಾಂಡ್ ಸಿಸ್ಮೋಗ್ರಾಫ್' ಮೀಟರ್ ಅಳವಡಿಕೆ

- ಗ್ರಾಮಗಳಲ್ಲಿ ಬಿರುಕಿನ ಮಾಹಿತಿ ಸಂಗ್ರಹ
- ಗ್ರಾಮಸ್ಥರಿಗೆ ಆತಂಕ ಪಡದಂತೆ ಅಭಯ





ಮಡಿಕೇರಿ,ಜೂ.30– ಕಳೆದ ಕೆಲ ದಿನಗಳ ಹಿಂದೆ ಕೊಡಗಿನ ವಿವಿಧ ಭಾಗಗಳಲ್ಲಿ 4 ಬಾರಿ ಭೂ ಕಂಪನವಾಗಿದ್ದು, ಹಿರಿಯ ಭೂ ವಿಜ್ಞಾನಿಗಳ ತಂಡ ಜಿಲ್ಲೆಗೆ ಆಗಮಿಸಿ ಅಧ್ಯಯನ ಆರಂಭಿಸಿದೆ.

ಮಡಿಕೇರಿ ತಾಲೂಕಿನ ಕರಿಕೆ, ಚೆಂಬು ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಎರಡು ದಿನಗಳ ಅವಧಿಯಲ್ಲಿ ಮೂರು ಬಾರಿ ಭೂಕಂಪವಾಗಿತ್ತು. ಜೂ.28ರ ಬೆಳಿಗ್ಗೆ 7.45ಕ್ಕೆ ಚೆಂಬು ಗ್ರಾಮದಲ್ಲಿ 3.0 ರಿಕ್ಟರ್ ಪ್ರಮಾಣದ ಭೂಕಂಪವಾಗಿದ್ದರೆ, ಸಂಜೆ ಮತ್ತೆ ಅದೇ ಸ್ಥಳದಲ್ಲಿ 1.7 ತೀವ್ರತೆಯ ಕಂಪನವಾಗಿತ್ತು. ಸರಣಿ ಭೂಕಂಪವಾದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಬೆಂಗಳೂರಿನಲ್ಲಿರುವ ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತು ನಿರ್ವಹಣಾ ಕೇಂದ್ರದ ಹಿರಿಯ ಭೂ ವಿಜ್ಞಾನಿಗಳಾದ ಡಾ. ಜಗದೀಶ್ ಮತ್ತು ಡಾ. ರಮೇಶ್ ದಿಕ್ಪಾಲ್ ಅವರ ನೇತೃತ್ವದ ತಂಡವನ್ನು ಕೊಡಗು ಜಿಲ್ಲೆಗೆ ಕಳುಹಿಸಿದೆ.

ಕೊಡಗು ಜಿಲ್ಲಾ ವಿಪತ್ತು ನಿರ್ವಹಣಾ ಪರಿಣಿತ ಅಧಿಕಾರಿ ಅನನ್ಯ ವಾಸುದೇವ್ ಸೇರಿದಂತೆ ವಿಜ್ಞಾನಿಗಳ ತಂಡ ಭೂಕಂಪವಾಗಿದ್ದ ಚೆಂಬು ಗ್ರಾಮಕ್ಕೆ ಭೇಟಿ ನೀಡಿ, ಚೆಂಬು ಸರಕಾರಿ ಶಾಲೆಯಲ್ಲಿ "ಬ್ರಾಡ್ ಬ್ಯಾಂಡ್ ಸಿಸ್ಮೋಗ್ರಾಫ್" ಮೀಟರ್ ಅನ್ನು ಅಳವಡಿಸಿದೆ. ಮಾತ್ರವಲ್ಲದೇ ಜನರ ಓಡಾಟ ಕಡಿಮೆ ಇರುವ ಸ್ಥಳದಲ್ಲಿ 'ಸಿಸ್ಮೋಗ್ರಫಿ ಅಬ್ಸರ್ವರ್' ತಂತ್ರಜ್ಞಾನವನ್ನು ಅಳವಡಿಸಿ ಅಧ್ಯಯನ ಆರಂಭಿಸಿದೆ. ಈ ಅತ್ಯಾಧುನಿಕ ತಂತ್ರಜ್ಞಾನದ ಯಂತ್ರಗಳು ಭೂ ಗರ್ಭದಲ್ಲಿ ಘಟಿಸುವ ಕಂಪನಗಳನ್ನು ಸಂಗ್ರಹಿಸಿ ಬೆಂಗಳೂರಿನಲ್ಲಿರುವ ಪ್ರಾಕೃತಿಕ ವಿಕೋಪ ಉಸ್ತುವಾರಿ ಕೇಂದ್ರಕ್ಕೆ ರವಾನಿಸುತ್ತವೆ. ಇದಕ್ಕಾಗಿ ನಿರಂತರ ವಿದ್ಯುತ್ ಪೂರೈಕೆ ಅಗತ್ಯವಿರುವ ಹಿನ್ನೆಲೆಯಲ್ಲಿ ಬ್ಯಾಟರಿಯನ್ನು ಅಳವಡಿಸಲಾಗಿದೆ. ಈ ಮೀಟರ್‌ಗಳು ಪ್ರಪಂಚದ ಯಾವುದೇ ಭಾಗದಲ್ಲಿ ರಿಕ್ಟರ್ ಮಾಪಕದ 5 ಹಾಗೂ ದೇಶದ ಯಾವುದೇ ಭಾಗದಲ್ಲಿ ರಿಕ್ಟರ್ ಮಾಪಕದ 3 ತೀವ್ರತೆಯ ಕಂಪನದ ದತ್ತಾಂಶಗಳನ್ನು ಸಂಗ್ರಹಿಸುವ ಸಾಮರ್ಥ್ಯ ಹೊಂದಿದೆ.

ವಿಜ್ಞಾನಿಗಳ ತಂಡ ಕರಿಕೆಯಲ್ಲಿ ಜೂನ್ 25ರಂದು ಭೂಕಂಪವಾಗಿದ್ದ ಪ್ರದೇಶಕ್ಕೂ ಭೇಟಿ ನೀಡಿ, ಅಲ್ಲಿನ ಭೂಮಿಯಾಳದ ಬೆಳವಣಿಗೆ ಬಗ್ಗೆಯು ಅಧ್ಯಯನ ನಡೆಸಿದೆ. ಮಾತ್ರವಲ್ಲದೇ ಎರಡು ಗ್ರಾಮಗಳಲ್ಲೂ ಜನರಿಂದ ವಿಜ್ಞಾನಿಗಳ ತಂಡ ಮಾಹಿತಿ ಸಂಗ್ರಹಿಸಿದೆ. ಭೂಕಂಪದ ಬಳಿಕ ಕರಿಕೆ ಮತ್ತು ಚೆಂಬು ಗ್ರಾಮಗಳ ಸುತ್ತಮುತ್ತ ಪ್ರದೇಶಗಳಲ್ಲಿ ಭೂಮಿ ಬಿರುಕು ಬಿಟ್ಟಿದೆಯೇ ಎಂಬ ಮಾಹಿತಿಯನ್ನು ತಂಡವು ಕಲೆ ಹಾಕುತ್ತಿದೆ.

ಚೆಂಬು ಸರಕಾರಿ ಶಾಲೆಯ ಮಕ್ಕಳಿಗೆ ಪ್ರಾಕೃತಿಕ ವಿಕೋಪ ಘಟಿಸುವ ಸಂದರ್ಭ ವಹಿಸಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಕುರಿತು ಡಾ. ಅನನ್ಯ ವಾಸುದೇವ್ ಮಾಹಿತಿ ನೀಡಿದರು. ಕೊಡಗು ಜಿಲ್ಲೆ ಭೂ ಕಂಪನ ಪ್ರಮಾಣದ "ಝೋನ್ 3ಕ್ಕೆ" ಒಳಪಡುತ್ತದೆ. ಈ ಹಿನ್ನೆಲೆಯಲ್ಲಿ ಕಂಪನಕ್ಕೆ ಆತಂಕ ಪಡುವ ಅಗತ್ಯವಿಲ್ಲ ಎಂದು ಅಭಯ ನೀಡಿದೆ.

6 ಒಂದೆಡೆ ವಿಜ್ಞಾನಿಗಳ ತಂಡ ಕೊಡಗಿಗೆ ಬಂದು ಭೂಕಂಪದ ಸ್ಥಳಗಳಲ್ಲಿ ಅಧ್ಯಯನ ಆರಂಭಿಸಿದ್ದರೆ, ಮತ್ತೊಂದೆಡೆ ಕೊಡಗು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಅನ್ಬುಕುಮಾರ್ ಅವರು ಜಿಲ್ಲಾಡಳಿತ ಮತ್ತು ಎಲ್ಲಾ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿದ್ದಾರೆ. ಪ್ರವಾಹ, ಭೂ ಕುಸಿತದ ಪರಿಸ್ಥಿತಿ ಎದುರಾದರೆ ಅದನ್ನು ನಿಭಾಯಿಸುವ ಕುರಿತು ಅಧಿಕಾರಿಗಳಿಗೆ ಸ್ಪಷ್ಟ ನಿರ್ದೇಶನ ನೀಡಿದ್ದಾರೆ. ಕುಶಾಲನಗರ ಭಾಗದಲ್ಲಿ ಪ್ರವಾಹ ಎದುರಾಗದಂತೆ ಹಾರಂಗಿ ಜಲಾಶಯ ಸಂಪೂರ್ಣ ಭರ್ತಿಗೆ 5 ಅಡಿ ಬಾಕಿ ಇರುವಾಗಲೇ ಮಳೆಯ ಪರಿಸ್ಥಿತಿಯನ್ನು ನೋಡಿ ನದಿಗೆ ನೀರು ಹರಿಸಲು ನಿರ್ಧರಿಸಲಾಗಿದ್ದು, ಇದರ ಜವಾಬ್ದಾರಿಯನ್ನು ಜಿಲ್ಲಾಧಿಕಾರಿಗಳು ನಿರ್ವಹಿಸಲಿದ್ದಾರೆ.

ಕರಿಕೆ ಮತ್ತು ಚೆಂಬು ಸುತ್ತಮುತ್ತ ಜೂ.25ರಂದು ಬೆಳಗ್ಗೆ 9 ಗಂಟೆ ವೇಳೆಯಲ್ಲಿ 2.3, ಜೂ.28ರಂದು ಬೆಳಗ್ಗೆ 7.45 ಗಂಟೆಗೆ 3.0, ಅದೇ ದಿನ ಸಂಜೆ 4.32 ಗಂಟೆಗೆ ರಿಕ್ಟರ್ ಮಾಪಕದಲ್ಲಿ 1.8 ಲಘು ಭೂಕಂಪನ ದಾಖಲಾಗಿದೆ. ಹಾರಂಗಿ ಜಲಾಶಯದಲ್ಲಿರುವ ಶಾಶ್ವತ ಭೂಕಂಪನ ಮಾಪನ ಕೇಂದ್ರದಲ್ಲಿ ಭೂ ಕಂಪನ ದಾಖಲಾಗಿದೆ. 2018ರಲ್ಲಿ ಭೂಮಿ ಬಿರುಕು ಬಿಟ್ಟಿದ್ದ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಲಾಗಿದ್ದು, ಈ ಬಾರಿಯ ಕಂಪನದಲ್ಲಿ ಭೂಮಿ ಬಿರುಕು ಬಿಟ್ಟಿಲ್ಲ. – ಭೂ ವಿಜ್ಞಾನಿ ಡಾ.ರಮೇಶ್, ಬೆಂಗಳೂರು.

ಟೈಲರ್ ಕನ್ಹಯ್ಯ ಲಾಲ್ ಹತ್ಯೆ ಖಂಡಿಸಿ ಮಡಿಕೇರಿಯಲ್ಲಿ

ಸುರಿಯುತ್ತಿರುವ ಮಳೆಯಲ್ಲಿಯೇ ಪ್ರತಿಭಟನೆ ನಡೆಸಿದ ಹಿಂದೂ ಪರ ಸಂಘಟನೆಗಳು



ಮಡಿಕೇರಿ,ಜೂ.30– ರಾಜಸ್ಥಾನದ ಉದಯ್‌ಪುರದಲ್ಲಿ ನಡೆದ ಟೈಲರ್ ಕನ್ಹಯ್ಯ ಲಾಲ್ ಹತ್ಯೆಯನ್ನು ಖಂಡಿಸಿ ಮಡಿಕೇರಿಯಲ್ಲಿ ಹಿಂದೂ ಪರ ಸಂಘಟನೆಗಳು ಬೃಹತ್ ಪ್ರತಿಭಟನೆ ನಡೆಸಿದವು.

ನಗರದ ಜನರಲ್ ತಿಮ್ಮಯ್ಯ ವೃತ್ತದಲ್ಲಿ ಬಜರಂಗದಳ, ವಿಶ್ವ ಹಿಂದೂ ಪರಿಷತ್, ಹಿಂದೂ ಜಾಗರಣ ವೇದಿಕೆ ಸೇರಿದಂತೆ ವಿವಿಧ ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ಕನ್ಹಯ್ಯ ಹತ್ಯೆ ಖಂಡಿಸಿ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಸುರಿಯುತ್ತಿದ್ದ ಭಾರೀ ಮಳೆಯ ನಡುವೆಯೇ ತಿಮ್ಮಯ್ಯ ವೃತ್ತದಲ್ಲಿ ಜಮಾವಣೆಗೊಂಡ ನೂರಾರು ಹಿಂದೂ ಸಂಘಟನೆಗಳ ಕಾರ್ಯಕರ್ತರು ಕನ್ಹಯ್ಯರನ್ನು ಬರ್ಬರವಾಗಿ ಹತ್ಯೆಗೈದವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕೆಂದು ಆಗ್ರಹಿಸಿದರು. ಕನ್ಹಯ್ಯ ಹತ್ಯೆ ಆರೋಪಿಗಳನ್ನು ಶೀಘ್ರದಲ್ಲಿ ಗಲ್ಲಿಗೇರಿಸಲು ವಿಶೇಷ ನ್ಯಾಯಾಲಯ ಸ್ಥಾಪಿಸಬೇಕು. ಇಸ್ಲಾಂ ಹೆಸರಿನಲ್ಲಿ ಭಯೋತ್ಪಾದನೆ ನಡೆಸುವ ಮೂಲಭೂತವಾದಿ ಭಯೋತ್ಪಾದಕರನ್ನು ಮಟ್ಟ ಹಾಕಲು ಕಠಿಣ ಕಾನೂನು ಜಾರಿ ಮಾಡಬೇಕೆಂದು ಒತ್ತಾಯಿಸಿದರು.

ಈ ಸಂದರ್ಭ ಮಾತನಾಡಿದ ವಿಶ್ವ ಹಿಂದು ಪರಿಷತ್ ಜಿಲ್ಲಾಧ್ಯಕ್ಷ ಕೃಷ್ಣಮೂರ್ತಿ, ಭಾರತದಲ್ಲಿ ಅಸಹಿಷ್ಣುತೆಯ ಹೆಸರಿನಲ್ಲಿ ಹಿಂದೂ ಸಮಾಜದ ಮೇಲೆ ದಬ್ಬಾಳಿಕೆ ನಡೆಸಲಾಗುತ್ತಿದೆ. ಇಂತಹ ಘಟನೆಗಳು ಮರುಕಳಿಸಿದರೆ ಹಿಂದೂ ಸಮಾಜ ಬೀದಿಗಿಳಿದು ಪಾಠ ಕಲಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಕನ್ಹಯ್ಯ ಲಾಲ್ ಹತ್ಯೆ ಮಾಡಿದವರನ್ನು ಕೂಡಲೇ ಗಲ್ಲಿಗೇರಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡುವುದಾಗಿ ಹೇಳಿದ ಕೃಷ್ಣಮೂರ್ತಿ, ಹಿಂದೂಗಳನ್ನು ಮತ್ತೊಮ್ಮೆ ಕೆಣಕಿದರೆ ಪರಿಸ್ಥಿತಿ ಬದಲಾಗಲಿದೆ ಎಂದು ಎಚ್ಚರಿಸಿದರು.

ಬಳಿಕ ಜನರಲ್ ತಿಮ್ಮಯ್ಯ ವೃತ್ತದಿಂದ ಜಿಲ್ಲಾಧಿಕಾರಿಗಳ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ತೆರಳಿದ ಹಿಂದೂ ಸಂಘಟನೆಗಳ ಕಾರ್ಯಕರ್ತರು ಜಿಲ್ಲಾಡಳಿತದ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಪತ್ರ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ವಿಶ್ವ ಹಿಂದೂ ಪರಿಷತ್ ಮುಖಂಡ ಸುರೇಶ್ ಮುತ್ತಪ್ಪ ಹಿಂದೂ ಜಾಗರಣಾ ವೇದಿಕೆ ಕುಕ್ಕೇರ ಅಜಿತ್, ರಾಜ್ಯ ಪಶ್ಚಿಮಘಟ್ಟಗಳ ಸಂರಕ್ಷಣಾ ಪಡೆ ಅಧ್ಯಕ್ಷ ಶಾಂತೆಯಂಡ ರವಿ ಕುಶಾಲಪ್ಪ, ಬಿಜೆಪಿ ನಗರಾಧ್ಯಕ್ಷ ಮನು ಮಂಜುನಾಥ್, ನಗರ ಸಭಾ ಸ್ಥಾಯಿ ಸಮಿತಿ ಅಧ್ಯಕ್ಷ ಉಮೇಶ್ ಸುಬ್ರಮಣಿ, ಸದಸ್ಯರಾದ ಮಹೇಶ್ ಜೈನಿ, ಅರುಣ್ ಶೆಟ್ಟಿ ಸೇರಿದಂತೆ ಹಿಂದೂ ಸಂಘಟನೆಗಳ ಪ್ರಮುಖರು, ಕಾರ್ಯಕರ್ತರು ಹಾಜರಿದ್ದರು.

ಬಸ್ ಚಾಲಕನ ಮೃತದೇಹ ಪತ್ತೆ

ಮಡಿಕೇರಿ,ಜೂ.30– ನಗರದ ನಿರ್ಮಾಣ ಹಂತದಲ್ಲಿರುವ ಕಟ್ಟಡ ಒಂದರಲ್ಲಿ ಮಡಿಕೇರಿ ನಿವಾಸಿ ಬಸ್ ಚಾಲಕರಾಗಿದ್ದ ನಾರಾಯಣ(60) ಮೃತದೇಹ ಪತ್ತೆಯಾಗಿದೆ. ಮಡಿಕೇರಿ ನಗರ ಪೊಲೀಸರು ಸ್ಥಳ ಪರಿಶೀಲನೆ ನಡೆಸಿ ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಟೆಂಪೋ ಟ್ರಾವೆಲರ್ ಡಿಕ್ಕಿ: ಬೈಕ್ ಸವಾರ ಸಾವು

ಮಡಿಕೇರಿ,ಜೂ.30: ಮಡಿಕೇರಿ ಸಮೀಪದ ತಾಳತ್ತಮನೆ ಜಂಕ್ಷನ್ ಬಳಿ ಬೈಕ್ ಮತ್ತು ಟೆಂಪೋ ಟ್ರಾವೆಲರ್ ನಡುವೆ ಸಂಭವಿಸಿದ ರಸ್ತೆ ಅಪಘಾತದಲ್ಲಿ ಬೈಕ್ ಸವಾರರೊಬ್ಬರು ಮೃತಪಟ್ಟ ಘಟನೆ ನಡೆದಿದೆ. ತಾಳತ್ತಮನೆ ನಿವಾಸಿ ಉದಿಯಂಡ ಶಂಭು ಮಂದಣ್ಣ ಮೃತಪಟ್ಟ ವ್ಯಕ್ತಿ. ಶಂಭು ಮಂದಣ್ಣ ಎಂದಿನಂತೆ ತಾಳತ್ತಮನೆ ಮಾರ್ಗವಾಗಿ ಮಡಿಕೇರಿ ಕಡೆಗೆ ಬೈಕ್‌ನಲ್ಲಿ ಬರುತ್ತಿದ್ದ ಸಂದರ್ಭ ಮಡಿಕೇರಿ ಮಾರ್ಗವಾಗಿ ಭಾಗಮಂಡಲ ಕಡೆಗೆ ತೆರಳುತ್ತಿದ್ದ ಟೆಂಪೋ ಟ್ರಾವೆಲರ್ ಬೈಕ್‌ಗೆ ಡಿಕ್ಕಿಹೊಡೆದಿದೆ. ಪರಿಣಾಮ ಶಂಭು ಮಂದಣ್ಣ ಅವರ ತಲೆಯ ಭಾಗಕ್ಕೆ ಗಂಭೀರ ಸ್ವರೂಪದ ಗಾಯವಾಗಿ, ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಘಟನೆ ಕುರಿತು ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಕನ್ಹಯ್ಯ ಹತ್ಯೆ ಖಂಡಿಸಿ ನಾಪೋಕ್ಲುವಿನಲ್ಲಿ ಪ್ರತಿಭಟನೆ

ನಾಪೋಕ್ಲು, ಜೂ.30(ದುಗ್ಗಳ)– ಬಿಜೆಪಿ ನಾಯಕಿ ನುಪೂರ್ ಶರ್ಮಾ ಅವರ ಹೇಳಿಕೆಯನ್ನು ಬೆಂಬಲಿಸಿದ ಆರೋಪದ ಮೇಲೆ ರಾಜಸ್ತಾನದ ಕನ್ಹಯ್ಯ ಲಾಲ್‌ರನ್ನು ಹತ್ಯೆ ಮಾಡಿರುವುದನ್ನು ಖಂಡಿಸಿ ಬಿಜೆಪಿ ಕಾರ್ಯಕರ್ತರು ನಾಪೋಕ್ಲು ನಗರದಲ್ಲಿ ಪ್ರತಿಭಟನೆ ನಡೆಸಿದರು. ಪ್ರತಿಭಟನೆಯಲ್ಲಿ ಬಿ.ಜೆ.ಪಿ. ಮಡಿಕೇರಿ ತಾಲೂಕು ಕಾರ್ಯದರ್ಶಿ ಪಾಡಿಯಮ್ಮಂಡ ಮನು ಮಹೇಶ್, ಮಡಿಕೇರಿ ತಾಲೂಕು ಬಿ.ಜೆ.ಪಿ. ರೈತ ಮೋರ್ಚಾದ ಅಧ್ಯಕ್ಷ ಶಿವಚಾಳಿಯಂಡ ಜಗದೀಶ್, ಪ್ರಸಾದ್ ತಿಮ್ಮಯ್ಯ, ಕುಂಡ್ಯೋಳಂಡ ವಿಸೂ ಪೂವಯ್ಯ, ಪಟ್ರಪಂಡ ಮೋಹನ್ ಮುದ್ದಪ್ಪ, ಕಂಗಾಂಡ ಜಾಲಿ ಪೂವಪ್ಪ, ಗ್ರಾಮ ಪಂಚಾಯತ್ ಸದಸ್ಯ ಬಿ.ಎಂ. ಪ್ರತೀಪ್, ಕರವಂಡ ಲವ ನಾಣಯ್ಯ, ಎಂ.ಎಂ. ನರೇಂದ್ರ, ಅರೆಯಡ ರತ್ನ ಪೆಮ್ಮಯ್ಯ, ಅಪ್ಪಾರಂಡ ಸುಧೀರ್ ಅಯ್ಯಪ್ಪ, ಮತ್ತಿತರರು ಇದ್ದರು.


ಜು.3, ಕಾಂಗ್ರೆಸ್ ಸಭೆ

ಸೋಮವಾರಪೇಟೆ, ಜೂ.30– ನಗರ ಕಾಂಗ್ರೆಸ್ ಕಾರ್ಯಕರ್ತರ ಸಭೆ ಜು.3 ರಂದು ಭಾನುವಾರ ಕಕ್ಕೆಹೊಳೆ ಸಮೀಪದ ಕಾಂಗ್ರೆಸ್ ಕಚೇರಿಯಲ್ಲಿ ನಡೆಯಲಿದೆ ಎಂದು ಅಧ್ಯಕ್ಷ ಎಚ್.ಎ. ನಾಗರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂದು ಸಂಜೆ 5 ಗಂಟೆಗೆ ನಡೆಯುವ ಸಭೆಯಲ್ಲಿ ಪಕ್ಷದ ಜಿಲ್ಲಾ ಮಟ್ಟದ ಹಿರಿಯ ಮುಖಂಡರು, ಜನಪ್ರತಿನಿಧಿಗಳು, ಬ್ಲಾಕ್ ಕಾಂಗ್ರೆಸ್ ಸೇರಿದಂತೆ ಎಲ್ಲ ಪದಾಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದ್ದಾರೆ.

ನಿಧನ

ಈರಪ್ಪ



ಸೋಮವಾರಪೇಟೆ, ಜೂ.30– ತಾಲೂಕಿನ ಗೌಡಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚನ್ನಾಪುರ ಗ್ರಾಮದ ನಿವಾಸಿ, ಕೃಷಿಕರಾದ ಸಿ.ಎಸ್. ಈರಪ್ಪ (80) ಗುರುವಾರ ಬೆಳಿಗ್ಗೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಹಾಗೂ ಪುತ್ರಿಯರನ್ನು ಅಗಲಿದ್ದಾರೆ. ಗುರುವಾರ ಸಂಜೆ ಅಂತ್ಯಕ್ರಿಯೆ ನಡೆಯಿತು.

ಕನ್ಹಯ್ಯ ಲಾಲ್ ಹಂತಕರ ಗಲ್ಲಿಗೇರಿಸಲು ಆಗ್ರಹಿಸಿ

ಹಿಂದೂ ಪರ ಸಂಘಟನೆಗಳ ಪ್ರತಿಭಟನೆ



ಚಾಮರಾಜನಗರ, ಜೂ.30– ರಾಜಸ್ತಾನದ ಉದಯಪುರ ನಗರದಲ್ಲಿ ಕನ್ಹಯ್ಯ ಲಾಲ್ ಬಡ ಹಿಂದೂ ಟೈಲರ್ ಹತ್ಯೆ ಮಾಡಿದ ಆರೋಪಿಗಳನ್ನು ಗಲ್ಲುಶಿಕ್ಷೆಗೆ ಗುರಿಪಡಿಸುವಂತೆ ಆಗ್ರಹಿಸಿ ನಗರದ ಹಿಂದೂ ಪರ ಸಂಘಟನೆಗಳು ಪ್ರತಿಭಟನೆ ನಡೆಸಿದವು.

ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದ ಆವರಣದಲ್ಲಿ ಹಿಂದೂಪರ ಸಂಘಟನೆಗಳ ಶಿವುವಿರಾಟ್ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತ ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿ ಹೆಚ್ಚುವರಿ ಜಿಲ್ಲಾಧಿಕಾರಿ ಕಾತ್ಯಾಯಿನಿ ದೇವಿ ಅವರ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಪ್ರತಿಭಟನೆ ನೇತೃತ್ವ ವಹಿಸಿದ್ದ ಶಿವು ವಿರಾಟ್ ಮಾತನಾಡಿ, ಕೆಲ ದಿನಗಳ ಹಿಂದೆ ನೂಪುರ್ ಶರ್ಮಾ ಎಂಬ ಜನಪ್ರತಿನಿಧಿಯು ಸಾಮಾಜಿಕ ಜಾಲತಾಣಗಳಲ್ಲಿ ವಿವಾದಾತ್ಮಕ ಪೋಸ್ಟರ್ ಹಾಕಿದರು. ಅದರ ಪರವಾಗಿ ರಾಜಸ್ತಾನದ ಉದಯಪುರ ನಗರದಲ್ಲಿ ಕನ್ಹಯ್ಯಲಾಲ್ ಎಂಬ ಬಡ ಕುಟುಂಬ ಟೈಲರ್ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಾಕಿದ್ದರು. ಇದನ್ನು ಗಮನಿಸಿದ ಇಬ್ಬರು ಕಿಡಿಗೇಡಿಗಳಾದ ಮಹಮ್ಮದ್ ರಿಯಾಜ್ ಮತ್ತು ಅನ್ಸರಿ ಎಂಬ ಗೂಂಡಾಗಳು ಬಟ್ಟೆ ಹೊಲಿಸುವ ನೆಪದಲ್ಲಿ ಕನ್ಹಯ್ಯಲಾಲ್ ಅವರನ್ನು ತಾಲಿಬಾನ್ ಮಾದರಿಯಲ್ಲಿ ಕೊಲೆ ಮಾಡಿದ್ದು, ಅಲ್ಲದೆ ದೇಶದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಕೊಲ್ಲುವುದಾಗಿ ಬಹಿರಂಗ ಬೆದರಿಕೆ ಹಾಕಿರುತ್ತಾರೆ. ಇದು ಅತ್ಯಂತ ಖಂಡನೀಯ. ಈ ಪ್ರಕರಣದ ಆರೋಪಿಗಳನ್ನು ಗುಂಡಿಕ್ಕಿ ಕೊಲ್ಲಬೇಕು. ಗಲ್ಲು ಶಿಕ್ಷೆಗೆ ಗುರಿಪಡಿಸಬೇಕು ಎಂದು ಒತ್ತಾಯಿಸಿದರು.

ರಾಜಾರೋಷವಾಗಿ ದೇಶದ ಪ್ರಧಾನಿಗೆ ಧಮಕಿ ಹಾಕಿರುವುದು ಎಷ್ಟರ ಮಟ್ಟಿಗೆ ಸರಿ. ಹಿಂದೂ ಧರ್ಮದ ಪರ ಕೆಲಸ ಮಾಡುವ ವ್ಯಕ್ತಿಗಳ ಮೇಲೆ ಆಗಾಗ ಹಲ್ಲೆ, ಹತ್ಯೆ ನಡೆಯುತ್ತಿದೆ. ಇದು ನಿಲ್ಲಬೇಕು. ಇಲ್ಲದಿದ್ದರೆ ಹಿಂದೂ ಧರ್ಮಕ್ಕೆ ಗಂಡಾಂತರ ಎದುರಾಗುತ್ತದೆ. ಕನ್ಹಯ್ಯಲಾಲ್ ಹತ್ಯೆ ಒಂದು ಐಸಿಸ್ ಕೃತ್ಯವಾಗಿದೆ. ಈ ಪ್ರಕರಣದ ಆರೋಪಿಗಳ ಹಿಂದೆ ದೊಡ್ಡ ಶಕ್ತಿ ಅಡಗಿದೆ. ಆದ್ದರಿಂದ ಈ ಪ್ರಕರಣವನ್ನು ಉನ್ನತಮಟ್ಟದ ತನಿಖೆ ನಡೆಸಬೇಕು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ನೂರೊಂದುಶೆಟ್ಟಿ, ಕಿರಣ್, ಎಂ.ಎಸ್. ಚಂದ್ರಶೇಖರ್, ಬಾಬು, ರಮೇಶ್, ಕೃಷ್ಣಪ್ಪ ಕೃಷ್ಣ, ಚಂದ್ರಶೇಖರ್,ಶಮಿತ್, ಶಿವಣ್ಣ, ಬುಲೆಟ್ ಚಂದ್ರು, ನಾಗೇಶ್ ನಾಯಕ, ಪೃಥ್ವಿ, ರಾಹುಲ್, ಸಂತೋಷ್, ಪ್ರಸನ್ನ, ಪಮ್ಮಿ, ಹರದನಹಳ್ಳಿ ರವಿ, ಮಂಜುನಾಥ್, ಬಂಗಾರು, ಮಲ್ಲ ಇತರರು ಭಾಗವಹಿಸಿದ್ದರು.

ಭಾರತ್ ಸೇವಾದಳ ಜಿಲ್ಲಾ ಸಮಿತಿ ನೂತನ ಪದಾಧಿಕಾರಿಗಳ ಅವಿರೋಧ ಆಯ್ಕೆ



ಚಾಮರಾಜನಗರ ಭಾರತ ಸೇವಾದಳ ಜಿಲ್ಲಾ ಸಮಿತಿ ಕಚೇರಿಯಲ್ಲಿ ಸೇವಾದಳ ನೂತನ ಪದಾಧಿಕಾರಿಗಳ ಆಯ್ಕೆ ಚುನಾವಣೆಯಲ್ಲಿ ಅಧ್ಯಕ್ಷರಾಗಿ ವೆಂಕಟನಾಗಪ್ಪಶೆಟ್ಟಿ ಸೇರಿದಂತೆ ಸದಸ್ಯರು ಅವಿರೋಧವಾಗಿ ಆಯ್ಕೆಯಾದರು.

ಚಾಮರಾಜನಗರ ಜೂ.30– ನಗರದ ಭಾರತ ಸೇವಾದಳ ಜಿಲ್ಲಾ ಸಮಿತಿ ಕಚೇರಿಯಲ್ಲಿ ಸೇವಾದಳ ನೂತನ ಪದಾಧಿಕಾರಿಗಳ ಆಯ್ಕೆ ಚುನಾವಣೆ ನಡೆಯಿತು.

ನೂತನ ಅಧ್ಯಕ್ಷರಾಗಿ ವೆಂಕಟನಾಗಪ್ಪ ಶೆಟ್ಟಿ(ಬಾಬು), ಉಪಾಧ್ಯಕ್ಷರಾಗಿ ಕೊಂಗರಹಳ್ಳಿ ನಾಗರಾಜು, ಕಾರ್ಯದರ್ಶಿಯಾಗಿ ಅಪ್ಪುಮಾಸ್ಟರ್ ಮಹದೇವಯ್ಯ, ಕೇಂದ್ರ ಸಮಿತಿ ಸದಸ್ಯರಾಗಿ ಎಂ.ಬಿ. ಲಿಂಗರಾಜು, ಕೋಶಾಧ್ಯಕ್ಷರಾಗಿ ವಿ.ಶ್ರೀನಿವಾಸ ಪ್ರಸಾದ್, ನೂತನ ಸದಸ್ಯರಾಗಿ ಎನ್. ಜೋಸೆಫ್, ಮಹೇಶ್ ಜಿ. ಬಳಿಗಾರ್, ವೆಂಕಟೇಶ್ ನಾಯ್ಕ, ವೈ.ಎಂ.ಮಂಜುನಾಥ್, ಷಡಕ್ಷರಸ್ವಾಮಿ, ನಾಗೇಂದ್ರ, ಆರ್.ಎನ್. ರೇಖಾ, ಉತ್ತವಳ್ಳಿ ಶಿವರಾಜು ಅವಿರೋಧವಾಗಿ ಆಯ್ಕೆಯಾದರು.

ಜಿಲ್ಲಾ ಸಮಿತಿ ಸದಸ್ಯರಾಗಿ ತಗಡೂರಯ್ಯ, ವಿ.ಮಹೇಶ್ವರಿ ಆಯ್ಕೆಯಾದರು. ನೂತನ ಅಧ್ಯಕ್ಷ ವೆಂಕಟನಾಗಪ್ಪಶೆಟ್ಟಿ (ಬಾಬು) ಮಾತನಾಡಿ, ನಾ.ಸು.ಹರ್ಡಿಕರ್ ಸ್ಥಾಪಿಸಿದ ಭಾರತ್ ಸೇವಾದಳ ಸೇವೆಗಾಗಿ ಬಾಳು ಎಂಬುದಾಗಿದೆ. ಇದರಲ್ಲಿ ಅವಕಾಶ ಸಿಗುವುದು ಅಪರೂಪ, ದೇಶಪ್ರೇಮ, ದೇಶಭಕ್ತಿ ಬೆಳೆಸುವುದರಲ್ಲಿ ಸೇವಾದಳದ ಕಾರ್ಯ ಅನನ್ಯ, ಶಿಕ್ಷಕರ ಪಾತ್ರ ಅತ್ಯಂತ ಅಮೂಲ್ಯವಾಗಿದೆ ಎಂದರು.

ಸೇವಾದಳವನ್ನು ಜಿಲ್ಲೆಯಲ್ಲೇ ಮಾದರಿಯಾಗಿ ಮಾಡಲು ಸೇವಾದಳದ ಸದಸ್ಯರು ಒಗ್ಗಟ್ಟಾಗಿ ಕಾರ್ಯನಿರ್ವಹಿಸುವ ಅಗತ್ಯವಿದೆ ಎಂದರು.

ಭಾರತಸೇವಾದಳದ ತಾಲೂಕು ಅಧ್ಯಕ್ಷ ಸಿ.ಎಂ.ನರಸಿಂಹಮೂರ್ತಿ ಮಾತನಾಡಿ, ನಾ.ಸು.ಹರ್ಡಿಕರ್ ಅವರ ಆದರ್ಶ, ತತ್ವಗಳನ್ನು ನೂತನ ಜಿಲ್ಲಾ ಸಮಿತಿ ಪದಾಧಿಕಾರಿಗಳು ಪಾಲನೆ ಮಾಡುವ ಮೂಲಕ ವಿವಿಧ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ ಸೇವಾದಳ ಮಾದರಿಯಾಗಿ ಬೆಳೆಸುವ ಮಹತ್ತರ ಕಾರ್ಯ ಕೈಗೊಳ್ಳಬೇಕು ಎಂದರು.

ಚುನಾವಣಾಧಿಕಾರಿಯಾಗಿ ವಲಯ ಸಂಘಟಕ ಕೆ.ಈರಯ್ಯ ಕಾರ್ಯನಿರ್ವಹಿಸಿದರು. ಸೇವಾದಳ ತಾಲೂಕು ಉಪಾಧ್ಯಕ್ಷ ಸಿ.ಮಲ್ಲಿ ಕಾರ್ಜುನ್, ಕೊಳ್ಳೇಗಾಲ ತಾಲೂಕು ಘಟಕದ ಬಿ.ಕೆ.ಪ್ರಕಾಶ್, ಕುಮಾರಸ್ವಾಮಿ, ಸಿ.ಎಂ.ಸುಬ್ರಹ್ಮಣ್ಯ (ಕಲಾಮಣಿ), ಎಚ್.ಎಂ.ಸತೀಶ್ ಹಾಜರಿದ್ದರು.

ಅತ್ಯಾಚಾರ ಆರೋಪಿ ಪೇದೆ ಸೇರಿ ಇಬ್ಬರು ಕಾನ್‌ಸ್ಟೇಬಲ್‌ಗಳ ಅಮಾನತು

ಚಾಮರಾಜನಗರ, ಜೂ.30 (ಎಸ್‌ಎಸ್)– ಅತ್ಯಾಚಾರ ಆರೋಪ ಹಾಗೂ ಶಿಸ್ತು ಉಲ್ಲಂಘನೆ ಹಿನ್ನೆಲೆಯಲ್ಲಿ ಚಾಮರಾಜನಗರದ ಇಬ್ಬರು ಪೊಲೀಸ್ ಕಾನ್‌ಸ್ಟೇಬಲ್‌ಗಳನ್ನು ಅಮಾನತುಗೊಳಿಸಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಪಿ. ಶಿವಕುಮಾರ್ ಆದೇಶ ಹೊರಡಿಸಿದ್ದಾರೆ.

ಚಾಮರಾಜನಗರ ಪಟ್ಟಣ ಪೊಲೀಸ್ ಠಾಣೆಯ ಎಸ್. ಶಂಕರ್ ಹಾಗೂ ಡಿವೈಎಸ್ಪಿ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಪಿ. ನವೀನ್ ಅಮಾನತುಗೊಂಡವರು.

ಯಳಂದೂರು ತಾಲೂಕಿನ ಗುಂಬಳ್ಳಿಯ ವಿವಾಹಿತೆಯೊಬ್ಬಳನ್ನು ಮದುವೆಯಾಗುವುದಾಗಿ ನಂಬಿಸಿ ಅತ್ಯಾಚಾರ ಎಸಗಿರುವುದಲ್ಲದೆ ಕೊಲೆ ಬೆದರಿಕೆ ಹಾಕಿದ ಆರೋಪವನ್ನೂ ಎದುರಿಸುತ್ತಿರುವ ಪೇದೆ ಎಸ್.ಶಂಕರ್ ಹಾಗೂ ರಜೆಯನ್ನೂ ಹಾಕದೆ ಅನಧಿಕೃತವಾಗಿ ಕರ್ತವ್ಯಕ್ಕೆ ಗೈರುಹಾಜರಾದ ಕಾನ್‌ಸ್ಟೇಬಲ್ ಕೆ. ನವೀನ್ ಅವರನ್ನು ಅಮಾನತು ಮಾಡಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಗುಂಡ್ಲುಪೇಟೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘಕ್ಕೆ ಪುನರಾಯ್ಕೆ



ಗುಂಡ್ಲುಪೇಟೆ, ಜೂ.30(ಸೋಮ್.ಜಿ)– ಇಲ್ಲಿನ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘಕ್ಕೆ ಪದಾಧಿಕಾರಿಗಳು ಪುನರಾಯ್ಕೆಯಾಗಿದ್ದಾರೆ. ಪಟ್ಟಣದ ಪ್ರವಾಸಿ ಮಂದಿರದಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ದೇವರಾಜು ಕಪ್ಪಸೋಗೆ, ಪ್ರಧಾನ ಕಾರ್ಯದರ್ಶಿ ಗೌಡಹಳ್ಳಿ ಮಹೇಶ್, ರಾಜ್ಯ ಸಮಿತಿ ಸದಸ್ಯ ಗೂಳೀಪುರ ನಂದೀಶ್ ಸಮ್ಮುಖದಲ್ಲಿ ನೂತನ ಪದಾಧಿಕಾರಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

2022–25ನೇ ಸಾಲಿಗೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾಗಿ ಕನ್ನಡಪ್ರಭ ವರದಿಗಾರ ರಂಗೂಪುರ ಶಿವಕುಮಾರ್(ರಂಶಿ), ಉಪಾಧ್ಯಕ್ಷರಾಗಿ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ತಾಲೂಕು ವರದಿಗಾರ ಸೋಮಶೇಖರ್, ಪ್ರಧಾನ ಕಾರ್ಯದರ್ಶಿಯಾಗಿ ವಿಜಯ ಕರ್ನಾಟಕ ವರದಿಗಾರ ಮಡಹಳ್ಳಿ ಮಹೇಶ್ ಕಾರ್ಯದರ್ಶಿಯಾಗಿ ಪ್ರಜಾನುಡಿ ವರದಿಗಾರ ಎನ್.ರಾಜೇಶ್ ಭಟ್ಟ, ಖಜಾಂಚಿಯಾಗಿ ಪ್ರಜಾವಾಣಿ ವರದಿಗಾರ ಎಂ.ಮಲ್ಲೇಶ್ ಆಯ್ಕೆಯಾಗಿದ್ದಾರೆ.

ಕಾರ್ಯಕಾರಿ ಸಮಿತಿ ನಿರ್ದೇಶಕರಾಗಿ 'ಮೈಸೂರು ಮಿತ್ರ' ಬೇಗೂರು ವರದಿಗಾರ ಎಚ್.ವಿ.ನಾಗೇಶ್, ಉದಯವಾಣಿ ವರದಿಗಾರ ಎಂ.ಬಸವರಾಜು, ಮನುಶ್ಯಾನ್‌ಭೋಗ್, ಆಂದೋಲನ ಪ್ರತಿನಿಧಿ ಹೆಚ್.ಎಸ್.ನಂಜಪ್ಪ, ಹಲೋ ಮೈಸೂರು ವರದಿಗಾರ ಹೆಚ್.ಆರ್.ರಾಜಗೋಪಾಲ್, ವಿಜಯ ಕರ್ನಾಟಕ ವರದಿಗಾರ ಚಂದ್ರುಲಕ್ಕೂರು, ಆಂದೋಲನ ವರದಿಗಾರ ಶೇಖರ್‌ಬೇಗೂರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪ್ರಧಾನ ಕಾರ್ಯದರ್ಶಿ ಗೌಡಹಳ್ಳಿಮಹೇಶ್, ರಾಜ್ಯ ಸಮಿತಿ ಸದಸ್ಯ ಗೂಳೀಪುರ ನಂದೀಶ್, ಹಿರಿಯ ಪತ್ರಕರ್ತ ವಿ.ಆರ್.ಸುಬ್ಬುರಾವ್ ಮಾತನಾಡಿ ಶುಭ ಹಾರೈಸಿದರು.

ಬಿಳಿಗಿರಿರಂಗನ ಬೆಟ್ಟದ ದೇವಾಲಯದ ಗುಂಡಿಯಲ್ಲಿ 35.59 ಲಕ್ಷ ಹಣ ಸಂಗ್ರಹ



ಯಳಂದೂರು, ಜೂ.30(ವಿ.ನಾಗರಾಜು)– ಚಾಮರಾಜನಗರ ಜಿಲ್ಲೆಯ ಪ್ರಸಿದ್ಧ ಧಾರ್ಮಿಕ ಕೇಂದ್ರಗಳಲ್ಲಿ ಒಂದಾದ ಯಳಂದೂರು ತಾಲೂಕಿನ ಬಿಳಿಗಿರಿರಂಗನ ಬೆಟ್ಟದ ಬಿಳಿಗಿರಿರಂಗನಾಥಸ್ವಾಮಿ ದೇವಾಲಯದಲ್ಲಿ ಬುಧವಾರ ಹುಂಡಿಯ ಹಣ ಎಣಿಕೆ ಬಿಗಿ ಭದ್ರತೆಯಲ್ಲಿ ನಡೆಯಿತು.

ಬೆಳಿಗ್ಗೆಯಿಂದಲೇ ಹಣ ಎಣಿಕೆ ತಹಸೀಲ್ದಾರ್ ನೇತೃತ್ವದಲ್ಲಿ ನಡೆಯಿತು. ಒಟ್ಟು 35,59,990 ರೂ. ಹಣ ಸಂಗ್ರಹವಾಗಿದೆ.

ಈ ಹಣವನ್ನು ಕಾವೇರಿ ಬ್ಯಾಂಕ್ ನಲ್ಲಿ ಠೇವಣಿ ಇರಿಸಲಾಯಿತು. ಈ ಸಂದರ್ಭದಲ್ಲಿ ಉಪ ತಹಸೀಲ್ದಾರ್ ಶಿವರಾಜು, ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಮೋಹನ್ ಕುಮಾರ್ ಕಂದಾಯ ಇಲಾಖೆಯ ಅಧಿಕಾರಿ ಶೋಭಾವತಿ,.ಪುಷ್ಪಶ್ರೀ. ಗ್ರಾಮಲೆಕ್ಕಿಗರಾದ ಅನಿಲ್, ಚಂಗಚಹಳ್ಳಿ ಮಹದೇವಸ್ವಾಮಿ. ಪೊಲೀಸ್ ಇಲಾಖೆಯ ಮುಖ್ಯಪೇದೆ ಮುರಳಿಧರ್, ಹಾಗೂ ದೇವಾಲಯದ ಅರ್ಚಕರು, ಹಾಗೂ ಸಿಬ್ಬಂದಿ ವರ್ಗ ಹಾಜರಿದ್ದರು.

ಇಂದಿನಿಂದ ಪಾಪು 65 ದಲಿತ ಚಳವಳಿಯ ಪಯಣ



ಚಾಮರಾಜನಗರ, ಜೂ.30(ಎಸ್‌ಎಸ್)– ನಗರದ ಜೆ.ಹೆಚ್. ಪಟೇಲ್ ಸಭಾಂಗಣದಲ್ಲಿ ಜು.1 ಮತ್ತು 2 ರಂದು ದಲಿತ ಮತ್ತು ಪ್ರಗತಿಪರ ಸಂಘಟನೆಗಳ ವತಿಯಿಂದ ಪಾಪು 65– ದಲಿತ ಚಳವಳಿಯ ಪಯಣ ಕಾರ್ಯಕ್ರಮ ನಡೆಯಲಿದೆ. ಜು.1ರಂದು ಬೆಳಗ್ಗೆ 11 ಗಂಟೆಗೆ ಕಾರ್ಯಕ್ರಮ ಉದ್ಘಾಟನೆಗೊಳ್ಳಲಿದೆ. ಡಾ. ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಸಚಿವ ವಿ.ಸೋಮಣ್ಣ, ಸಂಸದ ವಿ.ಶ್ರೀನಿವಾಸ ಪ್ರಸಾದ್, ಡಾ.ಚಿ.ನಾ. ರಾಮು, ಜಿ.ಎಸ್.ನಂಜುಂಡಸ್ವಾಮಿ, ಡಾ.ವಿ.ಮುನಿವೆಂಕಟಪ್ಪ ಅವರುಗಳು ಪಾಲ್ಗೊಳ್ಳಲಿದ್ದಾರೆ. ಮಧ್ಯಾಹ್ನ 12ಕ್ಕೆ ವಿಚಾರಗೋಷ್ಠಿ, ಮಧ್ಯಾಹ್ನ 3ಕ್ಕೆ ಶ್ರೀ ಅಂಬಯ್ಯ ನುಲಿಯವರಿಂದ ವಚನ ಸಂಗೀತ ಗಾಯನ ನಡೆಯಲಿದೆ. ಸಂಜೆ 6ಕ್ಕೆ ಹಾಸ್ಯ ಸಂಜೆ ಆಯೋಜಿಸಲಾಗಿದೆ. ಮಿಮಿಕ್ರಿ ಗೋಪಿ, ಟೆನ್ನಿಸ್ ಕೃಷ್ಣ, ಮೈಸೂರು ಆನಂದ್, ಬೌ ಬೌ ಬಿರಿಯಾನಿ ಜಯರಾಮು ಪಾಲ್ಗೊಳ್ಳಲಿದ್ದಾರೆ. ಜು.2 ರಂದು ಬೆಳಗ್ಗೆ 10.30ಕ್ಕೆ ಜಿಲ್ಲಾ ಕಲಾವಿದರ ಸಂಗಮ ನಡೆಯಲಿದೆ. ಮಧ್ಯಾಹ್ನ 3ಕ್ಕೆ ಗೋಷ್ಠಿ ನಡೆಯಲಿದೆ. ಸಂಜೆ 4ಕ್ಕೆ ಸಮಾರೋಪ ಸಮಾರಂಭ ನಡೆಯಲಿದೆ.

ತಾಪಂ ಮಾಜಿ ಅಧ್ಯಕ್ಷೆ ಸುಂದರಮ್ಮ ನಿಧನ



ಯಳಂದೂರು ಜೂ.30(ವಿ.ನಾಗರಾಜು)– ಕೆಸ್ತೂರು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷೆ ಸುಂದರಮ್ಮ ವೀರನಾಯ್ಕ (55) ಬುಧವಾರ ಅನಾರೋಗ್ಯದಿಂದ ಸ್ವಗೃಹದಲ್ಲಿ ನಿಧನರಾದರು.

ಪತಿ ವೀರನಾಯಕ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಅವರ ತೋಟದ ಜಮೀನಿನಲ್ಲಿ ಗುರುವಾರ ನೆರವೇರಿತು. ಸುಂದರಮ್ಮ ನಿಧನಕ್ಕೆ ನಿಧನಕ್ಕೆ ಸಂಸದ ವಿ.ಶ್ರೀನಿವಾಸಪ್ರಸಾದ್, ಶಾಸಕರಾದ ಪುಟ್ಟರಂಗಶೆಟ್ಟಿ, ಎನ್.ಮಹೇಶ್, ನಿಗಮ ಮಂಡಳಿ ಅಧ್ಯಕ್ಷ ರಾಮಚಂದ್ರು, ಕೆಪಿಸಿಸಿ ಕಾರ್ಯಧ್ಯಕ್ಷ ಧ್ರುವನಾರಾಯಣ, ಮಾಜಿ ಶಾಸಕರುಗಳಾದ ಜಿ.ಎನ್.ನಂಜುಂಡಸ್ವಾಮಿ, ಜಯಣ್ಣ, ಎ.ಆರ್.ಕೃಷ್ಣಮೂರ್ತಿ, ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ರಾಚಯ್ಯ, ಮಾಜಿ ಜಿಪಂ ಸದಸ್ಯರಾದ ಜೆ.ಯೋಗೇಶ್, ಉಮಾವತಿ ಹಾಗೂ ಕಂದಹಳ್ಳಿ ಮಹೇಶ್ ಕುಮಾರ್, ಅಗರ ವೆಂಕಟೇಶ್, ಎಂಡಿಸಿಸಿ ಬ್ಯಾಂಕ್ ಡೈರೆಕ್ಟರ್ ಜಯರಾಂ ಸಂತಾಪ ಸೂಚಿಸಿದ್ದಾರೆ.

ಅಬ್ದುಲ್ ರೆಹಮಾನ್



ಚಾಮರಾಜನಗರ, ಜೂ.30– ತಾಲೂಕಿನ ಬದನಗುಪ್ಪೆ ಗ್ರಾಮದ ನಿವಾಸಿ ನಿವೃತ್ತ ಗ್ರಾಮ ಲೆಕ್ಕಾಧಿಕಾರಿ ಅಬ್ದುಲ್ ರೆಹಮಾನ್(70) ಹೃದಯಾಘಾತದಿಂದ ಗುರುವಾರ ಮುಂಜಾನೆ ನಿಧನರಾದರು. ಅಂತ್ಯಕ್ರಿಯೆ ನಂಜನಗೂಡು ತಾಲೂಕಿನ ಕವಲಂದೆ ಗ್ರಾಮದಲ್ಲಿ ಗುರುವಾರ ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ಮಹಾರಾಷ್ಟ್ರದ ನೂತನ ಮುಖ್ಯಮಂತ್ರಿ

ರಾಜಭವನದಲ್ಲಿ ಇಂದು ಸಂಜೆ ನಡೆದ ಕಾರ್ಯಕ್ರಮದಲ್ಲಿ ಏಕನಾಥ್ ಶಿಂಧೆ ನೂತನ ಮುಖ್ಯಮಂತ್ರಿಯಾಗಿ, ಬಿಜೆಪಿಯ ದೇವೇಂದ್ರ ಫಡ್ನವೀಸ್ ಉಪ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ರಾಜ್ಯಪಾಲ ಭಗತ್ ಸಿಂಗ್ ಕೋಶ್ಯಾರಿ ಪ್ರಮಾಣ ವಚನ ಬೋಧಿಸಿದರು. ಈ ಮೂಲಕ ಒಂದು ಕಾಲದಲ್ಲಿ ಆಟೋ ಡ್ರೈವರ್ ಆಗಿದ್ದ ಏಕನಾಥ್ ಶಿಂಧೆ, ಶಿವಸೇನಾ ಮುಖ್ಯಸ್ಥ ಹಾಗೂ ತನ್ನ ಗುರು ಉದ್ಧವ್ ಠಾಕ್ರೆಯನ್ನು ರಾಜಕಾರಣದಲ್ಲಿ ಹಿಂದಿಕ್ಕಿ ಇದೀಗ ಮಹಾರಾಷ್ಟ್ರದ ಸಿಎಂ ಆಗಿ ಹೊರ ಹೊಮ್ಮಿದ್ದಾರೆ. ನಾಲ್ಕು ಬಾರಿ ಶಾಸಕರು, ಎರಡು ಬಾರಿ ಸಚಿವರಾಗಿದ್ದ ಶಿಂಧೆ, ಜನ ಹಾಗೂ ಕಾರ್ಯಕರ್ತರ ಸಂಘಟಿಸುವ ಕೌಶಲ್ಯದೊಂದಿಗೆ ಹಂತ ಹಂತವಾಗಿ ರಾಜಕೀಯದಲ್ಲಿ ಉನ್ನತ ಹುದ್ದೆಗೇರುವಲ್ಲಿ ಯಶಸ್ವಿಯಾಗಿದ್ದಾರೆ.

ಗುರುವಾರ ಮಧ್ಯಾಹ್ನ ಶಿಂಧೆ ಮತ್ತು ಫಡ್ನವೀಸ್ ಮಹಾರಾಷ್ಟ್ರ ರಾಜ್ಯಪಾಲ ಭಗತ್ ಸಿಂಗ್ ಕೊಶ್ಯಾರಿ ಅವರನ್ನು ಭೇಟಿ ಮಾಡಿ ಸರ್ಕಾರ ರಚಿಸುವ ಹಕ್ಕು ಮಂಡಿಸಿದ್ದರು. ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಫಡ್ನವೀಸ್, ಬಿಜೆಪಿಯನ್ನು ಅಧಿಕಾರದಿಂದ ದೂರವಿರಿಸಲು 2019ರಲ್ಲಿ ಕಾಂಗ್ರೆಸ್ ಮತ್ತು ಎನ್‌ಸಿಪಿ ಜೊತೆ ಕೈಜೋಡಿಸುವ ಮೂಲಕ ಶಿವಸೇನೆಯು ಸಾರ್ವಜನಿಕ ಜನಾದೇಶವನ್ನು ಅವಮಾನಿಸಿದೆ. ಮಹಾ ವಿಕಾಸ್ ಅಘಾಡಿ ಸರ್ಕಾರದ ಆಳ್ವಿಕೆಯಲ್ಲಿ ಭ್ರಷ್ಟಾಚಾರ ನಡೆದಿದೆ. ಅದರ ಪರಿಣಾಮ ಇಬ್ಬರು ನಾಯಕರು ಜೈಲಿನಲ್ಲಿದ್ದಾರೆ. ಶಿಂಧೆ ನೇತೃತ್ವದ ಸರ್ಕಾರದ ಭಾಗವಾಗುವುದಿಲ್ಲ, ಆದರೆ ಹೊರಗಿನಿಂದ ಸರ್ಕಾರಕ್ಕೆ ಎಲ್ಲಾ ಬೆಂಬಲವನ್ನು ನೀಡುವುದಾಗಿ ಫಡ್ನವೀಸ್ ಹೇಳಿದ್ದರು. ಫಡ್ನವೀಸ್ ಅವರು ಹೀಗೆ ಹೇಳಿದ ಬೆನ್ನ ಹಿಂದೆಯೇ ಪಕ್ಷದ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಫಡ್ನವೀಸ್ ಮಹಾ ಸರ್ಕಾರದ ಭಾಗವಾಗಬೇಕೆಂದು ಬಿಜೆಪಿ ವರಿಷ್ಠ ಮಂಡಳಿ ಬಯಸಿದೆ. ನಾವು ಅವರಲ್ಲಿ ವೈಯಕ್ತಿಕ ಮನವಿ ಮಾಡಿದ್ದೇವೆ ಎಂದು ಹೇಳಿದ್ದರು. ಅಮಿತ್ ಶಾ, ನಡ್ಡಾ ಮನವಿಗೆ ಫಡ್ನವೀಸ್ ಒಪ್ಪಿದ್ದಾರೆ. ಅವರು ಸರ್ಕಾರದ ಭಾಗವಾಗುವುದಾಗಿ ಟ್ವೀಟ್ ಮಾಡಿದ್ದರು. ಇದು ಬಾಳಾಸಾಹೇಬ್ ಠಾಕ್ರೆ ಮತ್ತು ಧರ್ಮವೀರ ಆನಂದ್ ದಿಘೆ ಅವರ ಸಿದ್ಧಾಂತದ ವಿಜಯವಾಗಿದೆ. ನಮ್ಮ ಸರ್ಕಾರ ಸಾಮಾನ್ಯ ಜನರ ಹಿತಾಸಕ್ತಿ ಮತ್ತು ರಾಜ್ಯದ ಅಭಿವೃದ್ಧಿಗಾಗಿ ಕೆಲಸ ಮಾಡುತ್ತದೆ ಎಂದು ಶಿಂಧೆ ಪ್ರಮಾಣ ವಚನ ಸ್ವೀಕರಿಸಿದ ನಂತರ ಹೇಳಿದರು. ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಏಕನಾಥ್ ಶಿಂಧೆ ಮತ್ತು ಫಡ್ನವೀಸ್ ಅವರನ್ನು ಪ್ರಧಾನಿ ನರೇಂದ್ರ ಮೋದಿ ಅಭಿನಂದಿಸಿದ್ದಾರೆ.

ಮಹಾರಾಷ್ಟ್ರ ಸಿಎಂ ಆಗಿ ಪ್ರಮಾಣ ವಚನ ಸ್ವೀಕರಿಸಿದ ಏಕನಾಥ್ ಶಿಂಧೆಜೀ ಅವರನ್ನು ನಾನು ಅಭಿನಂದಿಸಲು ಬಯಸುತ್ತೇನೆ. ತಳಮಟ್ಟದ ನಾಯಕ, ಅವರ ಶ್ರೀಮಂತ ರಾಜಕೀಯ, ಶಾಸಕಾಂಗ ಮತ್ತು ಆಡಳಿತಾತ್ಮಕ ಅನುಭವವನ್ನು ತಮ್ಮೊಂದಿಗೆ ತರುತ್ತಾರೆ. ಮಹಾರಾಷ್ಟ್ರವನ್ನು ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯುವ ನಿಟ್ಟಿನಲ್ಲಿ ಅವರು ಕೆಲಸ ಮಾಡುತ್ತಾರೆ ಎಂಬ ವಿಶ್ವಾಸ ನನಗಿದೆ ಎಂದು ಮೋದಿ ಟ್ವೀಟ್ ಮಾಡಿದ್ದಾರೆ.

ಆಟೋರಾಜ ಈಗ ಮಹಾರಾಷ್ಟ್ರ ಮುಖ್ಯಮಂತ್ರಿ!

ಸಚಿವರಾಗಿ ಕೆಲಸ ಮಾಡಿದ್ದರು. 1964ರ ಫೆ.9ರಂದು ಸತಾರದ ಜಾವಳಿ ತಾಲೂಕಿನಲ್ಲಿ ಮರಾಠಾ ಸಮುದಾಯದಲ್ಲಿ ಏಕನಾಥ್ ಸಂಭಾಜಿ ಶಿಂಧೆ ಜನಿಸಿದರು. ಪದವಿ ಮುಗಿಸುವುದಕ್ಕೂ ಮುನ್ನವೇ ಕಾಲೇಜು ತೊರೆದಿದ್ದ ಶಿಂಧೆ, ಮುಂಬಯಿ ಸಮೀಪದ ಥಾಣೆಯಲ್ಲಿ ಆಟೋ ಡ್ರೈವರ್ ಆಗಿ ಕೆಲಸ ಮಾಡಿದ್ದರು. ಮೂಲತಃ ಪಶ್ಚಿಮ ಮಹಾರಾಷ್ಟ್ರದ ಸತಾರದವರಾಗಿರುವ ಶಿಂಧೆ, 1966ರಲ್ಲಿ ಬಾಳಾ ಸಾಹೇಬ್ ಠಾಕ್ರೆ ಅವರಿಂದ ಪ್ರಭಾವಿತರಾಗಿ ಶಿವಸೇನೆಗೆ ಸೇರಿದ್ದರು. ಬಾಳಾ ಠಾಕ್ರೆಯವರ ಮರಾಠಿ ಅಸ್ಮಿತೆ ಹಾಗೂ ಹಿಂದುತ್ವದ ಪ್ರಚಾರಕ್ಕೆ ಮಾರು ಹೋಗಿದ್ದ ಶಿಂಧೆ, ಬಳಿಕ ಥಾಣೆಯಲ್ಲಿ ಶಿವಸೇನೆಯನ್ನು ಕಟ್ಟುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಬಾಳಾ ಸಾಹೇಬ್ ಠಾಕ್ರೆ ಅವರ ಗರಡಿಯಲ್ಲಿ ಪಳಗಿದ್ದ ಶಿಂಧೆ, ಅವರಂತೆ ಪ್ರಬಲ ಹಿಂದುತ್ವದ ಪ್ರತಿಪಾದಕರೂ ಹೌದು. ಮರಾಠಿ, ಹಿಂದುತ್ವದ ವಿಚಾರ ಬಂದಾಗ ಅಕ್ರಮಣಕಾರಿಯಾಗಿ ಬೀದಿಗೆ ಇಳಿದು ಪ್ರತಿಭಟಿಸುತ್ತಿದ್ದರು. ತಮ್ಮ ಅಕ್ರಮಣಕಾರಿ ವರ್ತನೆಗಳಿಂದಲೇ ಜನರ ಮನಸ್ಸಲ್ಲಿ ಸ್ಥಾನ ಪಡೆದ ಶಿಂಧೆ, ಬಾಳಾ ಠಾಕ್ರೆಯ ಅವರ ನೀಲಿಗಣ್ಣಿನ ಹುಡುಗನಾಗಿ ಗುರುತಿಸಿಕೊಂಡಿದ್ದರು. ಥಾಣೆ ಪಾಲಿಕೆ ಚುನಾವಣೆಯಲ್ಲಿ ಸ್ಪರ್ಧಿಸಿ ಮೊದಲ ಪ್ರಯತ್ನದಲ್ಲೇ ಕಾರ್ಪೊರೇಟರ್ ಆಗಿ ಆಯ್ಕೆಯಾದರು. 2004 ಕೊಪ್ರಿ-ಪಚ್ಪಾಖಾಡಿ ವಿಧಾನಸಭೆ ಕ್ಷೇತ್ರದಿಂದ ಸ್ಪರ್ಧೆ ಮಾಡಿ ವಿಧಾನಸಭೆಗೆ ಪ್ರವೇಶ ಮಾಡಿದ ಶಿಂಧೆ ಸತತ ನಾಲ್ಕನೇ ಬಾರಿ ಗೆದ್ದು, ಇದೀಗ ಮಹಾರಾಷ್ಟ್ರದ ಮುಖ್ಯ ಮಂತ್ರಿಯಾಗಿದ್ದಾರೆ. 2005ರಲ್ಲಿ ಥಾಣೆ ಜಿಲ್ಲೆಯ ಶಿವಸೇನೆಯ ಅಧ್ಯಕ್ಷರಾಗಿದ್ದ ಶಿಂಧೆ, 2014ರಲ್ಲಿ ಕೆಲ ಅವಧಿಗೆ ಮಹಾರಾಷ್ಟ್ರ ವಿರೋಧ ಪಕ್ಷದ ನಾಯಕನಾಗಿಯೂ ಕಾರ್ಯ ನಿರ್ವಹಿಸಿದ್ದರು.

ಕಾಮಗಾರಿ ಪರಿಶೀಲನೆ

ದೇವಸ್ಥಾನದ ಕಟ್ಟೆ ಹೂಳು ತೆಗೆಯುವುದು ಮತ್ತು ಅಭಿವೃದ್ಧಿಪಡಿ ಸುವುದು. ಜಲಸಂರಕ್ಷಣೆ ಮತ್ತು ಜಲ ಮೂಲಗಳ ಪುನಶ್ಚೇತನಕ್ಕಾಗಿ ಜೆಎಸ್‌ಎ ಯೋಜನೆ ಅಡಿಯಲ್ಲಿರುವ ಕೈಗೊಂಡಿರುವ ಕ್ರಮಗಳ ಬಗ್ಗೆ ಅಧಿಕಾರಿಗಳು ಸಚಿ ವರು ಮತ್ತು ನಿಯೋಗಕ್ಕೆ ವಿವರಣೆ ನೀಡಿದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಕೇಂದ್ರ ಜಲಶಕ್ತಿ ಮತ್ತು ಬುಡಕಟ್ಟು ವ್ಯವಹಾರಗಳ ರಾಜ್ಯ ಸಚಿವ ಬಿಶ್ವೇಶ್ವರ ಟುಡು, ಜಲಜೀವನ್ ಮಿಷನ್‌ನ ಮುಖ್ಯ ಉದ್ದೇಶವೇ ನೀರಿನ ಸಂರಕ್ಷಣೆ ಮತ್ತು ಮಳೆ ನೀರು ಕೊಯ್ಲು ರಚನೆ, ನಿರ್ವಹಣೆ, ಸಾಂಪ್ರದಾಯಿಕ ಮತ್ತು ಇತರೆ ಜಲಮೂಲಗಳು, ಕೆರೆ ಕಟ್ಟೆಗಳ ನವೀಕರಣ, ಮರುಬಳಕೆಯ ಮೇಲೆ ಕೇಂದ್ರೀಕರಿಸಿದ ನೀರಿನ ಸಂರಕ್ಷಣೆಯಾಗಿದೆ ಎಂದು ಹೇಳಿದರು. ಕೊಳವೆಬಾವಿಗಳ ಮರುಪೂರಣ, ಜಲಾನಯನ ಅಭಿವೃದ್ಧಿ, ಅರಣ್ಯೀಕರಣ ಯೋಜನೆಯ ಮುಖ್ಯ ಉದ್ದೇಶವಾಗಿದೆ ಎಂದರು. ನಡೆಯುತ್ತಿರುವ ಕಾಮಗಾರಿಗಳ ಪ್ರಗತಿಗೆ ತೃಪ್ತಿ ವ್ಯಕ್ತಪಡಿಸಿದ ತುಡು, ಮಹಾತ್ಮ ಗಾಂಧಿ ರಾಷ್ಟ್ರೀಯ. ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ (ಮನರೇಗಾ) ಬೆಂಬಲದೊಂದಿಗೆ ಜಲಶಕ್ತಿ ಅಭಿಯಾನದಡಿ ನಡೆಯುತ್ತಿರುವ ಎಲ್ಲಾ ಕಾಮಗಾರಿಗಳ ಪ್ರಗತಿಯನ್ನು ಪರಿಶೀಲಿಸಲು ನಿಯೋಗವು ಎರಡು ದಿನಗಳ ಕಾಲ ರಾಜ್ಯಕ್ಕೆ ಭೇಟಿ ನೀಡಿದ್ದು, ಸಮಾಲೋಚನಾ ಸಮಿತಿಯು ಜಲಶಕ್ತಿ ಅಭಿಯಾನ ಅಡಿಯಲ್ಲಿ ಕೈಗೊಳ್ಳಲಾಗುತ್ತಿರುವ ಕಾಮಗಾರಿಗಳ ಕುರಿತು ಸ್ಥಳೀಯ ಜನರಿಗೆ ಪ್ರಯೋಜನ ಆಗುತ್ತಿರುವ ಬಗ್ಗೆ ಅಧ್ಯಯನ ಮಾಡುತ್ತಿದೆ ಎಂದು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಗ್ರಾಮೀಣ ಜೀವನೋಪಾಯವನ್ನು ಸುಧಾರಿಸಲು ಮತ್ತು ಅತ್ಯುತ್ತಮ ನೀರಿನ ಸಂರಕ್ಷಣೆ ಮತ್ತು ಕೊಯ್ಲು ವಿಧಾನಗಳನ್ನು ಜಾರಿಗೆ ತರಲು ನಿರ್ಧರಿಸಿದ್ದಾರೆ. ಅವರ ಮತ್ತು ಸರ್ಕಾರದ ಆಶಯದಂತೆ ನೀರಿನ ಪುನರುಜ್ಜೀವನಕ್ಕಾಗಿ ದೇಶದ ಪ್ರತಿ ಜಿಲ್ಲೆಯಲ್ಲಿ 50 ಕೆರೆ-ಕಟ್ಟೆಗಳ ಪುನರುಜ್ಜೀವನ ಮಾಡಲು ನಿರ್ಧರಿಸಲಾಗಿದೆ. ಭಾರತ ಸ್ವಾತಂತ್ರ್ಯದ 75 ನೇ ಅಮೃತ ಮಹೋತ್ಸವ ವರ್ಷಾಚರಣೆ ಸಂದರ್ಭದಲ್ಲಿ ಸಮುದ್ರಕ್ಕೆ ಹರಿದುಹೋಗುತ್ತಿರುವ ನೀರನ್ನು ಸಂಗ್ರಹಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುವುದು ಎಂದು ಎಂದು ತಿಳಿಸಿದರು. ದೇಶದ ಹಲವೆಡೆ, ಅದರಲ್ಲೂ ವಿಶೇಷವಾಗಿ ಮಳೆ ಕೊರತೆ ಇರುವ ಪ್ರದೇಶಗಳಲ್ಲಿ ಅಂತರ್ಜಲ ಮಟ್ಟ ಕುಸಿಯುತ್ತಿರುವ ವರದಿಗಳನ್ನು ಉಲ್ಲೇಖಿಸಿದ ಟುಡು, ಸಣ್ಣಪುಟ್ಟ ಕೆರೆ ಕಟ್ಟೆಗಳು ಸೇರಿದಂತೆ ಎಲ್ಲಾ ಜಲಮೂಲಗಳನ್ನು ಪುನರುಜ್ಜೀವನಗೊಳಿಸುವ ಮೂಲಕ ಅಂತರ್ಜಲ ಮಟ್ಟವನ್ನು ಹೆಚ್ಚಿಸಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು. ಅಲ್ಲದೆ, ಮಳೆ ನೀರನ್ನು ಹಿಡಿದಿಟ್ಟುಕೊಳ್ಳಲು ಮತ್ತು ಸಂಗ್ರಹಿಸಲು ಉತ್ತಮ ಮಳೆನೀರು ಕೊಯ್ಲು ವಿಧಾನಗಳನ್ನು ಅಳವಡಿಸಲಾಗುತ್ತಿದೆ ಎಂದು ಹೇಳಿದರು.

ಕರ್ನಾಟಕದಲ್ಲಿ ಜಲಶಕ್ತಿ ಅಭಿಯಾನದಡಿ ಕರ್ನಾಟಕದಲ್ಲಿ ನಡೆಯುತ್ತಿರುವ ಕಾಮಗಾರಿಗಳ ಬಗ್ಗೆ ತೃಪ್ತಿ ಇದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಜಲಶಕ್ತಿ ಅಭಿಯಾನದಡಿ ಉತ್ತಮ ಕೆಲಸ ಮಾಡುತ್ತಿರುವ ರಾಜ್ಯಗಳ ಪೈಕಿ ಕರ್ನಾಟಕ ಚೆನ್ನಾಗಿದೆ. ಮಳೆ ಕೊರತೆ ಸಂದರ್ಭದಲ್ಲಿ ನೀರಿನ ಸಮಸ್ಯೆ ಉಂಟಾಗದಂತೆ ರಾಜ್ಯ ಸರ್ಕಾರ ಹಲವು ಕ್ರಮಗಳನ್ನು ಕೈಗೊಂಡಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇವರ ಬಾಳೆಲ್ಲಾ ಗೋಳು!

ಕಾಲು ನಡಿಗೆಯಲ್ಲೇ ಸಾಗಬೇಕಿದೆ. ಅದು ದುರ್ಗಮ ಹಾದಿಯಲ್ಲಿ. ಕಾಡು ಮೃಗಗಳ ದಾಳಿಯ ಭೀತಿಯ ನಡುವೆ ತತ್ತರಿಸಿ ಹೋಗುತ್ತಿದ್ದಾರೆ. ಅದರಲ್ಲೂ ಮಹಿಳೆಯರು, ಮಕ್ಕಳು ಹಾಗೂ ವೃದ್ಧರ ಪರಿಸ್ಥಿತಿ ಹೇಳತೀರದಾಗಿದೆ. ಅನಾರೋಗ್ಯಕ್ಕೀಡಾದವರ ಪರಿಸ್ಥಿತಿಯಂತೂ ದೇವರೇ ಬಲ್ಲ. ನಿನ್ನೆ ಸರಿರಾತ್ರಿ ಹೆರಿಗೆ ನೋವಿನಿಂದ ಗರ್ಭಿಣಿಯೊಬ್ಬರು ನರಳಿದ್ದಾರೆ. ಅವರನ್ನು ಆಸ್ಪತ್ರೆಗೆ ಸಾಗಿಸಲು ಸೂಕ್ತ ಸಾರಿಗೆ ವ್ಯವಸ್ಥೆಯಿಲ್ಲದೆ, ಕೊನೆಗೆ ಡೋಲಿಯಲ್ಲೇ ಗ್ರಾಮಸ್ಥರು ಸಾಗಿಸಿ ಆಸ್ಪತ್ರೆಗೆ ಸೇರಿಸಿ ಬಡಜೀವ ಬದುಕಿಸಿದ್ದಾರೆ. ಈ ಘಟನೆ ನಡೆದಿರುವುದು ಮಹದೇಶ್ವರ ಬೆಟ್ಟ ದಟ್ಟಾರಣ್ಯದ ದೊಡ್ಡಾಣೆ ಗ್ರಾಮದಲ್ಲಿ.

ಹೆರಿಗೆ ನೋವಿನಿಂದ ನರಳುತ್ತಿದ್ದ ತುಂಬು ಗರ್ಭಿಣಿಯನ್ನು ಗ್ರಾಮಸ್ಥರೇ 8 ಕಿಮೀ ದೂರ ಬಟ್ಟೆಯ ಡೋಲಿಯಲ್ಲಿ ಹೊತ್ತು ಸಾಗಿ ಆಸ್ಪತ್ರೆಗೆ ದಾಖಲಿಸಿದ ದಯನೀಯ ಸ್ಥಿತಿ ವರದಿಯಾಗಿದೆ. ಗ್ರಾಮದ ವಾಸಿ ತುಂಬು ಗರ್ಭಿಣಿ ಶಕುಂತಲಾ ಅವರಿಗೆ ಸರಿರಾತ್ರಿ 2 ಗಂಟೆಯಲ್ಲಿ ಹೆರಿಗೆ ನೋವು ಕಾಣಿಸಿಕೊಂಡಿದೆ. ತಕ್ಷಣ ಆಕೆಯನ್ನು ಆಸ್ಪತ್ರೆಗೆ ಕರೆದೊಯ್ಯುವ ಸಲುವಾಗಿ ಅರಣ್ಯ ಇಲಾಖೆ ಇತ್ತೀಚೆಗೆ ಆರಂಭಿಸಿರುವ ಜನವನ ಸಾರಿಗೆ ಸಿಬ್ಬಂದಿಗೆ ಗ್ರಾಮಸ್ಥರು ಕರೆ ಮಾಡಿದ್ದಾರೆ. ಆದರೆ ಅವುಗಳ ಚಾಲಕರು, ಅಧಿಕಾರಿಗಳ ಮೊಬೈಲ್ ಸ್ವಿಚ್ ಆಫ್ ಆಗಿದ್ದು, ಗ್ರಾಮಸ್ಥರು ಕಂಗಾಲಾಗಿದ್ದಾರೆ. ಕೊನೆಗೆ ದೊಡ್ಡಾಣೆಯಿಂದ ಸುಳ್ವಾಡಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಗರ್ಭಿಣಿಯನ್ನು ಡೋಲಿಯಲ್ಲಿ ಹೊತ್ತು ತಂದಿದ್ದಾರೆ. ಆರೋಗ್ಯ ಕೇಂದ್ರ ತಲುಪಲು ಇವರು ಪಟ್ಟ ಪಾಡು ಅಷ್ಟಿಷ್ಟಲ್ಲ, ದಟ್ಟಾರಣ್ಯದಲ್ಲಿ 8 ಕಿಮೀ ದೂರ ಗರ್ಭಿಣಿಯನ್ನು ಹೊತ್ತು ಚಳಿಯಲ್ಲಿ ನಡುಗುತ್ತಾ ಸಾಗಿ ಕೊನೆಗೆ ಆಸ್ಪತ್ರೆಗೆ ತಲುಪಿದ್ದಾರೆ. ಮಧ್ಯರಾತ್ರಿ 2 ಗಂಟೆಗೆ ಹೊರಟು ಬೆಳಗ್ಗೆ 6 ಗಂಟೆಗೆ ಆಸ್ಪತ್ರೆಗೆ ತಲುಪಿದ ಅವರೆಲ್ಲಾ ಸುಸ್ತಾಗಿ, ಒಂದು ಕಡೆ ಕುಳಿತು ಧಣಿವಾರಿಸಿಕೊಂಡಿದ್ದಾರೆ. ಮಹದೇಶ್ವರಬೆಟ್ಟ ಅರಣ್ಯದ ಗ್ರಾಮಸ್ಥರ ಅನುಕೂಲಕ್ಕಾಗಿ ಅರಣ್ಯ ಇಲಾಖೆ ಜನವನ ಸಾರಿಗೆ ವ್ಯವಸ್ಥೆ ಜಾರಿಗೊಳಿಸಿದೆ. ಆ ಮೂಲಕ ಗರ್ಭಿಣಿಯರು, ಅನಾರೋಗ್ಯಪೀಡಿತರು, ಶಾಲಾ-ಕಾಲೇಜು ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರ ತುರ್ತು ಬಳಕೆಗೆ ಕಲ್ಪಿಸುವುದಾಗಿ ಹೇಳಿಕೊಂಡಿದೆ. ಆದರೆ ಇಂತಹ ಸಂಕಷ್ಟಕ್ಕೆ ಜನವನ ಸಾರಿಗೆ ಸೌಲಭ್ಯ ಇದ್ದೂ ಇಲ್ಲದಂತಾಗಿದೆ. ಇನ್ನು ಮುಂದಾದರೂ ಸಂಬಂಧಪಟ್ಟ ಅರಣ್ಯ ಅಧಿಕಾರಿಗಳು ಹೊಸ ಸಾರಿಗೆ ಸೌಕರ್ಯ ಸಾರ್ಥಕವಾಗುವಂತೆ ಕ್ರಮ ಕೈಗೊಳ್ಳಲಿ ಎಂದು ದೊಡ್ಡಾಣೆ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಮೈಸೂರ್ ಸೈನ್ಸ್ ಫೌಂಡೇಷನ್‌ನ ದಶಮಾನೋತ್ಸವ ಪ್ರಯುಕ್ತ

ಜು.9ರಂದು ಮೈಸೂರಲ್ಲಿ ಸೈನ್ಸ್ ಎಕ್ಸ್‌ಪೋ

● 30ಕ್ಕೂ ಹೆಚ್ಚು ಸಂಶೋಧನಾ ಸಂಸ್ಥೆಗಳಿಂದ ವಿಜ್ಞಾನ ಪ್ರದರ್ಶನ ● ಇಸ್ರೋ ಸಂಸ್ಥೆಯ 'ಸ್ಪೇಸ್ ಆನ್ ವ್ಹೀಲ್ಸ್' ಪ್ರಮುಖ ಆಕರ್ಷಣೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಸೈನ್ಸ್ ಎಕ್ಸ್‌ಪೋನ ಪೋಸ್ಟರ್ ಅನ್ನು ಹಿರಿಯ ಪತ್ರಕರ್ತ ಎಂ.ಎಸ್.ಕಾಶಿನಾಥ್ ಬಿಡುಗಡೆ ಮಾಡಿದರು.



ಇಸ್ರೋ ಸಂಸ್ಥೆಯ 'ಸ್ಪೇಸ್ ಆನ್ ವೀಲ್ಸ್' ಬಾಹ್ಯಾಕಾಶ ಮಾದರಿ ಪ್ರದರ್ಶನದ ಬಸ್

ಮೈಸೂರು,ಜೂ.30(ಪಿಎಂ)- ಮೈಸೂರ್ ಸೈನ್ಸ್ ಫೌಂಡೇಷನ್‌ನ ದಶಮಾನೋತ್ಸವದ ಅಂಗವಾಗಿ ಜು.9ರಂದು ಸೈನ್ಸ್ ಎಕ್ಸ್‌ಪೋ (ವಿಜ್ಞಾನ ವಸ್ತು ಪ್ರದರ್ಶನ) ಹಮ್ಮಿಕೊಳ್ಳಲಾಗಿದೆ ಎಂದು ಫೌಂಡೇಷನ್‌ನ ಪ್ರಧಾನ ಕಾರ್ಯದರ್ಶಿ ಜಿ.ಬಿ.ಸಂತೋಷ್ ಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 10 ವರ್ಷಗಳ ಹಿಂದೆ 2012ರ ಜುಲೈನಲ್ಲಿ ಸಮಾನಮನಸ್ಕ ಸರ್ಕಾರಿ ಶಾಲಾ-ಕಾಲೇಜು ಶಿಕ್ಷಕರು, ಉಪನ್ಯಾಸಕರು, ಪ್ರಾಧ್ಯಾಪಕರಿಂದ ನಮ್ಮ ಫೌಂಡೇಷನ್ ಪ್ರಾರಂಭವಾಯಿತು. ವಿದ್ಯಾರ್ಥಿಗಳು ಮತ್ತು ಜನಸಾಮಾನ್ಯರಿಗೆ ವಿಜ್ಞಾನದ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಫೌಂಡೇಷನ್ ಕಾರ್ಯ ನಿರ್ವಹಿಸುತ್ತಿದ್ದು, ಇದೀಗ ದಶಮಾನೋತ್ಸವದ ಪ್ರಯುಕ್ತ ವಿಜ್ಞಾನ ವಸ್ತು ಪ್ರದರ್ಶನ ಏರ್ಪಡಿಸಲಾಗಿದೆ ಎಂದು ಹೇಳಿದರು.

ವಿಜಯನಗರದ ಸದ್ವಿದ್ಯಾ ಸೆಮಿ ರೆಸಿಡೆನ್ಷಿಯಲ್ ಪದವಿಪೂರ್ವ ಕಾಲೇಜು ಆವರಣದಲ್ಲಿ ಅಂದು ಬೆಳಗ್ಗೆ 9ರಿಂದ ಸಂಜೆ 5.30ರವರೆಗೆ ವಸ್ತು ಪ್ರದರ್ಶನ ನಡೆಯಲಿದೆ. ಅಂದು ಬೆಳಗ್ಗೆ 10ಕ್ಕೆ ಇಸ್ರೋ ಮಾಜಿ ಅಧ್ಯಕ್ಷ ಎ.ಎಸ್.ಕಿರಣ್‌ಕುಮಾರ್ ಪ್ರದರ್ಶನಕ್ಕೆ ಚಾಲನೆ ನೀಡಲಿದ್ದಾರೆ ಎಂದರು.

ಮತ್ತೊಂದು ದಿನ ಎಕ್ಸ್‌ಪೋ ವಿಸ್ತರಿಸಲು ಪ್ರಯತ್ನ ; ಜು.10ರಂದು ಸಮಾರೋಪ

ಸೈನ್ಸ್ ಎಕ್ಸ್‌ಪೋ ಅನ್ನು ಮತ್ತೊಂದು ದಿನಕ್ಕೆ ವಿಸ್ತರಿಸುವ ಪ್ರಯತ್ನ ಮಾಡಲಾಗುವುದು ಎಂದು ತಿಳಿಸಿದ ಫೌಂಡೇಷನ್‌ನ ಮಹಾ ಪೋಷಕ ಡಾ.ಟಿ.ತಿಪ್ಪೇಸ್ವಾಮಿ, ಜು.10ರಂದು ಬೆಳಗ್ಗೆ 10ಕ್ಕೆ ಯುವರಾಜ ಕಾಲೇಜಿನ ಪ್ಲಾಟಿನಂ ಜುಬಿಲಿ ಸಭಾಂಗಣದಲ್ಲಿ ಎಕ್ಸ್‌ಪೋ ಸಮಾರೋಪ ಸಮಾರಂಭ ನಡೆಯಲಿದೆ. ಇದರಲ್ಲಿ ಬಾಹ್ಯಾಕಾಶ ವಿಜ್ಞಾನಿ ಡಾ.ಟಿ.ಎಂ.ಸುರೇಶ್‌ಕುಮಾರ್ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

30ಕ್ಕೂ ಹೆಚ್ಚು ಸಂಶೋಧನಾ ಸಂಸ್ಥೆಗಳು ವಿಜ್ಞಾನ ಪ್ರದರ್ಶನ ನೀಡಲಿವೆ. ಬೆಂಗಳೂರು ಇಸ್ರೋ ಸಂಸ್ಥೆಯ 'ಸ್ಪೇಸ್ ಆನ್ ವ್ಹೀಲ್ಸ್ (ಗಾಲಿಗಳ ಮೇಲೆ ಬಾಹ್ಯಾಕಾಶ)' ಇದೇ ಮೊಟ್ಟಮೊದಲ ಬಾರಿಗೆ ಮೈಸೂರಿನಲ್ಲಿ ಪ್ರದರ್ಶನಗೊಳ್ಳುತ್ತಿದ್ದು, ಇದು ಈ ಎಕ್ಸ್‌ಪೋದ ಪ್ರಮುಖ ಆಕರ್ಷಣೆಯಾಗಿದೆ. ಇದರಲ್ಲಿ ವೋಲ್ವಾ ಬಸ್ ಬಳಸಿ ಬಾಹ್ಯಾಕಾಶಕ್ಕೆ ಸಂಬಂಧಿಸಿದ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ರಾಕೆಟ್, ಉಪಗ್ರಹಗಳ ಮಾದರಿಗಳೊಂದಿಗೆ ಅವುಗಳನ್ನು ನಿಯೋಜಿಸುವಲ್ಲಿ ಇರುವ ಒಳನೋಟಗಳನ್ನು ಇಲ್ಲಿ ಒದಗಿಸಲಾಗಿದೆ ಎಂದು ವಿವರಿಸಿದರು.

ಆರ್ಯಭಟ ಸಂಸ್ಥೆಯಿಂದ ಸಂಚಾರಿ ತಾರಾಲಯದ 3ಡಿ ವೀಡಿಯೋ ಪ್ರದರ್ಶನವಿದ್ದು, ಬಾಹ್ಯಾಕಾಶಕ್ಕೆ ಸಂಬಂಧಿಸಿದ 15 ನಿಮಿಷಗಳ 3ಡಿ ವೀಡಿಯೋ ಪ್ರದರ್ಶನ ಇದಾಗಿದೆ. ಮೈಸೂರು ವಿವಿಯ ಸಿಡಿಎಸ್‌ಎಸ್ ವತಿಯಿಂದ ಸಂಚಾರಿ ವಿಜ್ಞಾನ ಪ್ರಯೋಗಾಲಯ, ಸಿಎಫ್‌ಟಿಆರ್‌ಐನ ಸಂಶೋಧನೆಗಳ ಪ್ರದರ್ಶನ, ಬೆಂಗಳೂರು ಜವಾಹರಲಾಲ್ ನೆಹರು ಪ್ಲಾನೆಟೋರಿಯಂ ವತಿಯಿಂದ ವಿಜ್ಞಾನ ಮಾದರಿಗಳ ಪ್ರದರ್ಶನ ಸಹ ಇರಲಿದೆ ಎಂದರು.

ಯುವರಾಜ ಕಾಲೇಜಿನ ಆಹಾರ ಮತ್ತು ಪೌಷ್ಟಿಕ ವಿಭಾಗದಿಂದ ಆಹಾರ ಕಲಬೆರಕೆ ಪತ್ತೆ ಹಚ್ಚುವ ಬಗ್ಗೆ ಪ್ರಾತ್ಯಕ್ಷಿಕೆ ನೀಡುವ ಜೊತೆಗೆ ನ್ಯೂಟ್ರೀಷನ್ ಚಾರ್ಟ್ ತಯಾರಿಸಿ ನೀಡಲಿದ್ದಾರೆ. ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದಿಂದ ಆರೋಗ್ಯ ತಪಾಸಣೆ, ಅಗಸ್ತ್ಯ ಇಂಟರ್ ನ್ಯಾಷನಲ್ ಫೌಂಡೇಷನ್ ಮತ್ತು ಪ್ರಥಮ್ ಸಂಸ್ಥೆಯಿಂದ ವಿಜ್ಞಾನ ಮತ್ತು ಗಣಿತದ ಮಾದರಿಗಳ ಪ್ರದರ್ಶನ ಇರಲಿದೆ. ಜಸ್ಟ್ ರೋಬಾಟಿಕ್ಸ್ ಮತ್ತು ಟೆಕ್ನೋ ಅನ್ವೇಷಣ್ ಸಂಸ್ಥೆ ವತಿಯಿಂದ ರೋಬಾಟಿಕ್ಸ್ ತಂತ್ರಜ್ಞಾನ ಪ್ರದರ್ಶನದೊಂದಿಗೆ ರೋಬೋ ಮಾರಾಟ ಕೂಡ ಇರಲಿದೆ ಎಂದು ತಿಳಿಸಿದರು.

ಇದಲ್ಲದೆ, ಶಾರದಾವಿಲಾಸ ಫಾರ್ಮಸಿ ಕಾಲೇಜು ವತಿಯಿಂದ ಮಾತ್ರೆ ತಯಾರಿಕೆ ಬಗ್ಗೆ ಪ್ರದರ್ಶನ ಇರಲಿದೆ. ಪುಸ್ತಕ ಮಾರಾಟ ಸಂಸ್ಥೆಗಳಿಂದ ವಿಜ್ಞಾನ ಮತ್ತು ಗಣಿತ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟ ನಡೆಯಲಿದೆ. ಕ್ರಿಯಾಶೀಲ ಶಿಕ್ಷಕರು ತಯಾರಿಸಿದ ವಿಜ್ಞಾನ ಮತ್ತು ಗಣಿತ ಮಾದರಿಗಳ ಪ್ರದರ್ಶನವೂ ಇರಲಿದೆ. ಓರಿಗಾಮಿ ತಜ್ಞ ವಿ.ಎಸ್.ಎಸ್.ಶಾಸ್ತ್ರಿ ಅವರಿಂದ ಗಣಿತ ಆಟಿಕೆಗಳು ಮತ್ತು ಕಾರ್ಟೂನ್ ಚಿತ್ರ ಪ್ರದರ್ಶನ, ಶಿಕ್ಷಕರಾದ ಮೋಹನ್ ಆರಾಧ್ಯ ಮತ್ತು ಮುರಳಿ ರಚಿಸಿರುವ ವಿಜ್ಞಾನಿಗಳು ಮತ್ತು ಪ್ರಕೃತಿಯ ಚಿತ್ರಗಳ ಪ್ರದರ್ಶನ ಸಹ ಇರಲಿದೆ ಎಂದು ವಿವರಿಸಿದರು.

ಎಸ್.ಎನ್.ಪ್ರಸಾದ್ ಅವರಿಂದ ದೂರದರ್ಶಕಗಳ ಪ್ರದರ್ಶನ, ವಿಜ್ಞಾನ ಮತ್ತು ಗಣಿತ ಮಾದರಿಗಳು ಮತ್ತು ಪ್ರಯೋಗಗಳ ಕಿಟ್ ಪ್ರದರ್ಶನ ಮತ್ತು ಮಾರಾಟ, ಸೌರಕನ್ನಡಕಗಳ (ಸೂರ್ಯಗ್ರಹಣ ವೀಕ್ಷಿಸಲು) ಮಾರಾಟ, ಜೆಎಸ್‌ಎಸ್ ವೈದ್ಯಕೀಯ ಕಾಲೇಜು ವತಿಯಿಂದ ಮಾನವನ ಅಂಗಗಳ ಮಾದರಿಗಳ ಪ್ರದರ್ಶನ, ಪ್ರಣತಿ ಇನ್ನೋವೇಟರ್ ಸಂಸ್ಥೆಯಿಂದ ಹ್ಯಾಮ್ ರೇಡಿಯೋ ಪ್ರದರ್ಶನ ಹಾಗೂ ಪರಮಾಣು ಸಂಸ್ಥೆ ವತಿಯಿಂದ ಏರೋ ಮಾಡೆಲಿಂಗ್ ಪ್ರದರ್ಶನ ಸಹ ನಡೆಯಲಿದೆ ಎಂದು ಹೇಳಿದರು.

ಎಕ್ಸ್‌ಪೋಗೆ ಪ್ರವೇಶ ಉಚಿತ: ವಿಜ್ಞಾನ ಮತ್ತು ಗಣಿತ ಮಾದರಿ ತಯಾರಿಕೆ ಕಾರ್ಯಾಗಾರ ಹಮ್ಮಿಕೊಂಡಿದ್ದು, ಇದರಲ್ಲಿ ಮಕ್ಕಳು (ಮುಂಗಡವಾಗಿ ನೋಂದಣಿ ಮಾಡಿರಬೇಕು) ಕೆಲ ವಿಜ್ಞಾನ ಮಾದರಿ ತಯಾರಿಸಿ ಕೊಂಡೊಯ್ಯುವ ಅವಕಾಶ ಕಲ್ಪಿಸಲಾಗಿದೆ. ಡಿಸಿ ಮೋಟಾರ್, ಗಣಿತ 3ಡಿ ಮಾದರಿಗಳು ಮತ್ತು ಗಣಿತ ಗಡಿಯಾರ ತಯಾರಿಸಬಹುದು. ಇದಕ್ಕೆ ಅಗತ್ಯವಿರುವ ಸಾಮಗ್ರಿ ನೀಡಿ ತಯಾರಿಕೆಗೆ ಅಗತ್ಯ ಮಾರ್ಗದರ್ಶನ ನೀಡಲಾಗುವುದು. ಎಕ್ಸ್‌ಪೋಗೆ ಪ್ರವೇಶ ಉಚಿತವಿದ್ದು, ವಿವರಗಳಿಗೆ ಮೊ.ಸಂ. 98444 05284 ಅನ್ನು ಸಂಪರ್ಕಿಸಬಹುದು. ವಿದ್ಯಾರ್ಥಿಗಳು ಹಾಗೂ ಜನಸಾಮಾನ್ಯರು ಎಕ್ಸ್‌ಪೋನ ಪ್ರಯೋಜನ ಪಡೆದುಕೊಳ್ಳಬೇಕೆಂದು ಕೋರಿದರು. ಫೌಂಡೇಷನ್‌ನ ಮಹಾ ಪೋಷಕ ಡಾ.ಟಿ.ತಿಪ್ಪೇಸ್ವಾಮಿ, ಅಧ್ಯಕ್ಷ ಸಿ.ಕೃಷ್ಣೇಗೌಡ, ಖಜಾಂಚಿ ಎಂ.ಜಿ.ಎನ್.ಪ್ರಸಾದ್, ಸದಸ್ಯರಾದ ಸಿ.ಪುರಂದರ್, ಹೆಚ್.ವಿ. ಮುರಳೀಧರ್ ಗೋಷ್ಠಿಯಲ್ಲಿದ್ದರು.

ಇಂದಿನಿಂದ ರಾಜ್ಯಾದ್ಯಂತ ಸಿಂಗಲ್ ಯೂಸ್ ಪ್ಲಾಸ್ಟಿಕ್ ಬಳಕೆ ನಿಷೇಧ

ಬೆಂಗಳೂರು, ಜೂ.30-ಜುಲೈ 1ರಿಂದ ರಾಜ್ಯಾದ್ಯಂತ ಸಿಂಗಲ್ ಯೂಸ್ ಪ್ಲಾಸ್ಟಿಕ್ ಬಳಕೆ ಮೇಲೆ ನಿಷೇಧ ಹೇರಲಾಗುತ್ತಿದೆ.

ಜುಲೈ 1ರಿಂದ ದೇಶಾದ್ಯಂತ ಏಕ-ಬಳಕೆಯ ಪ್ಲಾಸ್ಟಿಕ್ ಮೇಲೆ ನಿಷೇಧ ಹೇರಲಾಗಿದ್ದು, ಕರ್ನಾಟಕದಲ್ಲಿ 2016ರಿಂದ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸಲಾಗಿದೆ. ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ (CPCB) ಹೊರಡಿಸಿದ ಈ ಆದೇಶವು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ (KSPCB) ಗಡಿ ಪ್ರದೇಶಗಳಲ್ಲಿ ನಿರ್ಬಂಧಗಳನ್ನು ಜಾರಿಗೊಳಿಸಲು ಹೆಚ್ಚಿನ ಬಲ ನೀಡಿದಂತಾಗಿದೆ.

KSPCB ಜುಲೈ 1 ರಿಂದ ನಿಷೇಧಿತ ವಸ್ತುಗಳ ಪಟ್ಟಿಯನ್ನು ಸಹ ಸಿದ್ಧಪಡಿಸಿದ್ದು, ಅವರು ಪ್ಲಾಸ್ಟಿಕ್‌ಗೆ ಪರ್ಯಾಯಗಳನ್ನು ಒದಗಿಸುವ ಕೆಲಸವನ್ನೂ ಮಾಡುತ್ತಿದ್ದಾರೆ. ಮಿಶ್ರಗೊಬ್ಬರ ಚೀಲಗಳು ಮತ್ತು ಬಟ್ಟೆ ಚೀಲಗಳ ಪೂರೈಕೆಗೆ ಮಂಡಳಿಯು ಈಗಾಗಲೇ ಅನುಮೋದನೆ ನೀಡಿದೆ. ಈ ಕುರಿತು ಕೆಎಸ್‌ಪಿಸಿಬಿ ಅಧ್ಯಕ್ಷ ಶಾಂತ್ ಅವ್ವೇರಹಳ್ಳಿ ತಿಮ್ಮಯ್ಯ ಅವರು ಸುದ್ದಿಗಾರರೊಂದಿಗೆ ಮಾತನಾಡಿದ್ದು, 'ನಿಷೇಧ ಆದೇಶ ಕಟ್ಟುನಿಟ್ಟಿನ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಲು, ಮಂಗಳವಾರ ಮಾರ್ಷಲ್‌ಗಳೊಂದಿಗೆ ಸಭೆ ನಡೆಸಲಾಯಿತು. ಮಾರ್ಷಲ್‌ಗಳಿಗೆ ತರಬೇತಿ ನೀಡಿ ಯಾವ ಕ್ರಮ ಕೈಗೊಳ್ಳಬೇಕು, ಯಾವ ಕಾಯ್ದೆ ಮತ್ತು ಷರತ್ತಿನ ದಂಡವನ್ನು ವಿಧಿಸಬೇಕು ಮತ್ತು ಯಾವ ಕಾಯ್ದೆಯ ಅಡಿಯಲ್ಲಿ ಉತ್ಪಾದನೆ



ಮತ್ತು ಚಿಲ್ಲರೆ ಘಟಕಗಳನ್ನು ಮುಚ್ಚಬೇಕು ಎಂದು ತಿಳಿಸಲಾಯಿತು ಎಂದರು.

ಎರಡು ಏಜೆನ್ಸಿಗಳು: ಒಂದು ಮಹಾರಾಷ್ಟ್ರದಿಂದ ಮತ್ತು ಇನ್ನೊಂದು ಅಹಮದಾಬಾದ್‌ನಿಂದ ಮಿಶ್ರಗೊಬ್ಬರ ಪ್ಲಾಸ್ಟಿಕ್ ಪೂರೈಕೆಗೆ ಅನುಮೋದನೆ

ನೀಡಲಾಗಿದೆ. ಈ ಏಜೆನ್ಸಿಗಳು ಸಿಪಿಸಿಬಿ ಮತ್ತು ಪ್ಲಾಸ್ಟಿಕ್ ಯುನಿಟ್ ಆಫ್ ಇಂಡಿಯಾದಿಂದ ಅನುಮತಿಯನ್ನು ಪಡೆದಿವೆ. ಈ ವಿಶೇಷ ಬ್ಯಾಗ್‌ಗಳು ಬಾರ್ ಕೋಡ್‌ಗಳೊಂದಿಗೆ ಬರಲಿದ್ದು, ಸ್ಕ್ಯಾನ್ ಮಾಡಿದಾಗ ಉತ್ಪಾದನಾ ಘಟಕ ಮತ್ತು ಪೂರೈಕೆದಾರರ ಸಂಪೂರ್ಣ ವಿವರಗಳನ್ನು ನೀಡುತ್ತದೆ. ಈ ಏಜೆನ್ಸಿಗಳನ್ನು ಕರ್ನಾಟಕದಲ್ಲಿಯೂ ಘಟಕಗಳನ್ನು ಸ್ಥಾಪಿಸಲು ಪ್ರೋತ್ಸಾಹಿಸಲಾಗುವುದು ಎಂದು ತಿಮ್ಮಯ್ಯ ಹೇಳಿದರು.

2016ರ ನಂತರ ನಿಷೇಧ ಜಾರಿಯಾದ ಬಳಿಕ ಹಲವು ಉತ್ಪಾದನಾ ಘಟಕಗಳ ಮೇಲೆ ದಾಳಿ ನಡೆಸಿ ಮುಚ್ಚಲಾಯಿತು. ಅದಾಗ್ಯೂ ಪ್ಲಾಸ್ಟಿಕ್ ಬಳಕೆಯಾಗುತ್ತಲೇ ಇದ್ದು, ಇದು ಮಾರಾಟಗಾರರು, ತಿನಿಸುಗಳು, ಹಣ್ಣು ಮತ್ತು ತರಕಾರಿ ಮಾರಾಟಗಾರರು ಮತ್ತು ಅಂಗಡಿಗಳಲ್ಲಿ ಕಂಡುಬರುತ್ತದೆ. ಆದ್ದರಿಂದ ಹಂತ ಹಂತವಾಗಿ ಜಾಗೃತಿ ಅಭಿಯಾನಗಳನ್ನು ಕೈಗೊಳ್ಳಬೇಕು. ಚಿಲ್ಲರೆ ಮಾರಾಟಗಾರರಿಂದ ಮೊದಲ ಬಾರಿ ಉಲ್ಲಂಘನೆಗೆ 2,000 ರೂ., ಎರಡನೇ ಬಾರಿಗೆ 5,000 ರೂ. ಮತ್ತು ಮೂರನೇ ಬಾರಿ ಉಲ್ಲಂಘನೆಗೆ 10,000 ರೂ.ಗಳ ದಂಡವನ್ನು ವಿಧಿಸುವ ಕೆಲಸ ಮಾಡುತ್ತಿದ್ದೇವೆ ಎಂದು ತಿಮ್ಮಯ್ಯ ಹೇಳಿದರು.

ಯಾವ ವಸ್ತುಗಳಿಗೆ ನಿಷೇಧ: ಇಯರ್ ಬಡ್‌ಗಳು, ಬಲೂನ್‌ಗಳು, ಕ್ಯಾಂಡಿ, ಐಸ್‌ಕ್ರೀಮ್‌ಗಳಿಗೆ ಬಳಸುವ ಪ್ಲಾಸ್ಟಿಕ್ ಕಡ್ಡಿಗಳು, ಕಟ್ಲರಿ ವಸ್ತುಗಳು - ಪ್ಲೇಟ್‌ಗಳು, ಕಪ್‌ಗಳು, ಗ್ಲಾಸ್‌ಗಳು, ಫೋರ್ಕ್ಸ್, ಸ್ಪೂನ್‌ಗಳು, ಚಾಕುಗಳು, ಟ್ರೇಗಳು, ಸ್ಟಿರರ್‌ಗಳು, ಸ್ವೀಟ್ ಬಾಕ್ಸ್, ಇನ್ವಿಟೇಶನ್ ಕಾರ್ಡ್, ಸಿಗರೇಟ್ ಪ್ಯಾಕೆಟ್‌ಗಳಿಗೆ ಬಳಸುವ ಪ್ಯಾಕೇಜಿಂಗ್ ವಸ್ತುಗಳು

ಇತರೆ ವಸ್ತುಗಳು- 100 ಮೈಕ್ರಾನ್‌ಗಿಂತ ಕಡಿಮೆ ಇರುವ PVC ಬ್ಯಾನರ್‌ಗಳು, ಅಲಂಕಾರಕ್ಕಾಗಿ ಪಾಲಿಸ್ಟೈರೀನ್, ಕ್ಯಾರಿ ಬ್ಯಾಗ್‌ಗಳು, ಅಲಂಕಾರಕ್ಕಾಗಿ ಥರ್ಮಾಕೋಲ್‌ಗಳು, ಪ್ಲಾಸ್ಟಿಕ್ ಧ್ವಜಗಳನ್ನು ನಿಷೇಧಿಸಲಾಗಿದೆ.

ಕಸಾಯಿಖಾನೆಗೆ ಸಾಗಿಸಲು ಶೆಡ್‌ನಲ್ಲಿ ಕೂಡಿದ್ದ 51 ಜಾನುವಾರು ರಕ್ಷಣೆ

ಮೈಸೂರು, ಜೂ.30(ಎಂಕೆ)- ಎನ್‌ಜಿಓ ಸಂಸ್ಥೆಯೊಂದರ ಸಹಕಾರದೊಂದಿಗೆ ಎರಡು ಪ್ರತ್ಯೇಕ ಸ್ಥಳದಲ್ಲಿ ಕಾರ್ಯಾಚರಣೆ ನಡೆಸಿದ ಪೊಲೀಸರು, ಕಸಾಯಿಖಾನೆಗೆ ಸಾಗಿಸಲು ಶೆಡ್‌ನಲ್ಲಿ ಕಟ್ಟಿಹಾಕಿದ್ದ 51 ಜಾನುವಾರುಗಳನ್ನು ರಕ್ಷಿಸಿದ್ದಾರೆ. ಗೌ ಗ್ಯಾನ್ ಫೌಂಡೇಷನ್ ಕಾರ್ಯಕರ್ತರು ನೀಡಿದ ಖಚಿತ ಮಾಹಿತಿ ಮೇರೆಗೆ ಮೈಸೂರಿನ ಬಿಎಂಶ್ರೀ ನಗರ ಹಾಗೂ ಹುಣಸೂರಿನಲ್ಲಿ ಕಾರ್ಯಾಚರಣೆ ನಡೆಸಿರುವ ಸ್ಥಳೀಯ ಪೊಲೀಸರು, ಕಸಾಯಿಖಾನೆಗೆ ಸಾಗಿಸಲು ವಿವಿಧೆಡೆಯಿಂದ ತಂದು ಕಟ್ಟಿ ಹಾಕಿರುವ ಶೆಡ್‌ಗಳ ಮೇಲೆ ದಾಳಿ ನಡೆಸಿ ಪರಿಶೀಲಿಸಿದಾಗ ಗೋವುಗಳ ಸ್ಥಿತಿ ಚಿಂತಾಜನಕ ಸ್ಥಿತಿಯಲ್ಲಿರುವುದು ಪತ್ತೆಯಾಗಿದೆ. ಎರಡು ಸ್ಥಳದಿಂದ ಕರುಗಳೂ ಸೇರಿದಂತೆ 51 ಗೋವುಗಳ ರಕ್ಷಣೆ ಮಾಡಲಾಗಿದೆ.



ಬಿಎಂಶ್ರೀನಗರ: ಮೈಸೂರಿನ ಬಿಎಂಶ್ರೀ ನಗರದ ಸರ್ಕಾರಿ ಉರ್ದು ಶಾಲೆಯ ಪಕ್ಕದ ಖಾಲಿ ಜಾಗದಲ್ಲಿ ಶೆಡ್ ಹಾಕಿಕೊಂಡು ಕರು ಹಾಗೂ ಹಸುಗಳನ್ನು ಕಟ್ಟಿ ಹಾಕಲಾಗಿತ್ತು. ಗೌ ಗ್ಯಾನ್ ಫೌಂಡೇಷನ್‌ನ ಕಾರ್ಯಕರ್ತರೊಂದಿಗೆ ಕಾರ್ಯಾಚರಣೆ ನಡೆಸಿದ ಮೇಟಗಳ್ಳಿ ಪೊಲೀಸರು, 17 ಹೋರಿ ಕರು, 1 ಹೆಣ್ಣು ಕರು ಹಾಗೂ 2 ಹಸುಗಳು ಸೇರಿ 20 ಜಾನುವಾರುಗಳನ್ನು ರಕ್ಷಣೆ ಮಾಡಿದ್ದಾರೆ. ಖಾಲಿ ಜಾಗದಲ್ಲಿ ಶೆಡ್ ಹಾಕಿಕೊಂಡು ಅಕ್ರಮವಾಗಿ ಜಾನುವಾರು ಗಳನ್ನು ಕಟ್ಟಿಹಾಕಿ ಕಸಾಯಿಖಾನೆಗೆ ಸಾಗಿಸಲಾಗುತ್ತಿದೆ ಎಂದು ಸ್ಥಳೀಯರು ನೀಡಿರುವ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ರಕ್ಷಣೆ ಮಾಡಿದ ಜಾನುವಾರುಗಳನ್ನು ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಪಿಂಜರಾಪೋಲ್‌ಗೆ ಸ್ಥಳಾಂತರಿಸಿದ್ದಾರೆ.

ಬಿಗುವಿನ ವಾತಾವರಣ: ಸ್ಥಳಕ್ಕೆ ಪೊಲೀಸರು ಹೋಗುತ್ತಿದ್ದಂತೆ ಕ್ಯಾತೆ ತೆಗೆದ ಹಲವರು ಜಾನುವಾರುಗಳು ನಮ್ಮವು. ಇವುಗಳನ್ನು ಕಸಾಯಿಖಾನೆಗೆ ಸಾಗಿಸುತ್ತಿಲ್ಲ ಎಂದು ಪೊಲೀಸರೊಂದಿಗೆ ಮಾತಿಗಿಳಿದಿದ್ದಾರೆ. ಇದರಿಂದ ಎಚ್ಚೆತ್ತ ಪೊಲೀಸರು ಮುಂಜಾಗ್ರತಾ ಕ್ರಮವಾಗಿ ಹೆಚ್ಚುವರಿ ಸಿಬ್ಬಂದಿಗಳನ್ನು ನಿಯೋಜಿಸಿದ್ದು, ರಾತ್ರಿ 9 ಗಂಟೆಯವರೆಗೂ ಪೊಲೀಸರು ಸ್ಥಳದಲ್ಲಿದ್ದರು. ಇದರಿಂದ ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು.

ಹುಣಸೂರು: ಇಲ್ಲಿನ ಶಬ್ಬೀರ್‌ನಗರದಲ್ಲಿನ ಶೆಡ್‌ವೊಂದರಲ್ಲಿ ಅಕ್ರಮವಾಗಿ ಕಟ್ಟಿಹಾಕಿದ್ದ 31 ಜಾನುವಾರಗಳನ್ನು ಗೌ ಗ್ಯಾನ್ ಫೌಂಡೇಷನ್ ಕಾರ್ಯಕರ್ತರೊಂದಿಗೆ ಹುಣಸೂರು ಪಟ್ಟಣ ಪೊಲೀಸರು ರಕ್ಷಿಸಿದ್ದಾರೆ. ಖಚಿತ ಮಾಹಿತಿ ಮೇರೆಗೆ ಜಂಟಿ ದಾಳಿ ನಡೆಸಿದ ಪೊಲೀಸರು, 31 ಜಾನುವಾರು ಹಾಗೂ ಜಾನುವಾರು ಸಾಗಿಸಲು ಬಳಸುತ್ತಿದ್ದ ಎರಡು ವಾಹನ ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡಿದ್ದಾರೆ. ರಕ್ಷಿಸಲ್ಪಟ್ಟ ಜಾನುವಾರುಗಳನ್ನು ಮೈಸೂರಿನ ಪಿಂಜರಾಪೋಲ್ ಸ್ಥಳಾಂತರಿಸಲಾಗಿದೆ. ಈ ಸಂಬಂಧ ಹುಣಸೂರು ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಿಲ್ಲೆಗೊಂದು ಮೃಗಾಲಯ ಸ್ಥಾಪನೆಗೆ ಚಿಂತನೆ

● ಕೇಂದ್ರದ ಮೃಗಾಲಯ ಪ್ರಾಧಿಕಾರಕ್ಕೆ ಶೀಘ್ರ ಪ್ರಸ್ತಾವನೆ ● ಮೈಸೂರು ಮೃಗಾಲಯ ನಿರ್ವಹಣೆಗೆ ಅರಣ್ಯ ಸಚಿವ ಕತ್ತಿ ಮೆಚ್ಚುಗೆ ● ಅರ್ಧ ದಿನ ಮೃಗಾಲಯದಲ್ಲೇ ವಿಹರಿಸಿ, ಪ್ರಾಣಿ-ಪಕ್ಷಿಗಳ ವೀಕ್ಷಿಸಿದ ಸಚಿವರು

ಮೈಸೂರು,ಜೂ.30(ಎಂಟಿವೈ)- ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲೂ ಮೃಗಾಲಯ ಸ್ಥಾಪಿಸಬೇಕೆಂಬ ಆಲೋಚನೆಯಿದ್ದು ಈ ಸಂಬಂಧ ಕೇಂದ್ರದ ಮೃಗಾಲಯ ಪ್ರಾಧಿಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದಾಗಿ ಅರಣ್ಯ ಸಚಿವ ಉಮೇಶ್ ಕತ್ತಿ ತಿಳಿಸಿದ್ದಾರೆ.

ಮೈಸೂರು ಮೃಗಾಲಯಕ್ಕೆ ಗುರುವಾರ ಭೇಟಿ ನೀಡಿ, ಪ್ರತಿಯೊಂದು ಪ್ರಾಣಿ-ಪಕ್ಷಿಯ ಪಾಲನೆ ಕುರಿತಂತೆ ಅಧಿಕಾರಿಗಳಿಂದ ಮಾಹಿತಿ ಪಡೆದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮೈಸೂರು ಮಹಾರಾಜರ ಆಳ್ವಿಕೆ ಕಾಲದಲ್ಲಿ 130 ವರ್ಷದ ಹಿಂದೆ ಸ್ಥಾಪಿಸಲ್ಪಟ್ಟಿರುವ ಮೈಸೂರು ಮೃಗಾಲಯದ ನಿರ್ವಹಣೆ ಅತ್ಯುತ್ತಮವಾಗಿದೆ. ನೈಜ ಅರಣ್ಯ ಪ್ರದೇಶದಲ್ಲಿ ವನ್ಯಜೀವಿಗಳನ್ನು ನೋಡುವಂತೆ ವಾತಾವರಣ ಕಲ್ಪಿಸಿರುವುದು ಶ್ಲಾಘನೀಯ. ಮೈಸೂರು ಮೃಗಾಲಯ



ದಲ್ಲಿ 1945 ವಿವಿಧ ಪ್ರಭೇದದ ಪ್ರಾಣಿ ಮತ್ತು ಪಕ್ಷಿಗಳನ್ನು ಪಾಲನೆ ಮಾಡಲಾಗುತ್ತಿದೆ. ರಾಜ್ಯದಲ್ಲಿ 9 ಮೃಗಾಲಯಗಳಿದ್ದು, 5 ಸಾವಿರಕ್ಕಿಂತ ಹೆಚ್ಚಿನ ಪ್ರಾಣಿ ಮತ್ತು ಪಕ್ಷಿಗಳನ್ನು ಪೋಷಿಸಲಾಗುತ್ತಿದೆ ಎಂದರು.

ಮುಂಬರುವ ದಿನಗಳಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಮೃಗಾಲಯ ಇರಬೇಕು ಎಂಬುದು ನಮ್ಮ ಆಲೋಚನೆಯಾಗಿದೆ. ಆ ನಿಟ್ಟಿನಲ್ಲಿ ಇಂದು ಮೈಸೂರು ಮೃಗಾಲಯದಲ್ಲಿಯೇ ಅರ್ಧದಿನ ಕಳೆದು ಪೂರ್ಣ ಪ್ರಮಾಣದ ಮಾಹಿತಿ ಪಡೆದುಕೊಂಡಿದ್ದೇನೆ. ಈ ಎಲ್ಲಾ ಅಂಶ ಅವಲೋಕಿಸಿ ಜಿಲ್ಲೆಗೊಂದು ಮೃಗಾಲಯ ಸ್ಥಾಪನೆಗಾಗಿ ಕೇಂದ್ರ ಮೃಗಾಲಯ ಪ್ರಾಧಿಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುತ್ತದೆ. ನಮ್ಮ ಉದ್ದೇಶ ಸ್ಥಳೀಯರಿಗೆ ವನ್ಯಜೀವಿಗಳ ಬಗ್ಗೆ ಅರಿವು ಮೂಡಿಸುವುದೇ ಆಗಿದೆ ಎಂದು ತಿಳಿಸಿದರು.

ಸುಧಾರಿಸುತ್ತಿದೆ: ಕೊರೊನಾ ಹಿನ್ನೆಲೆಯಲ್ಲಿ ಮೈಸೂರು ಮೃಗಾಲಯ ಸೇರಿದಂತೆ ರಾಜ್ಯದ 9 ಮೃಗಾಲಯಗಳು ಸಂಕಷ್ಟಕ್ಕೀಡಾಗಿದ್ದವು. ಈಗ ಎಲ್ಲಾ ನಿರ್ಬಂಧ ಸಡಿಲಿಕೆ ಯಾಗಿದ್ದು, ಮೃಗಾಲಯಗಳು ಚೇತರಿಸಿಕೊಳ್ಳುತ್ತಿವೆ. ಹಾಗಾಗಿ ಮೃಗಾಲಯಗಳ ನಿರ್ವಹಣೆಗೆ ಸರ್ಕಾರದ ವತಿಯಿಂದ ಯಾವುದೇ ವಿಶೇಷ ಅನುದಾನ ನೀಡುತ್ತಿಲ್ಲ ಎಂದು ಸ್ಪಷ್ಟಪಡಿಸಿದರು.

ಪರಿಶೀಲನೆ: ಬೆಳಗ್ಗೆ 7 ಗಂಟೆಗೆ ಮೈಸೂರು ಮೃಗಾಲಯಕ್ಕೆ ಬಂದ ಸಚಿವ ಉಮೇಶ್ ಕತ್ತಿ, 11.30ರವರೆಗೂ ಪ್ರದಕ್ಷಿಣೆ ಹಾಕಿ ಮಾಹಿತಿ ಪಡೆದರು. ಪಕ್ಷಿಗಳು, ಹುಲಿ, ಚಿರತೆ, ಕಾಡೆಮ್ಮೆ, ಘೇಂಡಾಮೃಗದ ಮನೆ ವೀಕ್ಷಿಸಿದರು. ನಂತರ ನಿರ್ಮಾಣ ಹಂತದಲ್ಲಿರುವ ಹೂಲಾಕ್ ಗಿಬ್ಬನ್, ವಲ್ಲಬಿ ಮನೆಗಳ ಕಾಮಗಾರಿ ವೀಕ್ಷಿಸಿದರು. ಇದೇ ವೇಳೆ ಪಶು ವೈದ್ಯಕೀಯ ಆಸ್ಪತ್ರೆ, ಪಾಕಶಾಲೆಗೆ ಭೇಟಿ ನೀಡಿ ಪರಿಶೀಲಿಸಿದರು. ಬಳಿಕ ಜಿರಾಫೆಗೆ ಹುಲ್ಲು ತಿನ್ನಿಸಿದರು. ಈ ವೇಳೆ ಪಿಸಿಸಿಎಫ್ ವಿಜಯ್‌ಕುಮಾರ್ ಗೋಗಿ, ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಅಜಿತ್ ಎಂ.ಕುಲಕರ್ಣಿ, ಎಸಿಎಫ್ ರಂಗಸ್ವಾಮಿ ಸೇರಿದಂತೆ ಇನ್ನಿತರರು ಮೃಗಾಲಯದಲ್ಲಿ ಪ್ರಾಣಿ ಪಕ್ಷಿಗಳ ಬಗ್ಗೆ ಪಾಲನೆ, ಪೋಷಣೆ, ಆರೋಗ್ಯದ ಬಗ್ಗೆ ಮಾಹಿತಿ ನೀಡಿದರು. ಜೊತೆಗೆ ಪ್ರಾಣಿಗಳಿಗೆ ಆಹಾರ ನೀಡುವ ಪ್ರಕ್ರಿಯೆ ಹಾಗೂ ಗೊಬ್ಬರ ತಯಾರಿಕಾ ಕೇಂದ್ರವನ್ನು ಸಚಿವರು ವೀಕ್ಷಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್. ಮಹಾದೇವಸ್ವಾಮಿ, ಸದಸ್ಯರಾದ ಜ್ಯೋತಿ ರೇಚಣ್ಣ, ಗೋಕುಲ್ ಗೋವರ್ಧನ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಶುಕ್ರವಾರ 1 ಜುಲೈ 2022

ನಂಜನಗೂಡಿನ ರಾಂಪುರದಲ್ಲಿ ನಾಡು, ನುಡಿ, ಸಂಸ್ಕೃತಿ ಉತ್ಸವಕ್ಕೆ ಚಾಲನೆ

ನಾಡಿನ ಸಂಸ್ಕೃತಿ ಉಳಿಸಲು ಎಲ್ಲರೂ ಕೈ ಜೋಡಿಸಿ

ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಕರೆ



ನಂಜನಗೂಡು, ಜೂ.30(ಸುದರ್ಶನ)– ಕನ್ನಡ ನಾಡನ್ನು ಮರೆತರೆ ಹೆತ್ತ ತಾಯಿಯನ್ನೇ ಮರೆತಂತೆ. ಎಂದಿಗೂ ನಾವು ಕನ್ನಡತನವನ್ನು ಮರೆಯದೆ ಕನ್ನಡ ನಾಡು, ನುಡಿ, ಸಂಸ್ಕೃತಿಯ ಬಗ್ಗೆ ಹೆಮ್ಮೆಪಡಬೇಕು. ನಾಡಿನ ಸಂಸ್ಕೃತಿಯನ್ನು ಉಳಿಸಲು ಎಲ್ಲರೂ ಕೈ ಜೋಡಿಸಬೇಕು ಎಂದು ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ತಾಲೂಕಿನ ರಾಂಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾವರಣದ ರಂಗಮಂದಿರದಲ್ಲಿ ಗುರುವಾರ ಇಂಪು ಇಂಚರ ಸಾಮಾಜಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ಕಿರುಗುಂದ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಸಹಯೋಗದೊಂದಿಗೆ ನಡೆದ 4ನೇ ವರ್ಷದ ರಾಜ್ಯ ಮಟ್ಟದ ನಾಡು–ನುಡಿ, ಸಂಸ್ಕೃತಿ ಉತ್ಸವ –2022 ಉದ್ಘಾಟಿಸಿ ಅವರು ಮಾತನಾಡಿದರು.

ಇಂಪು ಇಂಚರ ಸಾಮಾಜಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ಸಮಾಜಮುಖಿ ಕೆಲಸ ಮಾಡುತ್ತಿದೆ. ಹಾಗೇ ಜಾನಪದ ಸಾಹಿತ್ಯವನ್ನು ಗ್ರಾಮಾಂತರ, ಪಟ್ಟಣ ಪ್ರದೇಶಗಳ ಜನರಿಗೆ ಅರಿವು ಮೂಡಿಸುವ ಕೆಲಸ ಮಾಡಲಾಗುತ್ತಿದೆ ಎಂದು ಶ್ಲಾಘಿಸಿದರು.

ಕನ್ನಡವನ್ನು ಪ್ರೀತಿಸುವುದೆಂದರೆ ಪರಭಾಷೆಗಳನ್ನು ದ್ವೇಷಿಸಬೇಕು ಎಂದು ಅರ್ಥವಲ್ಲ. ಹೆತ್ತ ತಾಯಿಗೆ ನೀಡುವ ಗೌರವವನ್ನು ಕನ್ನಡಕ್ಕೆ ನೀಡಬೇಕು. ಉಳಿದ ಭಾಷೆಗಳನ್ನೂ ಗೌರವಿಸಬೇಕು. ಕನ್ನಡ ನಾಡು ಕಟ್ಟುವುದರಲ್ಲಿ ಹಲವು ಜನರ ಪರಿಶ್ರಮವಿದೆ. ಕನ್ನಡದ ಮೊದಲ ಕೃತಿ ಕವಿರಾಜಮಾರ್ಗದಲ್ಲಿ ಕನ್ನಡ, ಕರ್ನಾಟಕದ ಹಿರಿಮೆ, ಗರಿಮೆ, ನಾಡಿನ ಶ್ರೇಷ್ಠತೆ, ವಿಸ್ತಾರವನ್ನು ವರ್ಣಿಸಿದೆ. ನೆಲ, ಜಲದ ವಿಷಯದಲ್ಲಿ ಕನ್ನಡಿಗರು ಹೊಂದಿರುವ ಪ್ರೇಮ, ಕನ್ನಡಿಗರ ಕೆಚ್ಚೆದೆಯನ್ನು ಕವಿರಾಜಮಾರ್ಗದಲ್ಲಿ ತಿಳಿಸಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ತಗಡೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಗಸ್ವಾಮಿ, ಇಂಪು ಇಂಚರ ಸಾಮಾಜಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ಅಧ್ಯಕ್ಷ ಶ್ರೀನಿವಾಸ್‌ಮೂರ್ತಿ, ಗ್ರಾಪಂ ಅಧ್ಯಕ್ಷೆ ಗುರು ಶಾಂತಮ್ಮ, ಸದಸ್ಯರಾದ ಮಂಜು, ಲಕ್ಷ್ಮಣ, ಮಹದೇವ್, ಎಸ್‌ಡಿಎಂಸಿ ಅಧ್ಯಕ್ಷ ಕಾಳ ಸ್ವಾಮಿ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

ಅದ್ದೂರಿ ಮೆರವಣಿಗೆ: ವೇದಿಕೆ ಕಾರ್ಯಕ್ರಮಕ್ಕೂ ಮೊದಲು ಗ್ರಾಮದಲ್ಲಿ 'ನಾಡು, ನುಡಿ, ಸಂಸ್ಕೃತಿ, ಉತ್ಸವ–2022 ಮೆರವಣಿಗೆಯನ್ನು ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ನಗರಿ ಬಾರಿಸುವ ಮೂಲಕ ಚಾಲನೆ ನೀಡಿದರು. ಮೆರವಣಿಗೆಯೂ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಾಗಿತ್ತು. ಈ ವೇಳೆ ವಿವಿಧ ಜಾನಪದ ಕಲಾ ತಂಡಗಳು ಭಾಗವಹಿಸಿದ್ದವು. ವೇದಿಕೆ ಕಾರ್ಯಕ್ರಮದಲ್ಲಿ ಜಾನಪದ ಕಲಾವಿದ ಮಳವಳ್ಳಿ ಡಾ.ಮಹದೇವ ಸ್ವಾಮಿ ಹಾಡುಗಳನ್ನು ಹಾಡಿ ರಂಜಿಸಿದರು.

ಹಿರೇಹಳ್ಳಿ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ಮಕ್ಕಳು ಅಸ್ವಸ್ಥ ಪ್ರಕರಣ

ಶಾಲೆಗೆ ತಹಸೀಲ್ದಾರ್ ಭೇಟಿ, ಪರಿಶೀಲನೆ



ಹೆಚ್.ಡಿ.ಕೋಟೆ, ಜೂ.30(ಮಂಜು)– ತಾಲೂಕಿನ ಹಿರೇಹಳ್ಳಿ ಗ್ರಾಮದಲ್ಲಿರುವ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ಊಟ ಸೇವಿಸಿ 35 ಮಕ್ಕಳು ಅಸ್ವಸ್ಥಗೊಂಡಿರುವ ಪ್ರಕರಣ ಸಂಬಂಧ ಗುರುವಾರ ಶಾಲೆಗೆ ತಹಸೀಲ್ದಾರ್ ರತ್ನಾಂಬಿಕೆ ಭೇಟಿ, ಪರಿಶೀಲಿಸಿದರು.

ಖುದ್ದು ಮಕ್ಕಳನ್ನು ಭೇಟಿ ಮಾಡಿ, ಊಟೋಪಚಾರ ಹಾಗೂ ಪಾಠ–ಪ್ರವಚಗಳನ್ನು ಯಾವ ರೀತಿ ಮಾಡುತ್ತಿದ್ದಾರೆ ಎಂಬುದರ ಬಗ್ಗೆ ಮಾಹಿತಿ ಪಡೆದರು. ಬಳಿಕ, ಶಾಲೆಯಲ್ಲಿಯೇ ಮಧ್ಯಾಹ್ನ ಉಪಹಾರ ಸೇವಿಸಿದರು. ಈ ವೇಳೆ ಮಕ್ಕಳು ಮಾತನಾಡಿ, ಶಾಲೆಯಲ್ಲಿನ ಗಣಿತ ಶಿಕ್ಷಕರ ವರ್ತನೆ ಸರಿಯಿಲ್ಲ ಅವರನ್ನು ಬೇರೆಡೆಗೆ ವರ್ಗಾವಣೆ ಮಾಡಬೇಕು ಎಂದು ಮನವಿ ಮಾಡಿದರು. ಇದಕ್ಕೆ ಸ್ಪಂದಿಸಿದ ತಹಸೀಲ್ದಾರ್, ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಪತ್ರ ಬರೆಯಲಾಗುವುದು ಎಂದು ತಿಳಿಸಿದರು.

ಜಿಲ್ಲಾ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಸಮನ್ವಯಾಧಿಕಾರಿ ಪ್ರಭಾ ಮಾತನಾಡಿ, ತಾಲೂಕಿನ ವಸತಿ ಶಾಲೆಯಲ್ಲಿ ನಡೆದಿರುವ ಘಟನೆ ಹಿನ್ನೆಲೆಯಲ್ಲಿ ಅಡುಗೆ ಸಿಬ್ಬಂದಿಗಳಾದ ಶಶಿಕಲಾ, ಸೌಮ್ಯಾ, ಗೌರಮ್ಮ, ನೇತ್ರಾ ಹಾಗೂ ಮೀನಾ ಅವರನ್ನು ಬೇರೆಡೆಗೆ ವರ್ಗಾವಣೆ ಮಾಡಲಾಗಿದೆ. ಪ್ರಾಂಶುಪಾಲ ಸತೀಶ್‌ಬಾಬು ಹಾಗೂ ನಿಲಯಪಾಲಕಿ ಚಿಕ್ಕಮಣಿ ಅವರು ಸರಿಯಾಗಿ ಕರ್ತವ್ಯಕ್ಕೆ ಹಾಜರಾಗದೆ ಇರುವುದರಿಂದ ಇವರು ಮೇಲೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಯ ಸಂಘಕ್ಕೆ ಕ್ರಮ ಕೈಗೊಳ್ಳಬೇಕೆಂದು ವರದಿ ಸಲ್ಲಿಸುತ್ತೇನೆ ಎಂದು ತಿಳಿಸಿದರು.

ತಾಲೂಕು ಆರೋಗ್ಯ ವೈದ್ಯಾಧಿಕಾರಿ ಡಾ. ರವಿಕುಮಾರ್ ಮಾತನಾಡಿ, ಶಾಲೆಯ 35 ವಿದ್ಯಾರ್ಥಿನಿಯರು ಆರೋಗ್ಯವಾಗಿದ್ದು, ಎಲ್ಲರನ್ನೂ ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ನಾರಾಯಣಸ್ವಾಮಿ, ಗಿರಿಜನ ವಿಸ್ತರಣಾಧಿಕಾರಿ ನಾಗರಾಜು ಇದ್ದರು.

ಮಲ್ಲಿನಾಥಪುರ: ಟಿಟಿಗೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ

ಗಾಯಾಳು ಗ್ರಂಥಾಲಯ ಮೇಲ್ವಿಚಾರಕಿ ಸಾವು



• ಇನ್ನೂ ನಾಲ್ವರಿಗೆ ಮುಂದುವರಿದ ಚಿಕಿತ್ಸೆ • ಸಾವಿನ ಸಂಖ್ಯೆ 2ಕ್ಕೇರಿಕೆ

ಹಿರೀಕ್ಯಾತನಹಳ್ಳಿ, ಜೂ.30– ಹುಣಸೂರು ತಾಲೂಕಿನ ಬಿಳಿಕೆರೆ ಬಳಿಯ ಮಲ್ಲಿನಾಥಪುರ ಗ್ರಾಮದ ತಿರುವಿನಲ್ಲಿ ಜೂ.27 (ಸೋಮವಾರ) ಟೆಂಪೋ ಟ್ರಾವೆಲರ್ಸ್ (ಟಿಟಿ)ಗೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದು ಗಾಯಗೊಂಡಿದ್ದ ನಾಲ್ವರ ಪೈಕಿ ಗುರುವಾರ ಚಿಕಿತ್ಸೆ ಫಲಕಾರಿಯಾಗದೇ ಮತ್ತೊಬ್ಬರು ಸಾವನ್ನಪ್ಪಿದ್ದಾರೆ. ಇದರಿಂದ ಘಟನೆಯಿಂದ ಸಾವನ್ನಪ್ಪಿದವರ ಸಂಖ್ಯೆ 2ಕ್ಕೇರಿಕೆಯಾಗಿದೆ.

ಗಾವಡಗೆರೆ ಗ್ರಾಮದ ಶ್ರೀನಾಥ್ ರಾವ್ ಬೋಬಡೆ ಅವರ ಪತ್ನಿ, ಹಾಗೂ ಆಸ್ಪತ್ರೆ ಕಾವಲ್ (ರತ್ನಪುರಿ) ಗ್ರಂಥಾಲಯ ಮೇಲ್ವಿಚಾರಕಿ ಜ್ಯೋತಿ(43) ಮೃತಪಟ್ಟವರು. ಮೃತರು ಪತಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸಂಜೆ ಗಾವಡಗೆರೆ ಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿತು.

ಅಂತ್ಯ ಸಂಸ್ಕಾರದಲ್ಲಿ ತಾಲೂಕು ಗ್ರಾಪಂ ಗ್ರಂಥಾಲಯ ಮೇಲ್ವಿಚಾರಕರ ಸಂಘದ ಪದಾಧಿಕಾರಿಗಳು, ಮೇಲ್ವಿಚಾರಕರು ಹಾಗೂ ವಿವಿಧ ತಾಲೂಕಿನ ಗ್ರಂಥಾಲಯ ಮೇಲ್ವಿಚಾರಕರು, ಅಂತಿಮ ದರ್ಶನ ಪಡೆದರು.

ಆಗಿದ್ದೇನು: ಜೂ.27ರಂದು ಮಂಡ್ಯದಲ್ಲಿ ರಾಜ್ಯ ಮಟ್ಟದ ಗ್ರಾಪಂ ಗ್ರಂಥಾಲಯ ಮೇಲ್ವಿಚಾರಕರ ಸಂಘದ ಪದಾಧಿಕಾರಿಗಳಿಗೆ ಅಭಿನಂದನಾ ಸಮಾರಂಭದಲ್ಲಿ ಭಾಗವಹಿಸಿ ವಾಪಸ್ ಟಿಟಿಯಲ್ಲಿ ಬರುತ್ತಿದ್ದಾಗ ಹುಣಸೂರು ತಾಲೂಕಿನ ಮೈಸೂರು– ಬಂಟ್ವಾಳ ಹೆದ್ದಾರಿಯ ಮಲ್ಲಿನಾಥಪುರದ ಬಳಿ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲಿಯೇ ಹಂಪಿ ವಿಶ್ವವಿದ್ಯಾಲಯದ ಜಾನಪದ ವಿಭಾಗದ ಡೀನ್ ಡಾ.ಚಲುವರಾಜು ರವರ ಸಹೋದರ ಬನ್ನಿಕುಪ್ಪೆ ಗ್ರಾಪಂ ಮೇಲ್ವಿಚಾರಕರಾದ ನಾಗಯ್ಯ (45) ಸಾವನ್ನಪ್ಪಿದ್ದರು. ಜ್ಯೋತಿ, ಹನಗೋಡಿನ ಯಶೋಧಮ್ಮ, ಮರದೂರು ಜಯಮ್ಮ, ಕಟ್ಟೆಮಳಲವಾಡಿಯ ಕವಿತಾ ಸೇರಿದಂತೆ ಐವರು ತೀವ್ರವಾಗಿ ಗಾಯಗೊಂಡಿದ್ದರು.

ಮತ್ತೊಬ್ಬರ ಸ್ಥಿತಿ ಗಂಭೀರ: ಹನಗೋಡು ಗ್ರಾಮದ ಗ್ರಂಥಾಲಯ ಮೇಲ್ವಿಚಾರಕಿ ಯಶೋಧಮ್ಮ ಅವರ ಎರಡು ಕಾಲುಗಳಿಗೂ ತೀವ್ರ ಗಾಯವಾಗಿದ್ದು, ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ನಾನು ಬಡವ, ನನ್ನ ಕತ್ತು ಸೀಳ ಬೇಡಿ

ಉದಯಪುರ ಹತ್ಯೆ ಖಂಡಿಸಿ ತಿ.ನರಸೀಪುರ, ನಂಜನಗೂಡಿನಲ್ಲಿ ವಿಭಿನ್ನ ಅಭಿಯಾನ



ನಂಜನಗೂಡು/ತಿ.ನರಸೀಪುರ ಜೂ.30– ರಾಜಸ್ಥಾನದ ಉದಯಪುರದಲ್ಲಿ ಟೈಲರ್ ಕನ್ಹಯ್ಯ ಲಾಲ್ ಅವರ ಹತ್ಯೆ ಖಂಡಿಸಿ ಮೈಸೂರು ಜಿಲ್ಲೆಯ ತಿ.ನರಸೀಪುರ ಹಾಗೂ ನಂಜನಗೂಡಿನಲ್ಲಿ ಗುರುವಾರ ರಸ್ತೆ ವ್ಯಾಪಾರಿಗಳು ಹಾಗೂ ಹಿಂದು ಪರ ಸಂಘಟನೆಗಳ ಕಾರ್ಯಕರ್ತರು ವಿಭಿನ್ನ ಅಭಿಯಾನ ಆರಂಭಿಸಿದ್ದಾರೆ.

'ನಾನು ಬಡವ, ನನ್ನ ಕತ್ತು ಸೀಳಬೇಡಿ' ಫಲಕಗಳನ್ನು ಹಿಡಿದು ಘೋಷಣೆ ಕೂಗಿ 'ನಾನು ಸತ್ಯ ಹೇಳಲ್ಲ, ಸತ್ಯ ಹೇಳುವವರ ಪರವೂ ನಿಲ್ಲುವುದೂ ಇಲ್ಲ. ನಾನು ಬಡವ, ನನ್ನ ಕತ್ತು ಸೀಳಬೇಡಿ' ಎಂದು ತಮ್ಮ ತಮ್ಮ ಅಂಗಡಿಗಳ ಎದುರು ಫಲಕ ಹಿಡಿದು ಪ್ರತಿಭಟಿಸಿದರು. ಈ ಅಭಿಯಾನದಲ್ಲಿ ವಿದ್ಯಾರ್ಥಿಗಳು, ಸಾರ್ವಜನಿಕರು, ಅಂಗಡಿ ಮಾಲೀಕರು ಕೈ ಜೋಡಿಸಿದ್ದಾರೆ.

ನಿನ್ನೆ ಉದಯಪುರದ ಟೈಲರ್ ಅಂಗಡಿ ಮಾಲೀಕ ಕನ್ಹಯ್ಯ ಲಾಲ್‌ನನ್ನು ಇಬ್ಬರು ಹತ್ಯೆ ಮಾಡಿದ್ದರು. ಇದರ ವಿಡಿಯೋ ಸೋಶಿಯಲ್ ಮೀಡಿಯಾದಲ್ಲಿ ಹರಿದಾಡಿದ್ದು, ಅದರಲ್ಲಿ ಪ್ರಧಾನಿ ನರೇಂದ್ರ ಮೋದಿಯವರನ್ನೂ ಹತ್ಯೆ ಮಾಡುವುದಾಗಿಯೂ ಬೆದರಿಕೆ ಹಾಕಿದ ಬೆನ್ನಲ್ಲೇ ದೇಶಾದ್ಯಂತ ಆಕ್ರೋಶ ವ್ಯಕ್ತಪಡಿಸಲಾಗುತ್ತಿದೆ. ಇದೀಗ ಕರ್ನಾಟಕದಲ್ಲೂ ಹಂತಕರ ವಿರುದ್ಧ ಆಕ್ರೋಶ ವ್ಯಕ್ತವಾಗುತ್ತಿದೆ.

ಇಂದಿನಿಂದ ಗುತ್ತಿಗೆ ನೌಕರರ ಮುಷ್ಕರ

ಹುಣಸೂರು, ಜೂ.30(ಕೆಕೆ)– ರಾಜ್ಯಾದ್ಯಂತ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಗುತ್ತಿಗೆ ಆಧಾರದಡಿ ಕರ್ತವ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರು, ಸ್ವಚ್ಛತಾ ಸಿಬ್ಬಂದಿ, ಚಾಲಕರು, ಸೂಪರ್‌ವೈಸರ್, ಡೆಟಾ ಎಂಟ್ರಿ ಆಪರೇಟರ್‌ಗಳು, ನೀರು ಸರಬರಾಜು ಸಹಾಯಕರು ಸೇರಿದಂತೆ ಇತರೆ ಖಾಯಂಯೇತರ ಸಿಬ್ಬಂದಿ ಜು. 1ರಿಂದ ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಮುಷ್ಕರ ನಡೆಸಲು ಉದ್ದೇಶಿಸಿರುವುದರಿಂದ ಹುಣಸೂರು ನಗರಸಭೆಯ ತ್ಯಾಜ್ಯ ವಿಲೇವಾರಿ, ಸ್ವಚ್ಛತೆ ಮತ್ತು ನೀರು ಸರಬರಾಜು ಹಾಗೂ ಇತರೆ ತುರ್ತು ಸೇವೆಗಳಲ್ಲಿ ಏರು ಪೇರುಗಳಾಗುವ ಸಾಧ್ಯತೆ ಇರುವುದರಿಂದ ಸಾರ್ವಜನಿಕರು ಸಹಕರಿಸಬೇಕಾಗಿ ಈ ಮೂಲಕ ನಗರಸಭೆ ಅಧ್ಯಕ್ಷೆ ಸಮೀನಭಾನು, ಹಾಗೂ ಪೌರಾಯುಕ್ತ ರವಿಕುಮಾರ್ ಕೋರಿದ್ದಾರೆ.



ವರುಣಾ ವಿಧಾನಸಭಾ ಕ್ಷೇತ್ರದ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಅವರನ್ನು ಹಿರಿಯ ಕಾಂಗ್ರೆಸ್ ಮುಖಂಡ ಹಾಗೂ ಒಕ್ಕಲಿಗರ ಸಂಘದ ತಾಲೂಕು ಅಧ್ಯಕ್ಷ ಪಿ.ಸ್ವಾಮಿನಾಥಗೌಡ ಅವರು ಅಭಿನಂದಿಸಿದರು. ಈ ವೇಳೆ ಖಾಸಗಿ ಬಸ್ ಏಜೆಂಟ್ ಸಂಘದ ಅಧ್ಯಕ್ಷ ಪಿ.ಪುಟ್ಟರಾಜು, ಪುರಸಭಾ ಅಧ್ಯಕ್ಷ ಮದನ್‌ರಾಜ್, ಸದಸ್ಯರಾದ ಮೆಡಿಕಲ್ ನಾಗರಾಜು, ಸಂದೇಶ್‌ಕುಮಾರ್, ಶ್ರೀಕಂಠ, ಹೇಮಂತ್, ಸ್ವಾಮಿ, ನಂದಕುಮಾರ್, ಚಂದ್ರೇಗೌಡ, ಮೂಗೂರು ವಿನಯ್, ಮಣಿಕಂಠ, ಕೃಪಾಶಂಕರ್, ಪವನ್, ಪ್ರದೀಪ್, ಚಂದ್ರು, ಶ್ರೀನಿವಾಸ್, ಆನಂದ್, ರಾಮು, ಲಕ್ಷ್ಮಣ್, ಕಾರ್ತಿಕ್, ಯಶ್ವಂತ್, ಅಭಿ, ಅರ್ಪಿತಾ, ಮಹದೇವ, ರಮೇಶ್ ಹಾಜರಿದ್ದರು.

ಕಾಂಗ್ರೆಸ್‌ನಿಂದ ಅಗ್ನಿಪಥ್ ಯೋಜನೆಯ ವಾಸ್ತವಾಂಶ ಮರೆಮಾಚಲು ಯತ್ನ



ತಿ.ನರಸೀಪುರ, ಜೂ.30(ಎಸ್‌ಕೆ)– ಅಗ್ನಿಪಥ್ ಯೋಜನೆಯ ವಾಸ್ತವಾಂಶ ಮರೆಮಾಚಿ ಕಾಂಗ್ರೆಸ್ ನಾಯಕರು ಯುವಕರ ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಅವರ ಸುಳ್ಳಿನ ತಂತ್ರಗಾರಿಕೆ ಹೆಚ್ಚು ದಿನ ನಡೆಯಲ್ಲ ಎಂದು ಬಿಜೆಪಿ ಎಸ್‌ಸಿ ಮೋರ್ಚಾ ಅಧ್ಯಕ್ಷ ಸೋಸಲೆ ಶಿವಕುಮಾರ್(ಬಡ್ಡು) ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಗ್ನಿಪಥ್ ಯೋಜನೆ ಕಾಂಗ್ರೆಸ್ ಆಡಳಿತಾವಧಿಯಲ್ಲಿ ಚರ್ಚೆಗೆ ಬಂದರೂ, ಅದನ್ನು ಜಾರಿಗೆ ತರುವ ಮನಸ್ಥಿತಿ ಅವರಲ್ಲಿ ರಲಿಲ್ಲ. ಕಾರಣ ಕಾಂಗ್ರೆಸ್‌ನವರಿಗೆ ದೇಶದ ಅಭಿವೃದ್ಧಿ, ಯುವಕರ ಭವಿಷ್ಯದ ಚಿಂತನೆ ಇರಲಿಲ್ಲ. ಆದರೆ, ಪ್ರಧಾನಿ ಮೋದಿ ದೇಶ ಮತ್ತು ಜನತೆ ಕಲ್ಯಾಣಕ್ಕಾಗಿ ದುಡಿಯುತ್ತಿದ್ದಾರೆ. ಇದನ್ನು ಸಹಿಸದ ಕಾಂಗ್ರೆಸಿಗರು ಸತ್ಯಕ್ಕೆ ದೂರವಾದ ವಿಚಾರಗಳನ್ನು ಬಿತ್ತುವ ಮೂಲಕ ಯುವಕರ ದಿಕ್ಕು ತಪ್ಪಿಸುತ್ತಿದ್ದಾರೆ ಎಂದು ಆರೋಪಿಸಿದರು.

ಅಗ್ನಿಪಥ್ ಯೋಜನೆಯಲ್ಲಿ ಅಗ್ನಿವೀರರಾಗಿ ನೇಮಕವಾದವರಿಗೆ ಕೌಶಲ್ಯಭರಿತ ಸೇವಾ ಶೈಕ್ಷಣಿಕ ಮಾನ್ಯತೆ ಮತ್ತು ಸೇವಾವಧಿಯಲ್ಲಿ 12ನೇ ತರಗತಿಯಿಂದ ಪದವಿ ಸರ್ಟಿಫಿಕೇಟ್, ಕೋಸ್ಟ್ ಗಾರ್ಡ್ ನಾಗರಿಕ ರಕ್ಷಣೆಯಲ್ಲಿ ಮೀಸಲಾತಿ, ಖಾಸಗಿ ಕೈಗಾರಿಕೆಗಳಿಗೆ ಆದ್ಯತೆ ಇರುತ್ತದೆ. ಅಗ್ನಿವೀರರಾಗಿ 4 ವರ್ಷ ಸೇವೆ ಸಲ್ಲಿಸಿ ನಿವೃತ್ತಿಯಾದಾಗ ತಿಂಗಳ ಸಂಬಳ ಸೇರಿ ಒಟ್ಟು 23.43 ಲಕ್ಷ ಸಿಗಲಿದ್ದು, ಈ ಸತ್ಯವನ್ನು ಕಾಂಗ್ರೆಸ್‌ನವರು ಮರೆಮಾಚಿ ಅಗ್ನಿಪಥ್ ಯೋಜನೆಯಿಂದ ನಿರುದ್ಯೋಗ ಹೆಚ್ಚಳವಾಗುತ್ತದೆ ಎಂದು ಸುಳ್ಳುಸುದ್ದಿ ಬಿಂಬಿಸುತ್ತಿದ್ದಾರೆ ಎಂದು ದೂರಿದರು.

ಸುದ್ದಿಗೋಷ್ಠಿಯಲ್ಲಿ ಯುವ ಮೋರ್ಚಾ ಉಪಾಧ್ಯಕ್ಷ ಸಿ.ಬಿ.ಹುಂಡಿ ಸಿದ್ದೇಶ್, ಬಿಜೆಪಿ ಮುಖಂಡರಾದ ವಾಟಾಳು ಜಿ.ಎಸ್.ಪುಟ್ಟಸ್ವಾಮಿ, ನಾಗರಾಜು, ಎಂ.ಬಿ.ಹರೀಶ್‌ಗೌಡ ಇದ್ದರು.

ಮುಳ್ಳೂರು ನೀರು ಬಳಕೆದಾರರ ಸಂಘಕ್ಕೆ ಆಯ್ಕೆ

ಹುಣಸೂರು, ಜೂ.30(ಕೆಕೆ)– ತಾಲೂಕು ಮುಳ್ಳೂರು ನೀರು ಬಳಕೆದಾರರ ಸಂಘದ ಅಧ್ಯಕ್ಷರಾಗಿ 4ನೇ ಬಾರಿ ಎನ್.ಮಹದೇವ ಅವರು ಆಯ್ಕೆಯಾಗಿದ್ದು, ಉಪಾಧ್ಯಕ್ಷರಾಗಿ ದೇವರಾಜು, ನಿರ್ದೇಶಕರಾಗಿ ಈಶಣ್ಣ, ನಾರಾಯಣಚಾರಿ, ರಾಜಯ್ಯ, ಯೋಗಣ್ಣ, ಕುಮಾರ್, ಮಾಧುರಾಂಯ್ ಹಾಗೂ ಶೋಭಬಾಯಿ, ಶಿವಮ್ಮ ಆಯ್ಕೆಯಾಗಿದ್ದಾರೆ ಎಂದು ಚುನಾವಣಾ ಅಧಿಕಾರಿ ಎಂ.ಆರ್. ಶಿವಕುಮಾರ್ ತಿಳಿಸಿದ್ದಾರೆ.

ಮಲ್ಲಣ್ಣ ನಿಧನ




ತಿ. ನರಸೀಪುರ, ಜೂ.30– ತಾಲೂಕಿನ ಶಂಭುದೇವನಪುರ ಗ್ರಾಮದ ಮಲ್ಲಣ್ಣ (55) ಗುರುವಾರ ನಿಧನರಾದರು. ಇವರು ಸುತ್ತೂರಿನ ಜೆಎಸ್‌ಎಸ್ ವಿದ್ಯಾರ್ಥಿನಿಲಯ ಹಾಗೂ ದಾಸೋಹ ಭವನದಲ್ಲಿ ಸೇವೆ ಸಲ್ಲಿಸಿದ್ದರು.

ಮೃತರು ತಾಯಿ, ಪತ್ನಿ, ಸಹೋದರರು, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗದವರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲ ತಿಳಿಸಿವೆ.

ಜಾಗತಿಕ ಲಿಂಗಾಯತ ಮಹಾಸಭಾದ ತಿ.ನರಸೀಪುರ ತಾಲೂಕು ಘಟಕ ಉದ್ಘಾಟನೆ

ಲಿಂಗಾಯತರ ಆಚರಣೆ, ಬಸವಾದಿ ಶರಣರ ವಿಚಾರಧಾರೆ ಪ್ರಚುರತೆಗೆ ಆದ್ಯತೆ



ತಿ.ನರಸೀಪುರ, ಜೂ.30(ಎಸ್‌ಕೆ)– ಜಾಗತಿಕ ಲಿಂಗಾಯತ ಮಹಾಸಭಾವು ಯಾರ ವಿರುದ್ಧವೂ ಸ್ಥಾಪನೆಯಾಗಿಲ್ಲ. ಬದಲಿಗೆ ಲಿಂಗಾಯತರ ಆಚರಣೆ ಮತ್ತು ಬಸವಾದಿ ಶರಣರ ವಿಚಾರಧಾರೆಗಳನ್ನು ಜಾಗತಿಕ ಮಟ್ಟದಲ್ಲಿ ತಲುಪಿಸಲು ಹುಟ್ಟಿಕೊಂಡಿರುವ ಮಹಾಸಭಾವಾಗಿದೆ ಎಂದು ಜಾಗತಿಕ ಲಿಂಗಾಯತ ಮಹಾಸಭಾದ ತಾಲೂಕು ಘಟಕದ ಗೌರವಾಧ್ಯಕ್ಷ ಬಸವಯೋಗಿ ಪ್ರಭು ಹೇಳಿದರು.

ಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆ ಎದುರಿನ ಜಾಗತಿಕ ಲಿಂಗಾಯತ ಮಹಾಸಭಾ ಕಚೇರಿಯ ಆವರಣದಲ್ಲಿ ನಡೆದ ಸಂಘದ ತಾಲೂಕು ಘಟಕದ ಉದ್ಘಾಟನೆ ಹಾಗೂ ಪದಗ್ರಹಣ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಲಿಂಗಾಯತ ಸಮಾಜದ ಸಮರ್ಥ ಒಳ ಪಂಗಡಗಳನ್ನು ಒಟ್ಟಾಗಿ ಸೇರಿಸಿ ಒಂದು ಗೌರವ ಸ್ಥಾನ ನೀಡಬೇಕು. ಸಮಾಜವನ್ನು ಆರ್ಥಿಕವಾಗಿ ಪ್ರಬಲವನ್ನಾಗಿ ಮಾಡುವ ನಿಟ್ಟಿನಲ್ಲಿ ಸಂಘ ಸ್ಥಾಪನೆಯಾಗಿದೆಯೇ ವಿನಃ ಯಾರ ವಿರುದ್ಧವಾಗಿಯೂ ಸ್ಥಾಪನೆಗೊಂಡ ಸಂಘವಲ್ಲ ಎಂದರು.

ಸ್ವತಂತ್ರವಾಗಿರುವ ವಿಚಾರಗಳನ್ನು, ವಚನಗಳನ್ನು ಹೊಂದಿರುವ ಲಿಂಗಾಯತ ಧರ್ಮಕ್ಕೆ 900 ವರ್ಷಗಳ ಇತಿಹಾಸವಿದ್ದರೂ, ಇಂದಿಗೂ ಧರ್ಮದ ಆಚರಣೆ ಮೇಲೆ ದಬ್ಬಾಳಿಕೆ ನಡೆಯುತ್ತಿರುವುದ ವಿಷಾದನೀಯ ಎಂದು ಬೇಸರ ವ್ಯಕ್ತಪಡಿಸಿದರು. ಕಾರ್ಯಕ್ರಮ ಉದ್ಘಾಟಿಸಿದ ಹೈಕೋರ್ಟ್‌ನ ವಿಶ್ರಾಂತ ನ್ಯಾಯಾಧೀಶ ಅರಳಿ ನಾಗರಾಜ್ ಮಾತನಾಡಿ, 12ನೇ ಶತಮಾನದಿಂದಲೂ ಲಿಂಗಾಯತ ಧರ್ಮದ ಮೇಲೆ ನಿರಂತರ ದಬ್ಬಾಳಿಕೆ ನಡೆಯುತ್ತಲೇ ಇದೆ. ಸಂವಿಧಾನದಲ್ಲಿ ಹಾಗೂ ಸರ್ವೋಚ್ಛ ನ್ಯಾಯಾಲಯದ ತೀರ್ಪಿನಲ್ಲೂ ಲಿಂಗಾಯತ ಧರ್ಮವೆಂದು ನಮೂದಿಸಿದ್ದರೂ ಲಿಂಗಾಯತ ಧರ್ಮದಲ್ಲಿರುವ ಒಡಕು ಹಾಗೂ ರಾಜಕೀಯ ತಿಕ್ಕಾಟದಿಂದ ಸ್ವಾತಂತ್ರ್ಯ, ಧರ್ಮದ ಮಾನ್ಯತೆ ಪಡೆಯಲು ಸಾಧ್ಯವಾಗಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಜಾಗತಿಕ ಲಿಂಗಾಯತ ಮಹಾಸಭಾದ ಜಿಲ್ಲಾಧ್ಯಕ್ಷ ಶರಣ ಮಹದೇವಪ್ಪ, ಉಪಾಧ್ಯಕ್ಷ ವಿ.ಶಿವಮಲ್ಲಪ್ಪ, ಬಸವತತ್ವ ಪ್ರಚಾರಕ ಲಿಂಗರಾಜಪ್ಪ, ತಾಲೂಕು ಘಟಕದ ಅಧ್ಯಕ್ಷ ಕೆ.ಜಿ.ಶಿವಪ್ರಸಾದ್, ಉಪಾಧ್ಯಕ್ಷ ಕೆ.ವಿ.ಸುರೇಶ್, ಕಾರ್ಯದರ್ಶಿ ನಾಗರಾಜು, ಚಾಮರಾಜನಗರ ಜಿಲ್ಲಾಧ್ಯಕ್ಷ ಗುರುಸ್ವಾಮಿ, ಜಿಲ್ಲಾ ಕಾರ್ಯದರ್ಶಿ ಮರಪ್ಪ, ತಾಯೂರು ಪ್ರಕಾಶ್, ದಸಂಸ ಚಂದ್ರಶೇಖರ್, ಕೊತ್ತೇಗಾಲ ಮಹೇಶ್‌ಕುಮಾರ್, ಕೆಬ್ಬೇಹುಂಡಿ ಸೋಮಶೇಖರಪ್ಪ, ಶಂಭುದೇವನಪುರ ರವಿ, ತೊಟ್ಟವಾಡಿ ನಟರಾಜು, ರವಿ, ಕೇಬಲ್ ರಾಜಶೇಖರ, ಡಿ.ಎಲ್.ಮಹದೇವಪ್ಪ ಕು.ಶಿ. ಭೃಂಗೀಶ್, ಮುಡುಕನಪುರ ಬಸವರಾಜಪ್ಪ ರಘು, ನಂಜುಂಡಸ್ವಾಮಿ, ಹಿರಿಯೂರು ವಿರೂಪಾಕ್ಷ ಬನ್ನಳ್ಳಿಹುಂಡಿ ಶಿವಕುಮಾರ್, ಹೆಮ್ಮಿಗೆ ಗಂಗಾಧರ್, ಶಿವಲಿಂಗಪ್ಪ ಮತ್ತಿತರರಿದ್ದರು.

ದೇವನೂರು ಗ್ರಾಪಂಗೆ ಅಧ್ಯಕ್ಷೆಯಾಗಿ ಪದ್ಮಾ ಆಯ್ಕೆ



ದೇವನೂರು, ಜೂ.30(ಮೋಹನ್)– ನಂಜನಗೂಡು ತಾಲೂಕಿನ ದೇವನೂರು ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಪದ್ಮಾ ಮಹದೇವ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪಂಚಾಯಿತಿ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ ಪದ್ಮಾ ಮಹದೇವ್ ಒಬ್ಬರೇ ನಾಮಪತ್ರವನ್ನು ಸಲ್ಲಿಸಿದ್ದರು. ಹಾಗಾಗಿ, ಅವಿರೋಧ ಆಯ್ಕೆಯನ್ನು ಚುನಾವಣಾ ಅಧಿಕಾರಿ ಸಿಡಿಪಿಓ ಮಂಜುಳಾ ಘೋಷಿಸಿದರು.

ಈ ವೇಳೆ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು. ನೂತನ ಅಧ್ಯಕ್ಷರಿಗೆ ಅಭಿನಂದಿಸಲಾಯಿತು. 21 ಸದಸ್ಯ ಬಲ ಹೊಂದಿರುವ ಪಂಚಾಯಿತಿಯಲ್ಲಿ 13 ಮಂದಿ ಸದಸ್ಯರು ಚುನಾವಣೆಯಲ್ಲಿ ಭಾಗಿಯಾಗಿದ್ದು ಉಳಿದ ಸದಸ್ಯರು ಗೈರಾಗಿದ್ದರು. ತಾಪಂ ಮಾಜಿ ಉಪಾಧ್ಯಕ್ಷ ಸಿ.ಎಂ. ಮಹದೇವಯ್ಯ, ಮುಖಂಡರಾದ ದೇವನೂರು ಶಾಂತಪ್ಪ, ಚಂದ್ರಪ್ಪ, ಪುಟ್ಟಸುಬ್ಬಪ್ಪ, ನಿವೃತ್ತ ಶಿಕ್ಷಕ ಚನ್ನಬಸಪ್ಪ, ಮಹೇಶ್, ಶಶಿಧರ್, ಗ್ರಾಪಂ ಮಾಜಿ ಅಧ್ಯಕ್ಷ ಸಿ.ಎಂ. ನಾಗರ್ಜುನ್, ಸದಸ್ಯರಾದ ದೇವನೂರು ಬಸಪ್ಪ, ಅವಿನಾಶ್, ಮಂಜುಳಾ, ಶೇಖರಪ್ಪ, ಮಲ್ಲೇಶ್, ರವಿ, ರವಿಕುಮಾರ್, ಚಿಕ್ಕಕವಲಂದೆ ಮಂಜು ಇನ್ನಿತರರು ಇದ್ದರು.

ಮಾದಪ್ಪನ ದೇವಸ್ಥಾನದಲ್ಲಿ ವಿಶೇಷ ಪೂಜೆ



ಸರಗೂರು, ಜೂ.30(ನಾಗೇಶ್)– ತಾಲೂಕಿನ ಕಂದೇಗಾಲ ಶ್ರೀಮಹದೇಶ್ವರ ದೇವಸ್ಥಾನದಲ್ಲಿ ಅಮಾವಾಸ್ಯೆ ಪೂಜೆ ನಡೆಯಿತು. ಬೆಳಗ್ಗೆಯಿಂದಲೇ ಹೋಮ, ಹವನ ಸೇರಿದಂತೆ ವಿಶೇಷ ಪೂಜಾ ಕೈಂಕರ್ಯ ನೆರವೇರಿಸಲಾಯಿತು. ನಂತರ ಭಕ್ತರಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು ಬಿಜೆಪಿ ಮುಖಂಡ ಹೆಚ್.ವಿ.ಕೃಷ್ಣಸ್ವಾಮಿ, ಪಪಂ ಅಧ್ಯಕ್ಷೆ ರಾಧಿಕಾ ಶ್ರೀನಾಥ್, ಮುಖಂಡರಾದ ಮೊತ್ತ ಬಸವರಾಜು, ನಟರಾಜು, ಮಹದೇವ, ಗುರುಸ್ವಾಮಿ, ಸುನಂದರಾಜು, ಮಂಜುಳಾ, ಮಹದೇವಮ್ಮ, ಜಯಲಕ್ಷ್ಮೀ, ಸರಸ್ವತಿ, ಬಸವರಾಜಪ್ಪ, ಸೋಮಣ್ಣ ರಾಜಪ್ಪ ಮಂಜುನಾಥ್, ರಾಜು, ಶಿವಕುಮಾರ್, ರಾಜೇಶ್, ಗೋಪಾಲಯ್ಯ, ಮಲ್ಲೇಗೌಡ, ಕಾಶಿಪತಿ ಇದ್ದರು.

ಮೈಸೂರು ವಿವಿಯಲ್ಲಿ ಕ್ಲಿನಿಕಲ್ ರಿಪ್ರೊಡಕ್ಷನ್ ಜೆನೆಟಿಕ್ಸ್ ಎಂಎಸ್ಸಿ ಪದವಿ ಕೋರ್ಸ್ ಪ್ರಾರಂಭ



ಶೈಕ್ಷಣಿಕ ಮಂಡಳಿ ಸಭೆ ಸಮ್ಮತಿ

ಮೈಸೂರು, ಜೂ.30(ಆರ್‌ಕೆ)-ಪ್ರಸಕ್ತ ಶೈಕ್ಷಣಿಕ ಸಾಲಿನಿಂದ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕ್ಲಿನಿಕಲ್ ಜೆನೆಟಿಕ್ಸ್ ವಿಷಯದ ಪದವಿ ಕೋರ್ಸ್ ಆರಂಭಿಸಲು ಶೈಕ್ಷಣಿಕ ಮಂಡಳಿಯು ಸಮ್ಮತಿ ನೀಡಿದೆ.

ಮೈಸೂರಿನ ಮಾನಸ ಗಂಗೋತ್ರಿಯಲ್ಲಿರುವ ವಿಜ್ಞಾನ ಭವನದಲ್ಲಿ ಕುಲಪತಿ ಪ್ರೊ. ಜಿ.ಹೇಮಂತ್ ಕುಮಾರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ 4 ಸೆಮಿಸ್ಟರ್‌ನ ಎಂ.ಎಸ್ಸಿ ಕೋರ್ಸ್ ಆರಂಭಿಸುವ ಮೂಲಕ ಕ್ಲಿನಿಕಲ್ ರಿಪ್ರೊಡಕ್ಷನ್ ಜೆನೆಟಿಕ್ಸ್ ವಿಷಯದಲ್ಲಿ ಪದವಿ ನೀಡಲು ಸದಸ್ಯರು ಒಪ್ಪಿಗೆ ಸೂಚಿಸಿದರು.

ಮೆಡಿವೇವ್ ಐವಿಎಫ್ ಮತ್ತು ಫರ್ಟಿಲಿಟಿ ರೀಸರ್ಚ್ ಸಂಸ್ಥೆ ಹಾಗೂ ಜೆನೆಟಿಕ್ಸ್ ಅಂಡ್ ಜೆನೋಮಿಕ್ಸ್ ಅಧ್ಯಯನ ವಿಭಾಗದ ಸಹಯೋಗದಲ್ಲಿ ಎಂ.ಎಸ್ಸಿ ಪದವಿ ಕೋರ್ಸ್ ಆರಂಭಿಸುವುದು ಹಾಗೂ ಡಿಫೆನ್ಸ್ ಅಂಡ್ ಸ್ಟ್ರಾಟ್‌ಜಿಕ್ ಸ್ಟಡೀಸ್‌ನಲ್ಲಿ ಎಂ.ಎ. ಪದವಿ ಕೋರ್ಸ್ ಅನ್ನು ಆರಂಭಿಸಲು ಸಭೆಯು ತೀರ್ಮಾನಿಸಿತು.

ಕೋವಿಡ್‌ನಿಂದಾಗಿ ಎರಡು ವರ್ಷಗಳಿಂದ ವೇಳಾಪಟ್ಟಿ ಮುಂದೂಡಿರುವುದರಿಂದ ಅದನ್ನು ಸರಿದೂಗಿಸಲು ಪ್ರಸಕ್ತ ಸಾಲಿನಿಂದಲೇ ಅನ್ವಯವಾಗುವಂತೆ 5ನೇ ಸೆಮಿಸ್ಟರ್ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮಾತ್ರ ಮೇಕಪ್ ಪರೀಕ್ಷೆ ನಡೆಸಿ 6ನೇ ಸೆಮಿಸ್ಟರ್ ಪರೀಕ್ಷೆ ರದ್ದುಪಡಿಸಲು ಸಭೆಯು ನಿರ್ಧರಿಸಿತು. ಗಡಿ ಭಾಗದ ತಮಿಳ್ನಾಡಿನ ತಾಳವಾಡಿ ಕನ್ನಡ ಮಾಧ್ಯಮ ಶಾಲೆಯಲ್ಲಿ ಓದಿದವರು ಉನ್ನತ ವ್ಯಾಸಂಗಕ್ಕಾಗಿ ಕರ್ನಾಟಕಕ್ಕೆ ಬಂದರೆ ಬಿ.ಎಡ್., ಎಂ.ಎ., ಎಂ.ಎಡ್., ಪಿಹೆಚ್.ಡಿ, ಪದವಿಯಲ್ಲಿ ಉಚಿತ ಶಿಕ್ಷಣ ನೀಡುವುದು, ಕೋವಿಡ್‌ನಿಂದಾಗಿ ಸ್ವಸ್ಥಳಗಳಿಗೆ ಹಿಂದಿರುಗಿರುವ ಚೈನೀಸ್ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಪರೀಕ್ಷೆ ನಡೆಸಲು ಮೈಸೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿ ಸಭೆಯು ಅನುಮತಿ ನೀಡಿದೆ.

ಕಾನೂನು ನಿಕಾಯದಡಿ ಬಿ.ಕಾಂ., ಎಲ್.ಎಲ್.ಬಿ. ಕೋರ್ಸ್‌ಗಳನ್ನು ಅನುಮತಿ ಪಡೆಯದೇ ತರಗತಿ ನಡೆಸುತ್ತಿದ್ದು, ವಿದ್ಯಾರ್ಥಿಗಳ ಭವಿಷ್ಯದ ಮೇಲೆ ಚೆಲ್ಲಾಟವಾಡಿದಂತಾಗುವುದಿಲ್ಲವೇ ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಅವರು ಪ್ರಶ್ನಿಸಿದಾಗ ಪ್ರತಿಕ್ರಿಯಿಸಿದ ಕುಲಪತಿ ಪ್ರೊ.ಹೇಮಂತ್‌ಕುಮಾರ್, ಬಾರ್ ಕೌನ್ಸಿಲ್ ಆಫ್ ಇಂಡಿಯಾ ಬಿ.ಎ., ಎಲ್.ಎಲ್.ಬಿ.ಗೆ ಅನುಮತಿ ನೀಡಿತ್ತು. ನಾನು ಕುಲಪತಿ ಆಗುವ ಮುಂಚೆಯೇ ಬಿ.ಕಾಂ., ಎಲ್.ಎಲ್.ಬಿ.ಗೆ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿತ್ತು. ಈಗ ಅನುಮತಿಗಾಗಿ ಕೋರಿಕೊಳ್ಳಲಾಗಿದೆ ಎಂದು ವಿವರಿಸಿದರು.

ಎ-ಪ್ಲಸ್‌ನಲ್ಲಿದ್ದ ಮೈಸೂರು ವಿಶ್ವವಿದ್ಯಾನಿಲಯವು ಏಕಾಏಕಿ 'ಎ' ಗ್ರೇಡ್‌ಗಿಳಿಯಲು ಕಾರಣ ಏನು ಎಂದು ಪ್ರಶ್ನಿಸಿದ ಮಂಜೇಗೌಡರು, ಶಿಕ್ಷಣದ ಗುಣಮಟ್ಟ ಹೆಚ್ಚಿಸಬೇಕೆಂದು ಸಲಹೆ ನೀಡಿದರು. ಅದಕ್ಕೆ ಉತ್ತರಿಸಿದ ಕುಲಪತಿಗಳು, ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಪ್ರಾಧ್ಯಾಪಕರಿಲ್ಲ. ಅತಿಥಿ ಉಪನ್ಯಾಸಕರಿಂದ ಪಾಠ ಮಾಡಿಸಿಕೊಳ್ಳುತ್ತಿರುವುದು ಅದಕ್ಕೆ ಕಾರಣವಾಗಿದ್ದು, ಪ್ರಾಧ್ಯಾಪಕರ ನೇಮಕವಾದಲ್ಲಿ ಎಲ್ಲವೂ ಸರಿಯಾಗುತ್ತದೆ ಎಂದರು.

ಪ್ರಸಕ್ತ ಸಾಲಿನಿಂದ ಡಿ-ಫಾರ್ಮಾ ಕಾಲೇಜು ಆರಂಭಿಸಲು ಕ್ರಮ ವಹಿಸಲಾಗಿದೆ. ವೈದ್ಯಕೀಯ ಕಾಲೇಜು ತೆರೆಯಲು 25 ಎಕರೆ ಜಾಗದ ಅಗತ್ಯವಿದೆ. ಉನ್ನತ ಶಿಕ್ಷಣ ಸಚಿವರೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳೋಣ ಎಂದು ಮತ್ತೊಂದು ಪ್ರಶ್ನೆಗೆ ಪ್ರೊ. ಹೇಮಂತ ಕುಮಾರ್ ಉತ್ತರಿಸಿದರು.

ಮಹಾರಾಜ, ಯುವರಾಜ, ಸಂಜೆ ಕಾಲೇಜು, ಲಲಿತಕಲಾ ಕಾಲೇಜು ಸೇರಿದಂತೆ ವಿವಿಧ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ವೃಂದವಾರು ಪ್ರಾಂಶುಪಾಲರನ್ನು 3 ವರ್ಷಕ್ಕೊಮ್ಮೆ ಬದಲಿಸುವುದು ಎಂದು ಸಭೆಯು ತೀರ್ಮಾನಿಸಿತು. ಕುಲಸಚಿವ ಪ್ರೊ. ಆರ್.ಶಿವಪ್ಪ, ಪರೀಕ್ಷಾಂಗ ಕುಲಸಚಿವ ಪ್ರೊ. ಎ.ಪಿ.ಜ್ಞಾನಪ್ರಕಾಶ್, ಪ್ರೊ. ಬಸವರಾಜಪ್ಪ, ಪ್ರೊ. ಮುಜಾಫರ್ ಅಸಾದಿ ಸೇರಿದಂತೆ ಹಲವರು ಸಭೆಯಲ್ಲಿ ಉಪಸ್ಥಿತರಿದ್ದರು.



ಭಾರತೀಯ ಜೀವ ವಿಮಾ ನಿಗಮದ ಮೈಸೂರು ಶಾರದಾದೇವಿನಗರ ಶಾಖೆಯ ಅಭಿವೃದ್ಧಿ ಅಧಿಕಾರಿ ಬೂಕನಕೆರೆ ವಿಜೇಂದ್ರ ಗುರುವಾರ ವಯೋನಿವೃತ್ತಿ ಹೊಂದಿದರು. ಈ ವೇಳೆ ಅವರನ್ನು ಹಿರಿಯ ವಿಭಾಗಾಧಿಕಾರಿ ಸತ್ಯನಾರಾಯಣ ಶಾಸ್ತ್ರಿ, ಎಸ್‌ಟಿಸಿ ಪ್ರಿನ್ಸಿಪಾಲ್ ವೆಂಕಟರಮಣ ಶೀರೂರ್, ಶಾಖಾಧಿಕಾರಿ ಕೆ.ಎನ್. ಕಾಂತರಾಜಪ್ಪ ಸೇರಿದಂತೆ ಶಾಖೆಯ ಸಿಬ್ಬಂದಿ ವರ್ಗ ಆತ್ಮೀಯವಾಗಿ ಬೀಳ್ಕೊಟ್ಟರು.

ವಚನ ಸಾಹಿತ್ಯ ಸಂರಕ್ಷಣೆ ದಿನ: ಪೂರ್ವಭಾವಿ ಸಭೆ

ಮೈಸೂರು,ಜೂ.30-ಡಾ.ಫ.ಗು ಹಳಕಟ್ಟಿಯವರ ಜನ್ಮದಿನವನ್ನು ವಚನ ಸಾಹಿತ್ಯ ಸಂರಕ್ಷಣಾ ದಿನವನ್ನಾಗಿ ಆಚರಿಸುವ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಡಾ.ಮಂಜುನಾಥ್ ಸ್ವಾಮಿ ತಿಳಿಸಿದರು.

ಡಿಸಿ ಕಚೇರಿ ಸಭಾಂಗಣದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಜು.2ರಂದು ಬೆಳಗ್ಗೆ 11 ಗಂಟೆಗೆ ಮೈಸೂರು ವಿವಿ ಕನ್ನಡ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಬಿ.ಎಂ.ಶ್ರೀ ಸಭಾಂಗಣದಲ್ಲಿ ಡಾ.ಫ.ಗು ಹಳಕಟ್ಟಿಯವರ ಜನ್ಮದಿನವನ್ನು ವಚನ ಸಾಹಿತ್ಯ ಸಂರಕ್ಷಣಾ ದಿನವನ್ನಾಗಿ ಆಚರಿಸಲಾಗುವುದು ಎಂದರು. ಕನ್ನಡ-ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಸುದರ್ಶನ್ ಇದ್ದರು.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಹೆಚ್. ಬಾಷ ರವರ ಮಗನಾದ ಹೆಚ್. ಖಯ್ಯುಂ ಅಹಮ್ಮದ್ ರವರು ಈ ಕೆಳಗೆ ನಮೂದಿಸಿರುವ ಸ್ವತ್ತಿನ ಮಾಲೀಕರಾಗಿದ್ದು, ಸದರಿ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ-ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 07 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಬಹುದಾಗಿದೆ. ತಪ್ಪಿದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ-ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ಎನ್.ಆರ್. ಮೊಹಲ್ಲಾ, (ರಾಜೀವನಗರ) ದೇವನೂರು ಬಡಾವಣೆ, 2ನೇ ಹಂತದಲ್ಲಿರುವ, ಖಾಲಿ ನಿವೇಶನ ಸಂಖ್ಯೆ 3197 ರ ಸ್ವತ್ತಿನ ವಿಸ್ತೀರ್ಣ ಪೂರ್ವ-ಪಶ್ಚಿಮ 18 ಮೀಟರ್‌ಗಳು ಮತ್ತು ಉತ್ತರ-ದಕ್ಷಿಣ 12 ಮೀಟರ್‌ಗಳು, ಒಟ್ಟು ವಿಸ್ತೀರ್ಣ 216 ಚದರ ಮೀಟರ್‌ಗಳುಳ್ಳ ಸ್ವತ್ತಿಗೆ ಚಕ್ಕುಬಂದಿ ಪೂರ್ವಕ್ಕೆ: ನಿವೇಶನ ಸಂಖ್ಯೆ 3186, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ನಿವೇಶನ ಸಂಖ್ಯೆ 3196 ಮತ್ತು ದಕ್ಷಿಣಕ್ಕೆ: ನಿವೇಶನ ಸಂಖ್ಯೆ 3198.

ಸಹಿ/- ಶ್ರೀಲತಾ ದೀಕ್ಷಿತ್, ವಕೀಲರು,
ಎಸ್‌ಎಲ್‌ಡಿ ಲಾ ಫರ್ಮ್,
ನಂ.1458/ಎ, ನಾರಾಯಣಶಾಸ್ತ್ರಿ ರಸ್ತೆ,
ಸಪ್ನ ಬುಕ್ ಹೌಸ್ ಸಮೀಪ, ಮೈಸೂರು.
ಮೊ: 98446 40641
Email: sldlawfirm2021@gmail.com

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಲೇಟ್ ಜೀವನ್ ರಾವ್ ರವರ ಧರ್ಮಪತ್ನಿಯಾದ ಶ್ರೀಮತಿ ಮೀನಾ ಎ. ಉರುಫ್ ಮೀನಾ ರವರು ಈ ಕೆಳಗೆ ನಮೂದಿಸಿರುವ ಸ್ವತ್ತಿನ ಮಾಲೀಕರಾಗಿದ್ದು, ಸದರಿ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ-ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 07 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಬಹುದಾಗಿದೆ. ತಪ್ಪಿದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ-ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ಎನ್.ಆರ್. ಮೊಹಲ್ಲಾ, ದೇವನೂರು ಬಡಾವಣೆ (ರಾಜೀವ ನಗರ), 3ನೇ ಹಂತದಲ್ಲಿರುವ, ಖಾಲಿ ನಿವೇಶನ ಸಂಖ್ಯೆ 350 [ಮುಡಾ ಪಿಐಡಿ ನಂ. 11153] ರ ಸ್ವತ್ತಿನ ವಿಸ್ತೀರ್ಣ ಪೂರ್ವ-ಪಶ್ಚಿಮ 18 ಮೀಟರ್‌ಗಳು ಮತ್ತು ಉತ್ತರ-ದಕ್ಷಿಣ 12 ಮೀಟರ್‌ಗಳು, ಒಟ್ಟು ವಿಸ್ತೀರ್ಣ 216.00 ಚದರ ಮೀಟರ್‌ಗಳುಳ್ಳ ಸ್ವತ್ತಿಗೆ ಚಕ್ಕುಬಂದಿ ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ನಿವೇಶನ ಸಂಖ್ಯೆ 347 ಉತ್ತರಕ್ಕೆ: ನಿವೇಶನ ಸಂಖ್ಯೆ 351 ಮತ್ತು ದಕ್ಷಿಣಕ್ಕೆ: ನಿವೇಶನ ಸಂಖ್ಯೆ 349.

ಸಹಿ/- ಶ್ರೀಲತಾ ದೀಕ್ಷಿತ್, ವಕೀಲರು,
ಎಸ್‌ಎಲ್‌ಡಿ ಲಾ ಫರ್ಮ್,
ನಂ.1458/ಎ, ನಾರಾಯಣಶಾಸ್ತ್ರಿ ರಸ್ತೆ,
ಸಪ್ನ ಬುಕ್ ಹೌಸ್ ಸಮೀಪ, ಮೈಸೂರು.
ಮೊ: 98446 40641
Email: sldlawfirm2021@gmail.com

IN THE COURT OF THE ADDL CIVIL JUDGE AND JMFC AT MADIKERI
CR.M.C.NO.11/2022
Petitioner : Ananda Kumar K.V. and others
V/s
Respondents : The Tahasildar, Somwarpet

NOTICE

Take notice that the petitioner has filed the above case to obtain death certificate of his grand mother Girijamma @ Nagu of Athur Nallur Village, who died on 08.04.1953 and the said case stands posted today. 20-07-22.

Whoever having any objection to the above petition may appear before this Hon'ble court in person or through their counsel on 20-07-22 at 11.00 a.m failing which the case will be disposed of as per law.

Madikeri
28.06.2022

By Order of the Court
Sd/- Chief Ministerial Officer
Civil Judge and JMFC Court.
Madikeri

Sd/- P.M.Chengappa
Advocate,
Poomale Estate, Ikola Village,
Murnad. 9900372995

PUBLIC NOTICE

Under Instruction of my client Sri. K.R.Shanthamurthy, Son of Late K Rajagopal and Late K.Rajammal, residing at No.6, Adi Pampa Road, V.V.Mohalla, Mysore-02. dohereby notify the General Public that Sri. Siddaramu, S/o Late Chikkanna, residing at D.No.371/1, D.Subbaiah Road Cross, Chamaraja Mohalla, Mysore, has filed a Case No. O.S.481/2019 before the V Additional I Civil Judge Court at Mysore, against me and another in respect of Schedule Property and this case is pending for adjudication before the said Hon'ble Court. My client is the absolute owner and in absolute possession of the Schedule Property. It has come to the knowledge of my client that Sri. Siddaramu is trying to sell/Alienate/Transact the Schedule Property.

Therefore, if any person/s deals/transacts/purchase the schedule property he/she/they will be dealing / transacting at his/her/their own risk, cost and consequences.

Schedule Property

Land bearing Sy.No. 70, measuring total extent of 0.17 guntas, situated at Mysore Village, Kasaba Hobli, Mysore Taluk and District, bounded on East: Road, Leading to Chamundi Hills, West: Road, Leading to Mysore to Nanjangud Called as Ooty Road, North: Skew Point with touches both the Ooty Road and the Road leading to Chamudi Hill, South: Sy.No.71.

Sd/- Madhubala R. Mehta
Advocate and Notary, Key -Ans Law Solutions,
Door No. 2765/A1, D13/A1, 5th Main Road,
V.V.Puram (V.V.Mohalla), Mysore-570002.
Date: 30.06.2022

ನಾಲ್ಕನೇ ವರ್ಷದ ಸವಿನೆನಪು
ಶ್ರೀ ಧರ್ಮಲಿಂಗಾಚಾರ್
ನಿಧನ: 1.7.2018
ಸದಾ ನಿಮ್ಮ ನೆನಪಿನಲ್ಲಿರುವ
ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು, ಕೆ.ಜಿ.ಕೊಪ್ಪಲು, ಮೈಸೂರು

9ನೇ ವರ್ಷದ ಸವಿನೆನಪು
ನೀವು ನಮ್ಮನ್ನಗಲಿ ಇಂದಿಗೆ 9 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ
ದುಃಖತಪ್ತರು: ಕುಟುಂಬವರ್ಗದವರು
ಎಂ.ಎಸ್.ಮುನಿಯಮ್ಮ (ಮೋಣಿಕಮ್ಮ)